ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೨–೧೩ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ಸಂಪ್ರಬಂಧ

"ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ"

ನಿಬಂಧಕಾರರು

ಶಿವಕುಮಾರ ಸ್ವಾಮಿ .ಎನ್

ನೋಂದಣಿ ಸಂಖ್ಯೆ : KVTMKS - 00605

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ.)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎನ್.ಮಹೇಶ್ವರಿ

ಮಾರ್ಗದರ್ಶಕರು ಹಾಗೂ ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಜೆ.ಎಸ್.ಎಸ್. ಕಾಲೇಜು
ಚಾಮರಾಜನಗರ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೨ – ೧೩

[illegible]

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೨–೧೩ನೇ ಸಾಲಿನ ಎಂ.ಫಿಲ್ ಪದವಿಯ ಪರೀಕ್ಷೆಗೆ ಸಂಬಂಧಿಸಿದಂತೆ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ಸಂಪ್ರಬಂಧ

"ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ"

ನಿಬಂಧಕಾರರು

ಶಿವಕುಮಾರ ಸ್ವಾಮಿ .ಎನ್

ನೋಂದಣಿ ಸಂಖ್ಯೆ : KVTMKS - 00605

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ.)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎನ್.ಮಹೇಶ್ವರಿ

ಮಾರ್ಗದರ್ಶಕರು ಹಾಗೂ ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಜೆ.ಎಸ್.ಎಸ್. ಕಾಲೇಜು
ಚಾಮರಾಜನಗರ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೨ – ೧೩

ಅಭ್ಯರ್ಥಿಯ ಘೋಷಣಾ ಪತ್ರ

"ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮಸಂಖ್ಯೆ KVTMKS-00605 ವಿದ್ಯಾರ್ಥಿ ಆದ ನಾನು ೨೦೧೨-೧೩ನೇ ಸಾಲಿನ ಪರೀಕ್ಷೆಗಾಗಿ **ಡಾ. ಎನ್.ಮಹೇಶ್ವರಿ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆ.ಎಸ್.ಎಸ್. ಕಾಲೇಜು, ಚಾಮರಾಜನಗರ** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Shivakumara Swamy.N

(ಶಿವಕುಮಾರ ಸ್ವಾಮಿ.ಎನ್)

ಸ್ಥಳ: ಮೈಸೂರು

ದಿನಾಂಕ: ೨೨-೦೭-೨೦೧೩

ಸ್ಥಳ/ದಿನಾಂಕ ಬಲಭಾಗ:

೨೦೧೨-೧೩ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು.

ದೃಢೀಕರಣ ಪ್ರಮಾಣಪತ್ರ

೨೦೧೨–೧೩ನೇ ಸಾಲಿನಲ್ಲಿ ಕ್ರಮಸಂಖ್ಯೆ KVTMKS-00605ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ಶಿವಕುಮಾರ ಸ್ವಾಮಿ ಎನ್.** ಅವರು ನನ್ನ ಮಾರ್ಗದರ್ಶನದಲ್ಲಿ **"ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಳಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೨೨-೦೭-೨೦೧೩

(ಡಾ. ಎನ್.ಮಹೇಶ್ವರಿ)
ಮಾರ್ಗದರ್ಶಕರು ಹಾಗೂ ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಜೆ.ಎಸ್.ಎಸ್. ಕಾಲೇಜು
ಚಾಮರಾಜನಗರ

ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ

ಪ ರಿ ವಿ ಡಿ

ಪುಟ ಸಂಖ್ಯೆ

ಅಧ್ಯಾಯ ಒಂದು ೧–೩

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ಎರಡು ೪–೧೦

ಬೇಂದ್ರೆಯವರ ಬದುಕು ಬರೆಹ

ಅಧ್ಯಾಯ ಮೂರು ೧೧–೧೬

ಮಾನವ ಮತ್ತು ಪ್ರಕೃತಿ ಸಂಬಂಧ

- ವಿವಿಧ ರೂಪದಲ್ಲಿ ಪ್ರಕೃತಿ
- ಪ್ರಕೃತಿಯ ಸೌಂದರ್ಯ ಮತ್ತು ಕ್ರೌರ್ಯ

ಅಧ್ಯಾಯ ನಾಲ್ಕು ೧೭–೩೭

ಸಾಹಿತ್ಯದಲ್ಲಿ ಪ್ರಕೃತಿ

- ➢ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿ
- ❖ ಅಷ್ಟದಳ ವರ್ಣನೆಗಳ ಅಂಗವಾಗಿ ಪ್ರಕೃತಿ
  - ಕಾಡು ಕಡಲಿನ ವರ್ಣನೆ
  - ಋತು ವರ್ಣನೆ
  - ಸೂರ್ಯ, ಚಂದ್ರ ವರ್ಣನೆ
- ➢ ಕನ್ನಡ ನವೋದಯ ಕಾವ್ಯದಲ್ಲಿ ಪ್ರಕೃತಿ
- ➢ ಕನ್ನಡ ನವೋದಯ ಕವಿಗಳ ಮೇಲೆ ಆಂಗ್ಲ ರೋಮ್ಯಾಂಟಿಕ್ ಕಾವ್ಯದ ಪ್ರಭಾವ ಮತ್ತು ಅವರು ಅದನ್ನು ಮೀರಿ ಬೆಳೆದ ಬಗೆ

ಅಧ್ಯಾಯ ಐದು ೩೮–೧೧೮

ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ

- ➢ ಸೂರ್ಯೋದಯ ಗೀತೆಗಳು
- ➢ ಶ್ರಾವಣ ಮಾಸದ ಗೀತೆಗಳು
- ➢ ಪ್ರಕೃತಿ ಇತರೆ ಗೀತೆಗಳು

ಅಧ್ಯಾಯ ಅರು ೧೧೯–೧೨೧

ಉಪಸಂಹಾರ

ಪರಾಮರ್ಶನ ಗ್ರಂಥಗಳು ೧೨೨–೧೨೩

*****

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಕಾವ್ಯದ ಮೊದಲ ಘಟ್ಟದ ಅತ್ಯಂತ ಮಹತ್ವದ ಲೇಖಕರಲ್ಲಿ ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರೂ ಒಬ್ಬರಾಗಿದ್ದಾರೆ. ಇವರು ಹಲವಾರು ಕವನ ಸಂಕಲನಗಳು, ವಿಚಾರ ವಿಮರ್ಶೆ, ಕಥಾಸಂಕಲನ, ಹರಟೆ, ಅನುವಾದ ಹೀಗೆ ಒಟ್ಟು ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ನೀಡುವುದರ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಆದರೂ ಬೇಂದ್ರೆಯವರು ಕವಿಯಾಗಿಯೇ ಪ್ರಸಿದ್ಧರು. ಬೇಂದ್ರೆಯವರ ಕಾವ್ಯಕುರಿತು ಸಾಕಷ್ಟು ಅಧ್ಯಯನ ನಡೆದಿರುವುದಾದರೂ ಹೇಳಬೇಕಾದುದು ಉಳಿದೇ ಇದೆ ಎಂಬಂತೆ ಅವರ ಕಾವ್ಯವಿದೆ.

ಬೇಂದ್ರೆ ಯಾವುದೋ ನಿರ್ದಿಷ್ಟ ತತ್ತಕ್ಕಂಟಿಕೊಂಡವರಾಗಿರಲಿಲ್ಲ ಎಂದರೂ ಉಪನಿಷತ್ತುಗಳು, ಸಂಖ್ಯೆ, ಅನುಭವ, ಅರವಿಂದರು ಮತ್ತು ಪಾಶ್ಚಾತ್ಯ ಚಿಂತಕರಾದ ಎಮರ್ಸನ್‌ರವರ ವಿಚಾರಧಾರೆಗಳ ಪ್ರಭಾವಕ್ಕೆ ಅವರು ಒಳಗಾಗಿದ್ದು, ಭಾರತೀಯ ರಸ ಸಂಪ್ರದಾಯದಲ್ಲಿ ಅತೀವ ಶ್ರದ್ಧೆಯಿರಿಸಿಕೊಂಡ ಬೇಂದ್ರೆ 'ಕಾವ್ಯಮಾನಂದಾಯ'ವೆಂದೇ ನಂಬಿದ್ದರು. ಈ ದೃಷ್ಟಿಯಿಂದ ಬೇಂದ್ರೆಯವರಿಗೆ ಕಾವ್ಯ ಮತ್ತು ಜೀವನ ಬೇರೆ ಬೇರೆಯಾಗಿ ತೋರಲಿಲ್ಲ. ಬದುಕನ್ನು ಅವು ಎದುರಾಗುವ ರೀತಿಯಲ್ಲಿಯೇ ಪ್ರೀತಿಯಿಂದ ಸ್ವೀಕರಿಸುವ ದೃಷ್ಟಿ ಅವರಾಗಿತ್ತು. ಹೀಗಾಗಿ ಬದುಕಿನ ಎಲ್ಲಾ ಮುಖಗಳೂ ಅವರ ಕಾವ್ಯದಲ್ಲಿ ಮೂರ್ತಗೊಂಡಿವೆ. ಹಿಗ್ಗು–ಕುಗ್ಗು, ನೋವು–ನಲಿವು, ಪ್ರೀತಿ–ದ್ವೇಷ, ಪ್ರೇಮ–ಕಾಮ, ಬಡತನ–ಸಿರಿತನ, ಆಧ್ಯಾತ್ಮ, ಸೌಂದರ್ಯ, ಸೊಬಗು, ಪ್ರಕೃತಿ ಎಲ್ಲಾವನ್ನು ನೋಡತೊಡಗಿದ್ದಾರೆ. ಅವರ ಕಾವ್ಯದಲ್ಲಿ ಪ್ರಧಾನವಾಗಿ, ಗುಪ್ತಗಾಮಿನಿಯಾಗಿ ಹರಿದು ಬಂದಿರುವ 'ಪ್ರಕೃತಿ ವರ್ಣನೆ'ಯ ಶೋಧ ಪ್ರಸ್ತುತ ಸಂಶೋಧನೆಯ ಉದ್ದೇಶ. ಇದರ ವ್ಯಾಪ್ತಿಯೊಳಗೆ ಬರುವ ಪ್ರಕೃತಿಯ ನಾನಾ ಮುಖಗಳನ್ನು ಈ ನಿಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಬೇಂದ್ರೆ ಕಾವ್ಯದ ಅಧ್ಯಯನವೇ ಏಕೆಂಬ ಪ್ರಶ್ನೆ ಈ ಸಂದರ್ಭದಲ್ಲಿ ಬರಬಹುದು. ಯಾವುದೇ ಯುಗದ ಸೃಷ್ಟಿಯ ಹಾದಿಯು ಹತ್ತಾರು ಕವಿವರ್ಯರ ಸೃಜನಶೀಲ ಕೊಡುಗೆ. ಆದರೆ ಕೆಲವರಲ್ಲಿ ಮಾತ್ರ ಅದರ ನಿಚ್ಚಳ ಸ್ವರೂಪ ಕಾಣಿಸಿಕೊಳ್ಳುವುದು. ಪಂಪ, ಬಸವಣ್ಣ, ಕುಮಾರವ್ಯಾಸರಂತೆ ಆಧುನಿಕ ಕಾಲದಲ್ಲಿ ಬಿ.ಎಂ.ಶ್ರೀಯವರಲ್ಲಿ ಇಂಥ ಹೊಸತನದ ದಟ್ಟ ನೋಟವಿದೆ. ಬಿ.ಎಂ.ಶ್ರೀಯವರು

ಎಳೆದು ತಂದ ಈ ಹೊಸತನದ ಮಿಂಚನ್ನು ಬೇಂದ್ರೆ, ಕುವೆಂಪು, ಪುತಿನರವರು ಅಚ್ಚುಕಟ್ಟಾಗಿ ಮುಂದುವರಿಸಿ ಕನ್ನಡಕ್ಕೊಂದು ಸ್ವಂತಿಕೆ ನೆಲೆಯನ್ನು ನಿರ್ಮಾಣ ಮಾಡಿದ್ದಾರೆ. ಇವರಲ್ಲಿ ಬೇಂದ್ರೆಯವರ ಕೊಡುಗೆ ಅಪಾರವಾಗಿದ್ದು ಇವರು ಸಮಕಾಲೀನ ಪ್ರಪಂಚದ ಶ್ರೇಷ್ಠ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಇವರು ಇಂಥ ಶ್ರೇಷ್ಠರಾಗಿದ್ದುದರಿಂದಲೇ ಜ್ಞಾನಪೀಠ ಪ್ರಶಸ್ತಿಯೂ ಬಂದಿದೆ.

ಪ್ರಕೃತಿ ಎಂಬುದು ವಿಶ್ವವ್ಯಾಪಿಯಾಗಿದ್ದು ನಮ್ಮಲ್ಲಾಗುವ ಪ್ರತಿಯೊಂದು ಹೊಸತನಕ್ಕೂ ಪ್ರಕೃತಿಯೇ ಮೂಲವಾಗಿರುವುದರಿಂದ ಬೇಂದ್ರೆಯವರ ಕಾವ್ಯದಲ್ಲಿ ಪ್ರಕೃತಿಯ ಎಲ್ಲಾ ಅಂಶಗಳೂ ಮೂಡಿಬಂದಿದೆ ಎಂಬ ಕುತೂಹಲ ದೃಷ್ಟಿಯಿಂದ "ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ" ಎಂಬ ವಿಷಯವನ್ನು ಆಯ್ದುಕೊಂಡು ಅಧ್ಯಯನವಾರು ವಿಂಗಡಿಸಿ ಆರು ಭಾಗಗಳಾಗಿ ಮಾಡಿಕೊಳ್ಳಲಾಗಿದೆ.

ಮೊದಲನೇ ಅಧ್ಯಾಯ- ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿಯಾಗಿದ್ದು, ಈ ನಿಂಬಂಧದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿಯನ್ನು ತಿಳಿಸಲಾಗಿದೆ.

ಎರಡನೇ ಅಧ್ಯಾಯ ಬೇಂದ್ರೆಯವರ ಬದುಕು-ಬರಹ ಎಂಬಲ್ಲಿ ಬೇಂದ್ರೆಯವರ ಬದುಕಿನ ಹಲವಾರು ಘಟನೆಗಳು, ಅವರು ಬೆಳೆದುಬಂದ ಬಗೆ, ಸಾಹಿತ್ಯಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆ ಹಾಗೂ ಅವರನ್ನು ಅರಸಿ ಬಂದ ಪ್ರಶಸ್ತಿಗಳ ಬಗ್ಗೆ ತಿಳಿಸಿ ಕೊಡಲಾಗಿದೆ.

ಅಧ್ಯಾಯ ಮೂರರಲ್ಲಿ 'ಮಾನವ ಮತ್ತು ಪ್ರಕೃತಿ ಸಂಬಂಧ' ಎಂಬ ವಿಷಯದಲ್ಲಿ ಮಾನವ ಮತ್ತು ಪ್ರಕೃತಿ ಸಂಬಂಧದ ಅನಾದಿ, ಅನನ್ಯತೆಯ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ಆದಿ ಮಾನವ ಅವಿರ್ಭಾವಗೊಂಡ ಬಗೆ, ಅನಂತರ ಅವನು ವಿಕಾಸದ ಹೆಜ್ಜೆಗಳನ್ನೂರಿದ್ದು. ಬೇಟೆಯಾಡಿ ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಮಾನವ ನಂತರ ಒಂದೆಡೆ ನೆಲೆಸಿ ಕೃಷಿಯನ್ನು ಕಲಿತು, ಕ್ರಮೇಣ ಭಾಷೆ, ಲಿಪಿಯನ್ನು ಕಲಿತುಕೊಂಡು ಸಾಮಾಜಿಕ ನಾಗರೀಕ ನಡವಳಿಕೆಯನ್ನು ರೂಪಿಸಿಕೊಂಡು ಜ್ಞಾನ ಸ್ವರೂಪಿಯಾದುದ್ದನ್ನು ತಿಳಿಸಲಾಗಿದೆ. ವಿವಿಧ ರೂಪದಲ್ಲಿ ಪ್ರಕೃತಿಯ ಸಿರಿ ಸೊಬಗನ್ನು ಕವಿಗಳು ತಮ್ಮ ಕಾವ್ಯದಲ್ಲಿ ವರ್ಣಿಸಿರುವ ಬಗೆ ಹಾಗೂ ಬದುಕನ್ನು ವಿಛಿದ್ರಗೊಳಿಸುವ ಪ್ರಕೃತಿಯ ಕ್ರೂರ ಮುಖವನ್ನು ತಿಳಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ 'ಸಾಹಿತ್ಯದಲ್ಲಿ ಪ್ರಕೃತಿ' ಎಂಬ ವಿಷಯದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿನ ಪ್ರಕೃತಿಯ ವೈವಿದ್ಯಪೂರ್ಣ ಸಂಪ್ರದಾಯಬದ್ಧ ಸೋಪಜ್ಞರೀತಿಯ ನಾನಾ ವರ್ಣನೆಯನ್ನು ಕಾಣಬಹುದಾಗಿದೆ. ಹಾಗೂ ಪ್ರಾಚೀನ

[illegible]

ಕನ್ನಡ ಸಾಹಿತ್ಯದಲ್ಲಿ ಪ್ರಕೃತಿಯನ್ನು ಅಷ್ಟದಶಾ ವರ್ಣನೆಗಳ ಅಂಗವಾಗಿ ಅಂದರೆ ಸಮುದ್ರ, ಋತು, ಸೂರ್ಯ, ಚಂದ್ರ, ಪರ್ವತ, ಉದಕ, ವನಸ್ಪತಿ ವರ್ಣನೆಗಳಿಂದು ಏಳು ವರ್ಣನೆಗಳ ಮೂಲಕ ಪ್ರಕೃತಿಯನ್ನು ವರ್ಣಿಸಲಾಗುತ್ತಿತ್ತು ಎಂಬುದು ತಿಳಿದು ಬರುತ್ತದೆ. ಅಧ್ಯಯನದ ವಿಷಯ ವ್ಯಾಪ್ತಿಯ ದೃಷ್ಟಿಯಿಂದ ಕಾಡು ಕಡಲಿನ ವರ್ಣನೆ, ಋತು ವರ್ಣನೆ ಹಾಗೂ ಸೂರ್ಯ-ಚಂದ್ರರ ವರ್ಣನೆ ಎಂದು ವಿಂಗಡಿಸಿ ಕವಿ ಕಾವ್ಯದ ಮುಖೇನ ಇವುಗಳನ್ನು ರಮ್ಯ, ರಮಣೀಯವಾಗಿ ವರ್ಣಿಸಿರುವುದನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ. ಹಾಗೆಯೇ ಕನ್ನಡ ನವೋದಯ ಕಾವ್ಯದಲ್ಲಿ ಪ್ರಕೃತಿ ವಿಷಯನವನು ಅಧ್ಯಯನ ಮಾಡುವ ಸಂದರ್ಭದಲ್ಲಿ ಪ್ರಮುಖವಾಗಿ ಕನ್ನಡ ನವೋದಯ ಕವಿಗಳ ಮೇಲೆ ಆಂಗ್ಲೋ ರೊಮ್ಯಾಂಟಿಕ್ ಕಾವ್ಯದ ಪ್ರಭಾವ ಮತ್ತು ಅವರು ಅದನ್ನು ಮೀರಿ ನಿಂತ ಬಗೆಯನ್ನು ನೋಡುವುದಾದರೆ ಈ ಸಂದರ್ಭವನ್ನು ಹೊಸಗನ್ನಡದ ಸುವರ್ಣಯುಗ ಎನ್ನಬಹುದು. ಈ ಕಾಲಘಟ್ಟದ ಪ್ರಮುಖ ಕವಿಗಳ ಪ್ರಕೃತಿ ಗೀತೆಗಳನ್ನು ಅಧ್ಯಯನಕ್ಕೆ ಒಳಗು ಮಾಡಲಾಗಿದೆ.

ಅಧ್ಯಾಯ ಐದು ಅಧ್ಯಯನ ವಿಷಯದ ಪ್ರಮುಖ ಘಟ್ಟವಾದ 'ಬೇಂದೆಯವರ ಕವನಗಳಲ್ಲಿ ಪ್ರಕೃತಿ' ಎಂಬ ವಿಷಯದ ಅಂಗವಾಗಿ ಬೇಂದ್ರೆಯವರ ಸಮಗ್ರ ಕಾವ್ಯವನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳಲ್ಲಿನ ಪ್ರಕೃತಿ ಕವಿತೆಗಳನ್ನು ಮೂರು ಭಾಗವಾಗಿ ಅಂದರೆ ಸೂರ್ಯೋದಯದ ಗೀತೆಗಳು, ಶ್ರಾವಣಮಾಸದ ಗೀತೆಗಳು ಹಾಗೂ ಪ್ರಕೃತಿಯ ಇತರೆ ಗೀತೆಗಳು ಎಂದು ವಿಂಗಡಿಸಿ ಪ್ರಕೃತಿಯ ವಿವಿಧ ವಿನ್ಯಾಸ, ವಿಲಾಸ ಲಾಸ್ಯಗಳನ್ನು ಪರಿಪೂರ್ಣವಾಗಿ ಅನಾವರಣ ಗೊಳಿಸಲಾಗಿದೆ.

ಅಧ್ಯಾಯ ಆರು ಉಪಸಂಹಾರದಲ್ಲಿ ಇದುವರೆಗಿನ ಎಲ್ಲಾ ಅಧ್ಯಾಯಗಳಲ್ಲಿ ಒಟ್ಟಾರೆಯಾಗಿ ವ್ಯಕ್ತವಾಗಿರುವ ಕವಿಯ ನಿಲುವು, ಕಾಣಿಕೆಯನ್ನು ಕುರಿತು ವಿವೇಚಿಸಲಾಗಿದೆ. ಜೊತೆಗೆ ಬೇಂದೆಯವರು ಕವಿಯಾಗಿ ಅವರು ಪಡೆದ ದರ್ಶನ ಸಿದ್ಧಿಗಳ ಅಂತಿಮ ಫಲಶೃತಿಯನ್ನು ಕನ್ನಡ ಸಾಹಿತ್ಯದಲ್ಲಿ ಅವರು ಪಡೆದುಕೊಂಡ ಸ್ಥಾನಮಾನಗಳನ್ನು ಗುರುತಿಸಲಾಗಿದೆ. ಬೇಂದ್ರೆಯವರಿಂದ ಕನ್ನಡ ಕಾವ್ಯಲೋಕಕ್ಕೆ ಸಂದ ಕೊಡುಗೆ. ದೊರೆತ ಹೊಸ ಆಯಾಮ ಮುಂತಾದ ವಿಷಯಗಳ ಬಗೆಗಿನ ಒಟ್ಟು ಅಭಿಪ್ರಾಯವನ್ನು ಕೊನೆಯ ಮಾತುಗಳಲ್ಲಿ ಮಂಡಿಸಲಾಗಿದೆ.

ಅಧ್ಯಾಯ-೨

ಬೇಂದ್ರೆಯವರ ಬದುಕು-ಬರೆಹ

ಬೇಂದ್ರೆ ಕನ್ನಡ ಸಾರಸ್ವತ ಲೋಕದ ಮಿನುಗುತಾರೆ. ಕನ್ನಡ ನವೋದಯ ಕಾವ್ಯ ಪರಂಪರೆಗೆ ಬೇಂದೆಯವರ ಕೊಡುಗೆ ಅಪಾರವಾದುದು. ಸಾವಿರಾರು ಕವನಗಳನ್ನು ರಚಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂಬಿಕಾತನಯದತ್ತ ಎಂಬುದು ಅವರ ಕಾವ್ಯನಾಮ. ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ ತಿಳಿಯಲಾರದೀಜಗ ಎಂದು ಕವಿ 'ಅಂಬಿಕಾತನಯದತ್ತ' ಎಂಬ ಕವನದಲ್ಲಿ ತಮ್ಮ ತಾಯಿ ಅಂಬಿಕೆ ಹೇಗೆ ತನ್ನ ಕಾವ್ಯದ ಸ್ಫೂರ್ತಿ ದೇವತೆಯಾಗಿದ್ದಾಳೆ ಎಂಬುದನ್ನು ಗೌರವ ಕೃತಜ್ಞತೆಗಳಿಂದ ಹೇಳಿದ್ದಾರೆ.

ಬೇಂದೆಯವರು ಕನ್ನಡ ಸಾಹಿತ್ಯದ ನವೋದಯ ಕಾವ್ಯದ ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ಅತ್ಯಂತ ಮಹತ್ತರವಾದುದು. ಬೇಂದೆಯವರು ತಮ್ಮ ಕಾವ್ಯಕ್ಕೆ ಕನ್ನಡದ ವಿವಿಧ ಪ್ರಭೇದಗಳನ್ನು ಉಪಯೋಗಿಸಿಕೊಂಡಿದ್ದರೂ ಧಾರವಾಡದ ಸುತ್ತ ಪ್ರಚಾರದಲ್ಲಿದ್ದ ಕರ್ನಾಟಕದ ಜನಪದ ಉಪಭಾಷೆಯನ್ನು ಕಾವ್ಯದ ಮಾಧ್ಯಮಕ್ಕೆ ತಂದು ಶಿಷ್ಟಕಾವ್ಯಕ್ಕೆ ಒಂದು ಹೊಸ ತಿರುವನ್ನು ತಂದುಕೊಟ್ಟಿದ್ದು ಚಾರಿತ್ರಿಕವಾಗಿ ಬಹಳ ಮಹತ್ವದ್ದು. ಈ ಉಪಭಾಷೆಯಲ್ಲಿ ಬರೆದಿರುವ ಕವಿತೆಗಳಿಂದಲೇ ಬೇಂದ್ರೆ ನಮ್ಮ ಸ್ಮೃತಿಯಲ್ಲಿ ನೆಲೆನಿಂತಿರುವುದು.

ಕವಿ ಬೇಂದ್ರೆ ಹುಟ್ಟಿದ್ದು ಧಾರವಾಡದಲ್ಲಿ ೧೮೯೬ ಜನವರಿ ೩೧ರಂದು. ತಂದೆಯ ಹೆಸರು ರಾಮಚಂದ್ರ ಬೇಂದ್ರೆ, ತಾಯಿ ಹೆಸರು ಅಂಬಾಬಾಯಿ. ಅಂದು ಗುರುವಾರವಾಗಿದ್ದು ಮಗುವಿಗೆ 'ದತ್ತಾತ್ರೇಯ' ಎಂದು ನಾಮಕರಣವಾಯಿತು.

ತಮ್ಮ ಜನನವನ್ನು ಕುರಿತು 'ಅಂಬಿಕಾತನಯ ದತ್ತರೇ ಹೀಗೆ ಗೀತಿಸಿದ್ದಾರೆ.

"ಯಾವ ಯೋಗ ನಿದ್ರೆಯಲ್ಲಿ ಏನ ಕನಸ ಕಂಡೆನೋ
ಯಾವ ಹಾಲನುಂಡೆನೋ
ನಿನ್ನ ತನುವಿನಿಂದ ಬಂದ ನಿನ್ನ ತನಯದತ್ತನು
ನೀನು ಇತ್ತುದಿತ್ತನು!"[೧]

---

೧. ಅಂಬಿಕಾತನಯದತ್ತ - ಔದುಂಬರ ಗಾಥೆ, ಸಂಪುಟ. ೩, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೪೩.

ನಿನ್ನ ಜನುಮದೊಂದು ಪಾಡುಹಾಡು ಆಗಿಮೂಡಿತು ನನ್ನ ಕೊರಳು ಹಾಡಿತು. ಈತ ಯೋಗ ಪುರುಷನಾಗಿ ಹುಟ್ಟಿದ. ಈತನ ಜನನದ ಜೋತೆಯಲ್ಲಿಯೇ ಕನ್ನಡದ ಭಾಗ್ಯೋದಯವೂ ಆಯಿತೆಂದರೆ ಅತಿಶಯೋಕ್ತಿಯಲ್ಲಿ. ಬೇಂದೆಯವರ ಬಾಲ್ಯ ಧಾರವಾಡದಲ್ಲೇ ಕಳೆಯಿತು. ತಾಯಿ ಅಂಬಿಕೆಯ ಆದರ್ಶ ಮಾರ್ಗದರ್ಶನ ಬೇಂದ್ರೆಯವರ ಬಾಳ ದೀವಿಗೆಯಾದುವು. ಚಿಕ್ಕವರಿರುವಾಗಲೇ ಹಲವಾರು ಹಾಡುಗಳನ್ನು ಗೀಚುವುದು ಬೇಂದ್ರೆಯವರ ಹವ್ಯಾಸವಾಗಿತ್ತು. ಶಾಲೆಯಲ್ಲಿ ಶಿಕ್ಷಣ ಕಲಿತರು, ಆದರೆ ಜೀವನವೆಂಬ ಶಿಕ್ಷಣ ಕ್ಷೇತ್ರ ಅವರಿಗೆ ಬಹಳ ಕಲಿಸಿತು, ಬಡತನ ಇತ್ತು. ಅದು ಇದ್ದದ್ದು ಅವರ ಬದುಕಿನಲ್ಲಿ ಆತ್ಮಾಭಿಮಾನದಲ್ಲಲ್ಲ. ಬೇಂದ್ರೆ ಕವಿಯಾಗಲೆಂದೇ ಹುಟ್ಟಿ ಬಂದವರು. ಅದಕ್ಕಾಗಿ ಬಡತನದ ಬಾಳಿನಲ್ಲೆ ಬೆಂದು ಬೆಳೆದರು. ಅಜ್ಜಿ ಗೋದೂಬಾಯಿಯವರ ಕಟ್ಟುನಿಟ್ಟಿನ ಜೀವನ ಮಾರ್ಗದರ್ಶನದಿಂದ ಬೇಂದ್ರೆಯವರ ಬಡತನದ ಜೀವನಕ್ಕೆ ಹುರಿಕಟ್ಟಾದ ಆತ್ಮಾಭಿಮಾನ ಬೆಳೆಯುತ್ತ ಹೊರಟಿತು.

೧೯೦೭ರಲ್ಲಿ ಬೇಂದ್ರೆಯವರ ತಂದೆ ತೀರಿಕೊಂಡರು. ಐದು ರೂಪಾಯಿ ವಿದ್ಯಾರ್ಥಿವೇತನ ಅವರ ಶಿಕ್ಷಣದ ಮುನ್ನಡೆಗೆ ಸಹಾಯಕವಾಗಿತ್ತು. ಅದಕ್ಕೂ ಕಲ್ಲು ಬಿದ್ದಾಗ ಅಜ್ಜಿ ಗೋದೂಬಾಯಿ ಒಂದು ಪುಟ್ಟ ಖಾನಾವಳಿ ತೆರೆದು ತನ್ನ ಮಗಳು ಮತ್ತು ಮೊಮ್ಮಗನ ಜೀವನಕ್ಕೆ ಒಂದು ಹಾದಿ ಮಾಡಿಕೊಟ್ಟರು. ಬೇಂದ್ರೆ ೧೯೧೩ರಲ್ಲಿ ಮೆಟ್ರಿಕ್ ಪರೀಕ್ಷೆ ಮುಗಿಸಿದ ಸಂಜೆ ಅವರಜ್ಜಿ ತೀರಿಕೊಂಡರು. ಅನಾಥರಾದ ಭಾವನೆ ಕಾಡಿದಾಗ ಅವರ ಚಿಕ್ಕಪ್ಪ ಬಂಡೋಪಂತ ಬೇಂದೆ ಮುಂದೆ ಬಂದು ಶಿಕ್ಷಣಕ್ಕೆ ಸಹಾಯ ಮಾಡಿದರು. ಕಾಲೇಜು ಶಿಕ್ಷಣಕ್ಕಾಗಿ ಪುಣೆಗೆ ಹೋದರು. ಕನ್ನಡ, ಸಂಸ್ಕೃತ, ಇಂಗ್ಲಿಷ್, ಮರಾಠಿ, ಭಾಷೆಗಳ ಮೇಲೆ ಪ್ರಭುತ್ವವನ್ನು ಬೆಳೆಸಿಕೊಂಡು ಕೃತಿ ರಚನೆ ಮಾಡಲು ಪ್ರಯತ್ನಿಸಿದರು. ಬೇಂದ್ರೆಯವರ ಮೇಲೆ ಲಕ್ಷ್ಮೀಶ ಮತ್ತು ಸರ್ವಜ್ಞ ಇವರ ಪ್ರಭಾವ ಬಹಳವಾಗಿತ್ತು. ೧೯೧೮ರಲ್ಲಿ ಬೇಂದ್ರೆಯವರು ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ನಂತರ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಅಧ್ಯಾಪಕ ವೃತ್ತಿಯನ್ನು ಹಿಡಿದರು.

೧೯೧೯ರಲ್ಲಿ ಬೇಂದ್ರೆ ಮತ್ತು ಲಕ್ಷ್ಮೀಬಾಯಿಯವರ ವಿವಾಹ ಹುಬ್ಬಳ್ಳಿಯಲ್ಲಿ ನೆರವೇರಿತು. ಕವಿಯಾಗಿ, ಶಿಕ್ಷಕರಾಗಿ, ಸರಸ ಸಹೃದಯ ಸನ್ಮಿತ್ರರಾಗಿ, ವಿದ್ಯಾರ್ಥಿಗಳ ಮೆಚ್ಚಿನ ಗುರುಗಳಾಗಿ, ಲಕ್ಷ್ಮೀಬಾಯಿಯ ಪ್ರೇಮದ ಪತಿಯಾಗಿ ಬೇಂದ್ರೆ ಬೆಳೆದರು. ೧೯೨೪ರಲ್ಲಿ ಬೇಂದ್ರೆಯವರಿಗೆ ಮಾತೃವಿಯೋಗ ಆಯಿತು. ಆದರೆ ಅವರ ಪತ್ನಿ

ಲಕ್ಷ್ಮೀಬಾಯಿಯವರು ಒಂದರ್ಥದಲ್ಲಿ ತೆರವಾದ ಮಾತೃಸ್ಥಾನವನ್ನು ತುಂಬಿದರೆನ್ನಬಹುದು. ಅವರು ಬೇಂದ್ರೆಯವರ ಸಾರಸ್ವತ ಕೃಷಿಗೆ ಅವರ ತಾಯಿಯಂತೆಯೇ ನೆರವಾಗತೊಡಗಿದರು. ಸಂಸಾರದ ಯಾವ ಭಾರವನ್ನೂ ಪತಿಯ ಮೇಲೆ ಹೇರದೆ, ಗಂಡ ದುಡಿದು ತಂದಷ್ಟರಲ್ಲೇ ಸರಳ ಸಂಸಾರ ಸಾಗಿಸತೊಡಗಿದರು. 'ನಾನು ಬಡವಿ ಆತ ಬಡವ ಒಲವೇ ನಮ್ಮ ಬದುಕು' ಎಂಬ ಭಾವನೆ ಮಿಡಿದದ್ದು ಆಗಲೇ (ಬೇಂದ್ರೆ ಸಾಹಿತ್ಯ ವಿಹಾರ, ಸಾ,.ಶಿ.ಮುರುಳಯ್ಯ- ಬೇಂದ್ರೆ ವ್ಯಕ್ತಿ ವಿಚಾರ, ಪು. ೮)

೧೯೨೬ರಲ್ಲಿ ಬೇಂದ್ರೆಯವರು ಧಾರವಾಡದಲ್ಲಿ ಗೆಳೆಯರ ಬಳಗ ಪ್ರಾರಂಭಿಸಿದರು. ಸಾಹಿತ್ಯ ರಚನೆ ಪುಸ್ತಕ ಪ್ರಕಟಣೆ ಜೊತೆಗೆ ಜಯಕರ್ನಾಟಕ ಪತ್ರಿಕೆ ನಡೆಸಿದರು. ಬೇಂದ್ರೆಯವರನ್ನು ಕನ್ನಡನಾಡಿನ ಜನತೆ ಬಲುಶೀಘ್ರವಾಗಿ ಗುರುತಿಸಿತು. ೧೯೩೦ರಲ್ಲಿ ಮೈಸೂರು ಲೇಖಕರ ಗೋಷ್ಠಿಯ ಅಧ್ಯಕ್ಷರಾದರು. ೧೯೩೨ರಲ್ಲಿ ಬೇಂದ್ರೆಯವರ 'ಗರಿ' ಸಂಕಲನ ಪ್ರಕಟವಾಯಿತು. ಆ ಕವನ ಸಂಕಲನ ನರಬಲಿ ಎಂಬ ದೇಶಭಕ್ತಿಗೀತೆಯ ಫಲವಾಗಿ ಜೈಲಿಗೂ ಹೋಗಬೇಕಾಯಿತು. ನೌಕರಿ ಹೋಯಿತು. ಆ ಸಮಯದಲ್ಲಿ ವಿಧಿಯಿಲ್ಲದೆ ಬೇಂದ್ರೆ ೧೯೩೩ರಲ್ಲಿ ಮತ್ತೆ ಪುಣೆಗೆ ಹೋಗಿ ೧೯೩೫ರಲ್ಲಿ ಎಂ.ಎ.ಪದವಿಯಲ್ಲಿ ತೇರ್ಗಡೆಯಾದರು. ಚಿಕ್ಕಪ್ಪನೂ ತೀರಿಹೋದರು ಸಂಸಾರದ ಭಾರ ಹೆಚ್ಚಾಯಿತು. ದಿಕ್ಕು ತೋಚದಂತಾದಾಗ ಮಾಸ್ತಿಯವರು ತಮ್ಮ 'ಜೀವನ' ಪತ್ರಿಕೆಗೆ ಇವರನ್ನು ಸಂಪಾದಕರನ್ನಾಗಿ ಮಾಡಿದರು. ೧೯೧೪ರ ವೇಳೆಗೆ ಇವರಿಗೆ ಹಾಕಿದ್ದ ಬಂಧನದ ಆಜ್ಞೆ ದೂರವಾಯಿತು. ಮತ್ತೆ ಕೆಲಸಕ್ಕೆ ಹೋದರು. ಹಲವಾರು ಕವನ ಸಂಕಲನಗಳು ಪ್ರಕಟವಾದವು. ೧೯೪೩ರಲ್ಲಿ ಪುಣೆಯ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಅದೇ ವರ್ಷ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಕೊನೆಗೆ ೧೯೪೪ರಲ್ಲಿ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಪೂರ್ಣಾವದಿ ಕನ್ನಡ ಪ್ರಾಧ್ಯಾಪಕರಾಗಿ ಸೇರಿದರು. ೧೯೬೦ರಲ್ಲಿ ನಿವೃತ್ತರಾದರು. ಮತ್ತೆ ಧಾರವಾಡ, ಸಾಧನಕೇರಿ, 'ಶ್ರೀಮಾತು' ನೆಲೆ ಮುಂದೆ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಾಹಿತ್ಯ ಸಲಹಾಕಾರರಾಗಿ ಕೆಲವು ವರ್ಷ ಸೇವೆಸಲ್ಲಿಸಿದ ಮೇಲೆ ಪೂರ್ತಿ ನಿವೃತ್ತಿ. ಆಧ್ಯಾತ್ಮ ಚಿಂತನೆ, ಸಂಖ್ಯಾಶಾಸ್ತ್ರ ಅನ್ವೇಷಣೆ, ಮನೆ ಮನೆಗೆ ಮೈತ್ರಿಯ ಸಂವಾದ – ಬೇಟಿಗಳು – ಹೀಗೆ ಜೀವನ ಜಿಜ್ಞಾಸೆಯಲ್ಲೆ ದಿನಕಳೆದುವು.

೧೯೭೪ರಲ್ಲಿ ಅವರ 'ನಾಕುತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಬಂತು. ಕರ್ನಾಟಕದ ಎಲ್ಲಾ ಕಡೆ ಅವರಿಗೆ ಅದ್ದೂರಿ ಸ್ವಾಗತ, ಸನ್ಮಾನಗಳು ನಡೆದವು.

ಇದಕ್ಕೂ ಮೊದಲೇ ಬೇಂದ್ರೆ ಅವರನ್ನು ಹುಡುಕಿಕೊಂಡು ಬಂದ ಇತರ ಕೆಲವು ಮುಖ್ಯ ಪ್ರಶಸ್ತಿ ಗೌರವಗಳೆಂದರೆ:

೧೯೪೩ – ಶಿಮೊಗ್ಗದಲ್ಲಿ ಜರುಗಿದ ೨೭ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ

೧೯೫೬ – ಅರಳು ಮರಳು ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೬೮ – ಪದ್ಮಶ್ರೀ ಪ್ರಶಸ್ತಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟೊರೇಟ್.

೧೯೬೯ – ನವದೆಹಲಿಯ ಸಾಹಿತ್ಯ ಅಕಾಡೆಮಿಯ 'ಫೆಲೋ' ಗೌರವ

೨೬–೧೦–೧೯೮೧ ಮಧ್ಯಾಹ್ನ ೧.೧೮ಕ್ಕೆ ಎಂದರೆ ನರಕಚತುರ್ದಶಿಯಂದು ಮುಂಬಯಿ ಹರಿಕಿಶನ್ ದಾಸ್ ಆಸ್ಪತ್ರೆಯಲ್ಲಿ ಸ್ವರ್ಗಾರೋಹಣರಾದರು.

ಬೇಂದ್ರೆಯವರ ಬರೆಹಗಳು

" ೧೯೨೨	ಕೃಷ್ಣಾಕುಮಾರಿ
೧೯೩೨	ಗರಿ
೧೯೩೪	ಮೂರ್ತಿ
೧೯೩೪	ಕಾಮಕಸ್ತೂರಿ
೧೯೩೭	ಸಖೀಗೀತ
೧೯೩೮	ನಾದಲೀಲೆ
೧೯೩೮	ಉಯ್ಯಾಲೆ
೧೯೪೩	ಕನ್ನಡ ಮೇಘಧೂತ
೧೯೪೬	ಹಾಡುಪಾಡು (೧೯೫೦ರಲ್ಲಿ ಕೃಷ್ಣಾಕುಮಾರಿಯೊಂದಿಗೆ ಪ್ರಕಟ)
೧೯೫೬	ಸೂರ್ಯಪಾನ
೧೯೫೬	ಹೃದಯ ಸಮುದ್ರ
೧೯೫೬	ಮುಕ್ತಕಂಠ
೧೯೫೭	ಚೈತ್ಯಾಲಯ
೧೯೫೭	ಜೀವಲಹರಿ
೧೯೫೭	ಅರಳುಮರಳು
೧೯೫೮	ನಮನ
೧೯೫೯	ಸಂಚಯ
೧೯೬೦	ಉತ್ತರಾಯಣ
೧೯೬೧	ಮುಗಿಲಮಲ್ಲಿಗೆ
೧೯೬೨	ಯಕ್ಷಯಕ್ಷಿ
೧೯೬೪	ನಾಕುತಂತಿ

೧೯೬೭ ಮರ್ಯಾದೆ
೧೯೬೮ ಶ್ರೀಮಾತಾ
೧೯೭೦ ಇದು ನಭೋವಾಣಿ
೧೯೭೩ ಮತ್ತೆ ಶ್ರಾವಣ ಬಂತು
೧೯೭೮ ಚತುರೋಕ್ತಿ ಮತ್ತು ಇತರ ಕವನಗಳು[೧]

ಮರಣೋತ್ತರ ಕವನ ಸಂಗ್ರಹಗಳು

೧೯೮೨ ಪರಾರಿ
೧೯೮೨ ಕಾವ್ಯವೈಖರಿ
೧೯೮೩ ಬಾಲ ಬೋಧೆ
೧೯೮೩ ತಾ ಲೆಕ್ಕಣಿಕಿ ತಾ ದೌತಿ
೧೯೮೭ ಪ್ರತಿಬಿಂಬಗಳು
೧೯೮೭ ಶ್ರಾವಣ ಪ್ರತಿಭೆ

ಆಯ್ದ ಕವನ ಸಂಕಲನಗಳು

೧೯೬೯ ಬಾ ಹತ್ತಿರ
೧೯೭೨ ವಿನಯ
೧೯೭೭ ಒಲವೇ ನಮ್ಮ ಬದುಕು

ನಾಟಕಗಳು

೧೯೩೦ ತಿರುಕರ ಪಿಡುಗು, ಗೋಲ್, ಸಾಯೋ ಆಟ (ಮೂರು ಹೆಚ್ಚಾಟಗಳು)
೧೯೩೦ ಉದ್ಧಾರ
೧೯೩೧ ನಗೆಯಹೊಗೆ
೧೯೫೦ ಹೊಸ ಸಂಸಾರ
೧೯೮೩ ನಾಟಕ ಸಂಪುಟ (೧೪ ನಾಟಕಗಳು)

ಹರಟೆ, ನಗೆ–ಹಾಡು ಕಥೆ

೧೯೪೦ ನಿರಾಭರಣ ಸುಂದರಿ (ಹರಟೆ, ನಗೆ–ಹಾಡು–ಕಥೆಗಳ ಸಂಗ್ರಹ)
೧೯೯೬ ಚೀನದ ಬಾಳು ಬದುಕು (ಚೀನೀ ಆಧುನಿಕ ಕತೆಗಳ ಕನ್ನಡ ಅನುವಾದ)

ವಿಮರ್ಶೆ

೧೯೩೭ ಸಾಹಿತ್ಯ ಮತ್ತು ವಿಮರ್ಶೆ
೧೯೪೦ ಸಾಹಿತ್ಯ ಸಂಶೋಧನ

---

೧. ಔದುಂಬರ ಗಾಥೆ, ಸಂಪುಟ. ೬, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೩೮೯.

೧೯೪೫ ವಿಚಾರ ಮಂಜರಿ

೧೯೪೭ ಶ್ರೀ ಅರವಿಂದರ ಆಶ್ರಮ ಮತ್ತು ತತ್ವೋಪದೇಶ

೧೯೫೪ ಶ್ರೀ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ

೧೯೫೯ ಮಹಾರಾಷ್ಟ್ರ ಸಾಹಿತ್ಯ

೧೯೬೨ ಕಾವ್ಯೋದ್ಯೋಗ (ಮನ್ವಂತರ ಸಾಹಿತ್ಯವಿಮರ್ಶೆಗೆ ಮೀಸಲಾದ ನಿಯತಕಾಲಿಕೆ)

೧೯೬೮ ಕನ್ನಡ ಸಾಹಿತ್ಯದಲ್ಲಿ ನಾಯಕ ರತ್ನಗಳು

೧೯೭೪ ಸಾಹಿತ್ಯದ ವಿರಾಟ್ ಸ್ವರೂಪ

೧೯೭೬ ಕುಮಾರವ್ಯಾಸ ಪುಸ್ತಿಕೆ

೧೯೬೫ ಸಾಹಿತ್ಯಾಯೋಗ (ಸಾಹಿತ್ಯ ವಿರಾಟ್ ಸ್ವರೂಪದೊಳಗಿನ ಆಯ್ದಲೇಖನಗಳ ಸಂಗ್ರಹ)

ಭಾಷಣಗಳ ಸಂಗ್ರಹ

೧೯೬೯ ವಿಶ್ವಧಾರಣ ಸೂತ್ರ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಷಿಪ್ ಧಾರವಾಡದಲ್ಲಿ ಪ್ರಧಾನ ಮಾಡಿದಾಗ ಪ್ರಸ್ತುತ ಪಡಿಸಿದ ಸಂಶೋಧಕ ಪ್ರಬಂಧ.

೧೯೭೨ ಮಾತೆಲ್ಲ ಜೋತಿ– ಅಕಾಡೆಮಿ ಆಫ್ ಜನರಲ್ ಎಜುಕೇಷನ್, ಮಣಿಪಾಲ

೧೯೭೯ ಮತಧರ್ಮ ಮತ್ತು ಆಧುನಿಕ ಮಾನವ

ಸಂಪಾದನೆ

೧೯೨೮ ನನ್ನದು ಈ ಕನ್ನಡ ನಾಡು

೧೯೩೦ ಹಕ್ಕಿ ಹಾರುತಿದೆ

೧೯೩೯ ಚಂದ್ರಹಾಸ (ಕವಿ ಲಕ್ಷ್ಮೀಶನ ಜೈಮಿನಿ ಭಾರತದ ಚಂದ್ರಹಾಸ ಕಥಾನಕ)

೧೯೫೭ ಹೊಸಗನ್ನಡ ಕಾವ್ಯಶ್ರೀ

೧೯೬೫ ಕನಕದಾಸ ಚತುಶ್ಯತ ಮನೋತ್ಸವ ಸಂಸ್ಕರಣ ಸಂಪುಟ

ಸಂಪಾದಿತ ಪತ್ರಿಕೆಗಳು

೧೯೧೯ 'ವಾಗ್ಭೂಷಣ' ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯ

೧೯೨೬ ಸ್ವಧರ್ಮ

೧೯೨೯ ಜಯ ಕರ್ನಾಟಕ

೧೯೩೮ ಜೀವನ

ಅನುವಾದ: ಕನ್ನಡಕ್ಕೆ

೧೯೨೮	'ಉಪನಿಷತ್ ರಹಸ್ಯವು ಅಥವಾ ಭಾರತೀಯ ಆಧ್ಯಾತ್ಮಶಾಸ್ತ್ರ ಪೀಠಿಕೆ'
೧೯೩೬	ಭಾರತೀಯನ ಜನ್ಮ
೧೯೬೬	ಗುರುಗೋವಿಂದ ಸಿಂಗ್
೧೯೬೮	ಕಬೀರ ವಚನಾವಲಿ
೧೯೭೨	ಭಗ್ನ ಮೂರ್ತಿ
೧೯೬೭	ನೂರೊಂದು ಕವನ

ಇಂಗ್ಲಿಷ್

1977	A Theory of Immortality
1981	Language Mathematics and Truth.[೧]

ಮರಾಠಿಯಲ್ಲಿ ಗ್ರಂಥ ರಚನೆ

೧೯೬೩	ಸಂತ ಮಹಂತಾಂಚಾ ಪೂರ್ಣ ಶಂಭು ವಿಟ್ಠಂ
೧೯೬೫	ಸಂವಾದ (ಕವನ, ವಿಚಾರ, ವಿಮರ್ಶೆ ಸಂಗ್ರಹ)
೧೯೭೨	ಶಾಂತಲಾ (ಮೂಲ– ಕೆ.ವಿ. ಅಯ್ಯರ್ ಅವರ ಕನ್ನಡ ಕಾದಂಬರಿ)
೧೯೯೧	ಉಮಾಳಂ (೧೧೩ ಮೂಲ ಮರಾಠಿ ಕವನಗಳ ಸಂಗ್ರಹ)

ಹೀಗೆ ಬೇಂದ್ರೆಯವರು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.

೧. ಭೂಮಿತಾಯಿ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೩೯೭.

ಅಧ್ಯಾಯ ಮೂರು

ಮಾನವ ಮತ್ತು ಪ್ರಕೃತಿ ಸಂಬಂಧ

ಮಾನವ ಮತ್ತು ಪ್ರಕೃತಿ ಸಂಬಂಧ ಅನಾದಿಯೂ ಅನನ್ಯವೂ ಆದದ್ದು. ನಿಸರ್ಗ ಮಾನವರ ಮೇಲೆ ಬೀರಿರುವ ಪ್ರಭಾವ ಅಪಾರ. ಪ್ರಕೃತಿಯ ಅಂಶದಲ್ಲಿ ಒಂದಾದ ಮಾನವನಿಗೆ ಅದು ಜೀವನಾವಶ್ಯಕವಷ್ಟು ಅಲ್ಲ. ಜೀವನೋತ್ಸಾಹಕವೂ ಹೌದು. ಮನಸೆಳೆಯುವ ವೈವಿಧ್ಯಮಯ ಹೂವುಗಳು, ಗಿಡಮರಗಳು, ನವಿಲಿನ ನಾಟ್ಯ, ಕೋಗಿಲೆಯಗಾನ, ಜುಳು ಜುಳು ಹರಿಯುವ ಜರಿಗಳು, ಮೈದುಂಬಿ ಹರಿಯುವ ನದಿಗಳು ಕಣ್ತಣಿಸುವ ಕಡಲು, ಗಿರಿ ಶಿಖರಗಳ ಸಾಲು, ಸೂರ್ಯನ ಉದಯಾಸ್ತಮಾನಗಳು, ಬೆಳ್ಳಿ ಬೆಳದಿಂಗಳು ಬದಲಾಗಿವ ಋತುಮಾನಗಳು, ಮೊದಲಾದ ನಾನಾರೂಪದಲ್ಲಿ ಕಾಣುವ ಪ್ರಕೃತಿ ಚಿರ ಚೇತನದಾಯಿಯಾಗಿ ನಿತ್ಯ ಸೌಂದರ್ಯಧಾರಣಿಯೂ ಆಗಿದೆ. ಪ್ರಮುಖವಾಗಿ ಋತು ಬದಲಾವಣೆ ಮಾನವನ ಸೃಜನಶೀಲತೆಗೆ ನಿರಂತರ ಪ್ರೇರಣೆಯಾಗಿದೆ.

ಆದಿಮಾನವ ಅವಿರ್ಭಾವಗೊಮಡಿದ್ದು ಕಾಡಿನ ಒಡಲಲ್ಲಿ ಅವನು ತನ್ನ ವಿಕಾಸದ ಹೆಜ್ಜೆಗಳನ್ನೂರಿದ್ದು ಅರಣ್ಯದ ಅಂಗಳದಲ್ಲಿ ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವ ಅಹಾರಕ್ಕಾಗಿ ಬೇಟೆಯನ್ನು ಅವಲಂಬಿಸಿದ ನಂತರ ಕೃಷಿ ಮಾಡುವುದನ್ನು ಕಲಿತು ಒಂದೆಡೆ ನೆಲೆಸಿದ. ಕ್ರಮೇಣ ಭಾಷೆಯನ್ನು ಲಿಪಿನ್ನು ಕಲಿತುಕೊಂಡು ಸಾಮಾಜಿಕ ನಾಗರೀಕ ನಡವಳಿಕೆಯನ್ನು ರೂಪಿಸಿಕೊಂಡ. ಅವನ ಈ ವಿಕಾಸದ ಹಂತದಲ್ಲಿ ಅನೇಕ ದೈಹಿಕ ಬದಲಾವಣೆಗಳಾದವು. ನಾಲ್ಕು ಕಾಲಿನ ಮಂಗವಾಗಿದ್ದ ಅವನು ಎರಡು ಕಾಲಿನಲ್ಲಿ ನಡೆಯುವ ಮಾನವನಾಗಿ ಸುಧಾರಣೆಗೊಂಡ. ಹೀಗೆ ಅವನ ಪ್ರಜ್ಞೆಯು ವಿಕಾಸ ಹೊಂದಿ ಅರಿವು ಅರಳತೊಡಗಿತು.

ಪ್ರಕೃತಿಯ ವೈಚಿತ್ರಗಳನ್ನು ನೋಡಿ ಬೆರಗಾದ ಮಾನವ. ತಾನು ಅರ್ಥೈಸಲಾಗದ ಪ್ರಕೃತಿಯ ಹಲವು ವ್ಯಾಪಾರಗಳು ಅವನಿಗೆ ಬಿಡಿಸಲಾಗದ ಒಗಟಾಗಿ ತೋರಿದವು. ಮಳೆ, ಗಾಳಿ, ಮಿಂಚು, ಸಿಡಿಲು, ಪ್ರವಾಹ, ಭೂಕಂಪ, ಸುಮಾಮಿ ಮುಂತಾದವುಗಳ ಹಿಂದೆ ಯಾವುದೋ ಒಂದು ವಿಶಿಷ್ಟ ಶಕ್ತಿ ಕೆಲಸ ಮಾಡುತ್ತಿದೆ ಎಂದು ಭಾವಿಸಿ ಅದನ್ನು ದೇವರೆಂದು ಕರೆದು ಆರಾಧಿಸತೊಡಗಿದ. ಮಾನವನ ಪ್ರಜ್ಞೆ ಮತ್ತಷ್ಟು ವಿಕಾಸ ಹೊಂದಿದಾಗ ಅವನು ಸೃಷ್ಟಿಯ ರಹಸ್ಯ ಮತ್ತು ಅದರ ಹಿಂದಿನ ಶಕ್ತಿಯನ್ನು ಅರಿಯಲು ಪ್ರಯತ್ನಿಸಿದ.

[illegible]

ವಿಶ್ವ ಎಂದರೆ ಒಂದರ್ಥದಲ್ಲಿ ಪ್ರಕೃತಿಯ ನೆಲೆ. ಆಕಾಶ, ನದಿ , ಸರೋವರ, ಗಿಡ, ಮರ, ಪ್ರಾಣಿ, ಪಕ್ಷಿ, ಬೆಟ್ಟ, ಗುಡ್ಡ ಇತ್ಯಾದಿ ಎಲ್ಲಾ ನಾಮರೂಪಗಳ ಹಿಂದೆ ಒಬ್ಬ ಸೃಷ್ಟಿಕರ್ತನಿದ್ದಾನೆ ಎಂಬುದನ್ನು ಕಂಡುಕೊಂಡ. ಅದಕ್ಕಾಗಿಯೇ ಏಕಾಗ್ರಚಿತ್ತನಾಗಿ ಧ್ಯಾನಿಸುತ್ತಾ ಕುಳಿತುಕೊಂಡು ಕಾಂತದರ್ಶಿಯಾದ. ಇಂಥ ಪ್ರಕೃತಿಯ ನಡುವೆ ಇದ್ದ ಮಾನವನ ಮನಸ್ಸು ನಿಸರ್ಗ ಸೌಂದರ್ಯವನ್ನು ಆಸ್ವಾದಿಸಿ ಆರಾಧಿಸಲು ತೊಡಗಿತು.

ಮಾನವ ಪ್ರಕೃತಿಯ ರಂಗರಂಜಿತ ಕ್ರಿಯೆಯಲ್ಲಿ ಮೈಮರೆತಾಗ ಅವನು ತನ್ನ ಅಂತಃಸ್ಫೂರ್ತಿಯಿಂದ ಭಾವಾವೇಶಗೊಂಡು ತನ್ನ ಪ್ರತಿಭೆಯ ಬಲದಿಂದ ಬದುಕನ್ನು ಅರ್ಥೈಸತೊಡಗಿದ. ನಿಸರ್ಗದ ಹಿಂದಿನ ರಹಸ್ಯವನ್ನು ಅರಿಯಲೆತ್ನಿಸಿ ಭಾವಾಲೋಕದಲ್ಲಿ ಸಂಚರಿಸತೊಡಗಿದ ಅದರ ಫಲವಾಗಿ ತಾನು ಕಂಡದ್ದನ್ನು ಅನುಭವಿಸಿದ್ದನ್ನು ತನ್ನ ಬರಹದಲ್ಲಿ ನಮೂದಿಸತೊಡಗಿದ ಅವನೇ ಕವಿಯೆನ್ನಿಸಿಕೊಂಡ.

ಹೀಗೆ ಪರಮಪುರುಷ ಮತ್ತು ಪ್ರಕೃತಿ ಇವೆರಡರ ಸಂಬಂಧ ಅವಿನಾವಭಾವ–ವಾದದ್ದು. ಹೀಗೆ ಅವ್ಯಕ್ತನಾದ ಪುರುಷನ ವ್ಯಕ್ತರೂಪವೇ ಪ್ರಕೃತಿ ಎಂದು ಹೇಳಬಹುದು.

ವಿವಿಧ ರೂಪದಲ್ಲಿ ಪ್ರಕೃತಿ

ಪ್ರಕೃತಿಯ ಅನನ್ಯತೆಯ ಅಪಾರವಾದ ಸಿರಿ ಸೊಬಗನ್ನು ಕವಿಗಳು ತಮ್ಮ ಕಾವ್ಯದಲ್ಲಿ ವರ್ಣಿಸಿರುವುದು ಸಾಮಾನ್ಯ. ಅದಲ್ಲದೆ ಪರೋಕ್ಷವಾಗಿ ಅಂದರೆ ವಿವಿಧ ಪಾತ್ರಗಳ ಹಿನ್ನೆಲೆಯಲ್ಲಿ ನಿಸರ್ಗ ವ್ಯಾಪಾರವನ್ನು ಅಲ್ಲಲ್ಲಿ ಚಿತ್ರಿಸಿರುವ ವಿಶೇಷವಾದ ಬಗೆಯನ್ನು ನಾವು ಕನ್ನಡ ಕಾವ್ಯದಲ್ಲಿ ಕಾಣಬಹುದಾಗಿದೆ. ಹಾಗೆ ನೋಡುವುದಾದರೆ ಆದಿಕವಿ ಪಂಪ ತನ್ನ 'ಆದಿಪುರಾಣ'ದಲ್ಲಿ ಬಳ್ಳಿಯೊಂದನ್ನು ಲತಾ ನರ್ತಕಿಯಾಗಿ ವರ್ಣಿಸಿದ್ದಾನೆ.

ಅಳಿ ನಿನದದ, ಮದಕೋಕಿಳ ಕಳನಿನದದ ಜತಿಯೋಳ್
ಅಭಿನಯಂ ನಗಳ್ವಿನೆಗಂ
ಲಳಿತಮನೇನಾಡಿಸಿದನೊ
ಮಲೆಯಾನಿಳನರ್ತಕಂ ಲತಾನರ್ತಕಿಯಂ
ಅಂಕುರ ಪಲ್ಲದ ಕುಸುಮಾಲಂಕಾರದ ಚೂತಲತಿಕೆ
ನರ್ತಕಿಯೋಲ್
ತನ್ನಂಕುರದಿಂ ಶಾಖೆಯಿನೇನಂಕುರ ಶಾಖಾಖಭಿನಯಮನ್
ಅಭಿನಯಿಸಿದುದೋ! ಆದಿಪುರಾಣ (೧೧–೧೯–೯೨)

ಚೈತ್ರಮಾಸದಲ್ಲಿ 'ಮಲಯಾನಿಲ ನರ್ತಕ' ಲತಾನಟಿಯನ್ನು ಆಡಿಸುತ್ತಾನೆ. ಚೂತಲತಿಕೆ ತನ್ನ ಅಂಕುರ ಪಲ್ಲವದಿಂದ ಸುಂದರವಾಗಿ ಅಭಿನಯಿಸುತ್ತಾಳೆ ಎನ್ನುವುದು ಇಲ್ಲಿ ಅನುಭವದ ಅಭಿವ್ಯಕ್ತಿಯಾಗಿದೆ.

ಭೂಮಿಯನ್ನು ತಾಯಿಯೆಂದು ಭಾವಿಸುವುದು ವಾತ್ಸಲ್ಯಮಯಿ ರೂಪದ ತಾಯಿ ಮಗು ಸಂಬಂಧ ಸಾಧಾರಣ ಸಂಗತಿ ಆ ವಾತ್ಸಲ್ಯಮಯ ರೂಪವಾದರು ಅದೆಷ್ಟು ಅಪ್ಯಾಯಮಾನ ಎಂಬುದು 'ಭೂಮಿತಾಯಿ'[೧] ಕವನದಲ್ಲಿ ಬಿಂಬಿತವಾಗಿದೆ.

ಮೈ ತುಂಬಾ ಬಾಯಿ ನೀನು
ತುಟಿ ಮುದ್ದು ನನ್ನ ಪಾಲು
ಎದೆಯೊಳ ಮೊಲೆಯು ನೀನು
ಮೈ ತುಂಬ ನನಗೆ ಹಾಲು

ಕಂಡಲ್ಲಿ ನಿನ್ನ ಮುಖವು
ಕಣ್ತುಂಬ ನನಗೆ ಸುಖವು
ನೆಲದುದ್ದ ತೊಡೆಯು ನಿನಗೆ
ಮನಸಾರೆ ನಿದ್ದೆ ನನಗೆ

ಹೀಗೆ ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕನ್ನಡ ಕಾವ್ಯದಿಂದ ಹಿಡಿದು ಆಧುನಿಕ ಕನ್ನಡ ಕಾವ್ಯದವರೆಗೂ ಪ್ರಕೃತಿಯ ನಾನಾ ಮುಖಗಳನ್ನು ರೂಪಕದಲ್ಲಿ ಕವಿಕಾವ್ಯದ ಮೂಲಕ ವರ್ಣಿಸಿರುವುದನ್ನು ಕಾಣಬಹುದಾಗಿದೆ.

ಪ್ರಕೃತಿಯ ಸೌಂದರ್ಯ ಮತ್ತು ಕ್ರೌರ್ಯ

ಕನ್ನಡ ಕಾವ್ಯ ಪ್ರಪಂಚದ್ಲಲಿ ನಿಸರ್ಗದ ವರ್ಣನೆ ಯಥೇಚ್ಛವಾಗಿರುವುದು ಕಂಡುಬರುತ್ತದೆ. ನಮ್ಮ ಕವಿಗಳು ಅಲೆ ಅಲೆಯಾಗಿ ಹೊಮ್ಮುವ ಪ್ರಕೃತಿ ಸೌಂದರ್ಯದ ಸಾಗರದಾಳಕ್ಕೆ ಮುಳುಗಿ ರಸಾನುಭವವನ್ನು ಪಡೆದಿದ್ದಾರೆ. ಅವರಿಗೆ ಈ ಒಂದು ಅನುಭವ ಇಂದ್ರಿಯಾನುಭವವಾಗಿರದೆ ಆಧ್ಯಾತ್ಮದ ಔನ್ನತ್ಯಕ್ಕೇರುವ ಸ್ವರ್ಣ ಸೋಪಾನವೂ ಆಗಿದೆ ಎನ್ನಬಹುದು.

ಪ್ರಕೃತಿಯ ಒಂದು ಮುಖ ಸುಕೋಮಲವೂ, ಲಲಿತಮೋಹಕವೂ ಮಂಗಳಕರವೂ ಆದ ರಮಣೀಯ ಸೌಂದರ್ಯವಾಗಿದ್ದರೆ ಇನ್ನೊಂದು ಮುಖ

೧. ಭೂಮಿತಾಯಿ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೨೫.

ಭಯಾನಕವೂ, ಹಿಂಸಾತ್ಮಕವೂ, ವಿನಾಶಕವೂ ಆದ ಅಸಹನೀಯ ಕ್ರೌರ್ಯದ್ದು. ಪ್ರಕೃತಿಯ ಮೂಲಸ್ಥಿತಿ ಎಂದರೆ ಹಿಂಸೆ ಮತ್ತು ಪ್ರೀತಿ ಅಥವಾ ಆನಂದ ಮತ್ತು ದುಃಖವನ್ನು ಕೊಡುವುದು. ಪ್ರಕೃತಿ ಸೌಂದರ್ಯಕ್ಕೂ ಸಹ ಈ ಮಾತು ಅನ್ವಯಿಸುತ್ತದೆ. ಪ್ರಕೃತಿಯ ವಿನಾಶಕರ ಹೆಜ್ಜೆಗಳು, ರುದ್ರ ರಮಣೀಯ ನಾಟಕದ ಒಂದು ಅಂಗವಾಗಿ ತೋರುತ್ತಿವೆ. ಇದನ್ನೇ ಜಿ.ಎಸ್.ಶಿವರುದ್ರಪ್ಪ ಅವರು ಹೀಗೆ ಪರಿಭಾವಿಸಿದ್ದಾರೆ. "ಸೌಂದರ್ಯಾನುಭವವೆಂದರೆ ಕೇವಲ ಆಹ್ಲಾದಕಾರಿಯಾದ, ಸಂತೋಷಕಾರಿಯಾದ ಅನುಭವ ಎಂದಲ್ಲ, ಹರ್ಷವಾಗಲೀ, ಶೋಕವಾಗಲೀ ಏನೇ ಆಗಲೀ ರಸತ್ವಕ್ಕೇರಿದರೆ ಅದು ಸೌಂದರ್ಯಾನುಭವವೇ."[೧] ಹೀಗೆ ಪ್ರಕೃತಿಯ ಸೌಂದರ್ಯ ಮತ್ತು ಕ್ರೌರ್ಯ ಒಂದು ನಾಣ್ಯದ ಎರಡು ಮುಖಗಳಾಗಿವೆ. ಪ್ರಕೃತಿ ಬಗೆಗಿನ ಉತ್ಕಟ ಪ್ರೀತಿ, ಗಾಢನುರಾಗವಿದ್ದಾಗ ಮಾತ್ರ ಪ್ರಕೃತಿ ಸೌಂದರ್ಯದ ರಸಸ್ವಾಧನೆಯಲ್ಲಿ ಮುಳುಗಲು ಸಾಧ್ಯ ಎಂದು ತಿಳಿಯಬಹುದಾಗಿದೆ.

ಪಂಪ ತನ್ನ ಪ್ರತಿಭಾಶಕ್ತಿಯಿಂದ ಹರಿಯುವ ಹೊಳೆಯ ಚೆಲುವಿನ ಚಿತ್ರಣವನ್ನು ದರ್ಶಿಸಿರುವುದು ಅದ್ಭುತವಾದುದು.

ಕೊಂಕಿದ ಕೊಂಕು ತದ್ವಿಷಯ ಕಾಂತೆಯ ಪುರ್ವಿನ ಕೊಂಕಿನಂತೆ ಚೆ
ಲ್ವಕುಡೆ, ತಟ್ಟಿರಟಿ ತಡಿಯ ಪೂಮರದಿಂ ಕಟುವೂಗಳತ್ತಮಿ
ತ್ತಂ ಕವಿದಲ್ಲಿ ಮೆಲ್ಲನುಗೆ, ತೇಂಕುವ ಪೂವಿನ ಸಂಕರಂಗಳಂ
ನೂಕುವುವೂರ್ಮಿಮಾಲಿನಿಯ
ತುಂಗ ತರತ್ತರಲೋರ್ಮಿಮಾಲೆಗಳ್(ಆದಿಪುರಾಣ ೧-೬೧)

ನದಿ ಅರ್ಧ ಚಂದ್ರಾಕಾರದ ಕೊಪಂಕಿನಲ್ಲಿ, ತಿರುವಿನಲ್ಲಿ ಹರಿಯುತ್ತಿದೆ ನದಿಯ ಎರಡು ಇಕ್ಕೆಲಗಳಲ್ಲಿ ಸೊಂಪಾಗಿ ಬೆಳೆದು ನಿಂತಿರುವ ಗಿಡಮರಗಳ ಸಾಲು ಅ ಮರಗಳ ತುಂಬಾ ಬಣ್ಣ ಬಣ್ಣ ಹೂವು ಅರಳಿ ರಾಶಿ ರಾಶಿಯಾಗಿ ನೀರಿಗೆ ಉದುರುತ್ತಿವೆ ಹರಿಯುತ್ತಿರುವ ಹೊಳೆಯ ತರಂಗ ಮೆಲೆ ಬಿದ್ದು ತೇಲುವ ಹೂವಿನ ರಾಶಿಯನ್ನು ನೂಕುತ್ತಾ ಸಾಗಿವೆ. ಬಾಗಿದ ಹೊಳೆಯ ಸುಂದರ ನೋಟ ಆ ನಾಡಿನ ಅದಿ ದೇವತೆಯ ಕೊಂಕಿನ ಹುಬ್ಬಿನಂತೆ ತೋರಿತು ಎನ್ನುವ ಕವಿ. ಇಡೀ ದೃಶ್ಯವನ್ನು ಕಣ್ಣಮುಂದೆ ತಂದು ನಿಲ್ಲಿಸಿದ್ದಾನೆ. ಆ ಹೊಳೆ ಆ ತರಂಗ, ಆ ಹೂವು ಎಲ್ಲಾವೂ ಸೇರಿ ಒಂದು ಅದ್ಭುತ ಕಲ್ಪನೆಯನ್ನು ರೂಪಕವಾಗಿ ನೀಡಿರುವ ಕವಿ ಪ್ರತಿಭಾಶಕ್ತಿ ನಮ್ಮನ್ನು ಪುಳಕಗೊಳಿಸುತ್ತದೆ.

---

೧. ಜಿ.ಎಸ್.ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಪು. ೨೭.

ನವೋದಯ ಕಾಲಕ್ಕೆ ಬಂದರೆ ಆಗಿನ ಕವಿಗಳಿಗೆ ಪ್ರಕೃತಿಯ ಅನುಸಂಧಾನ ಕೇವಲ ರಸಸ್ವಾದನೆಯಾಗಿದೆ. ಉಪಾಸನೆಯೂ ಆಗಿದ್ದದು ವಿಶೇಷ ನವೋದಯ ಕವಿಗಳಲ್ಲಿ ಪ್ರಕೃತಿ ಸೌಂದರ್ಯ ಕೋಮಲವಾಗಿ ಪ್ರಜ್ವಲಿಸುತ್ತದೆ.

ಜಿ.ಎಸ್. ಶಿವರುದ್ರಪ್ಪನವರ 'ಒಂದು ಬೆಳಗು'[೧] ಎಂಬ ಕವನದಲ್ಲಿ ಸೂರ್ಯೋದಯದ ಸೊಬಗನ್ನು ತುಂಬಾ ಸೊಗಸಾಗಿ ಕಟ್ಟಿಕೊಟ್ಟಿರುವುದನ್ನು ಇಲ್ಲಿ ಕಾಣಬಹುದು.

ಉದಯಗಿರಿ ಶಿವಕರುಣೆ ಮೋಡಗಳ ಕೊತ್ತಳಕೆ
ಮೊದಲ ಬೆಳಕಿನ ಚೆಲುವ ಧ್ವಜವ ನೆಟ್ಟು
ಗಿರಿ ಶಿಖರದ ಮರಮರದ ತಳಿರ ತುಟಿಯೊಳು ತನ್ನ'
ಅನುರಾಗವಿಟ್ಟು
ಬರುತಿಹುದು ನೋಡದೋ ಕೊಳ ಚರಂಡಿಯಜಲಕು
ಬಂಗಾರಗಳ ಬದುಕ ದಾನಕೊಟ್ಟು
ಬಂದ ಮಂದಾನಿಲಯ ಮಿದು ಬೆರಳು ನೆವರಿಸಿತ್ತು
ಕಾತರದಿ ಕಾಯುತಿಹ ತರುಲತೆಯ ತಲೆ ನವಿರ
ಬಲು ನಲ್ಮೆಯಿಂದ
ಹಕ್ಕಿ ಚಿಲಿಪಿಲಿದನಿಗೆ ಮರ ಮರದ ಎದೆಯಾಯ್ತು
ಬವಪೂರಿತ ಕವಿಯ ಮನಸಿನಂದ!

ಮೊಡಗಳ ಕೋಟೆಯ ಮೇಲೆ ಉದಯಗಿರಿಯ ಶಿವಶರಣೆ ತನ್ನ ಮೊದಲ ಚೆಲುವನ ಧ್ವಜವನ್ನು ನೆಟ್ಟು, ಬೆಟ್ಟಗುಡ್ಡದ ಮರಮರದ ಚಿಗುರಿನಲ್ಲಿ ತನ್ನ ಅನುರಾಗವನ್ನಿಟ್ಟು ಬರುತಿಹುದು ಎಂದು ಕವಿ ಸೂರ್ಯೋದಯ ಚೆಲುವನ್ನು ಮನೋಹರವಾದ ರೀತಿಯಲ್ಲಿ ಬಣ್ಣಿಸಿದ್ದಾರೆ ಹಾಗೆಯೇ ಪ್ರಕೃತಿಯಲ್ಲಿ ಕಂಡುಬರುವ ಹಿಂಸೆಯನ್ನು ಪ್ರಧಾನವಾಗಿ ವರ್ಣಿಸಿರುವ ಕವಿತೆ 'ಜಡವಾದಿ'[೨]ಯೊಬ್ಬ ಭೂಮಿಯ ಸಂಕಷ್ಟದ ಬದುಕನ್ನು ವರ್ಣಿಸುತ್ತ ಹೋಗುವಂತೆ ನಿರೂಪಿಸಲಾಗಿದೆ.

ಎಲೆ ಭೂಮಿ ರಾಣಿ
ನೀನಳು ಹೊರೆ ಹೊರುವ

---

೧. ಜಿ.ಎಸ್.ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಪು. ೨೭.

೨. ಕುವೆಂಪು, ಪಂಚಜನ್ಯ, ಪು. ೨೬.

ಬರಿ ದೊಡ್ಡ ದೋಣಿ
ತಾಯಂತೆ, ತಾಯಂತೆ

ಹೀಗೆ ಭೂಮಿಯನ್ನು ಗೇಲಿ ಮಾಡುತ್ತಾ ಜಡವಾದಿಯ ಮೂಲಕ ಪ್ರಕೃತಿಯ ಕ್ರೌರ್ಯದ ಕಡೆ ಕವಿ ಗಮನ ಹರಿಸುತ್ತಾರೆ.

'ಸವಿಗನಸುಗಳು ಸಿಡಿದು
ಜಾಳಾಗುತಿರಲಿ
ಹಗಲಿರುಳು ಉರುಳುರುಳು
ಓ ಭೂಮಿ ರಾಕ್ಷಸಿಯೇ'[೧]

ದಾಸಿಯಾದ ವಸುಂದರಿ ಸುಮ್ಮನೆ ಉರುಳುತ್ತಾ ಹೋಗುತ್ತಾಳೆ. ಇತಿಹಾಸದಲ್ಲಿ ನಡೆದಂತಹ ಕ್ರೂರ ಘಟನೆಗಳನ್ನು ತನ್ನೊಳಗೆ ಅಡಗಿಸಿಕೊಂಡಿರುವ ಧರೆಯ ಒಡಲಲ್ಲಿ ಬೃಹತ್ ಸ್ಮಶಾನವೇ ಅಡಗಿದೆ ಎಂದು 'ಜಡವಾದಿ' ಘೋಷಿಸುತ್ತಾನೆ. ಇಲ್ಲಿ ಭೂಮಿಯು ಸಂಪೂರ್ಣವಾಗಿ ಹಿಂಸೆ, ಕ್ರೌರ್ಯದಿಂದ ಕೂಡಿದ್ದು ಎನ್ನುವ ದೃಷ್ಟಿಕೋನವಿದೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿಯ ಸೌಂದರ್ಯ ಮತ್ತು ಕ್ರೌರ್ಯಗಳೆರಡನ್ನೂ ಸಹ ಬಿಂಬಿಸಿರುವುದನ್ನು ಕಾಣಬಹುದಾಗಿದೆ.

---

೧. ಕುವೆಂಪು, ಪಂಚಜನ್ಯ, ಪು. ೨೬.

ಅಧ್ಯಾಯ ನಾಲ್ಕು

ಸಾಹಿತ್ಯದಲ್ಲಿ ಪ್ರಕೃತಿ

ಕನ್ನಡ ಸಾಹಿತ್ಯದಲ್ಲಿ ಪ್ರಕೃತಿಯ ವೈವಿಧ್ಯಮಯ ಸಂಪ್ರದಾಯಬದ್ಧ ರೀತಿಯ ನಾನಾ ವರ್ಣನೆಗಳನ್ನು ಕಾಣುತ್ತೇವೆ. ಅಷ್ಟದಶ ವರ್ಣನೆಯ ಅಂಗವಾಗಿ ಪ್ರಕೃತಿಯ ವರ್ಣನೆಯನ್ನು ಆಗಿನ ಕವಿಗಳು ಮಾಡಿದ್ದರೂ ಸಹ ಅಲ್ಲಲ್ಲಿ ಕೆಲವು ಪ್ರತಿಭಾಶಾಲಿಗಳಾದ ಕವಿಗಳು ತಮ್ಮ ಪ್ರತಭಾಶಕ್ತಿಯನ್ನು ಬಳಸಿಕೊಂಡು ಉತ್ತಮ ಸೃಜನಶೀಲ ವರ್ಣನೆಮಾಡಿ ಕಾವ್ಯದ ಸೊಬಗನ್ನು ಶ್ರೀಮಂತಗೊಳಿಸಿದ್ದಾರೆ.

ಅಷ್ಟದಶವರ್ಣನೆಯ ಸಂದರ್ಭದಲ್ಲಿ ಬರುವ ಪ್ರಕೃತಿ ವರ್ಣನೆಗಳಲ್ಲಿ ಹೆಚ್ಚಿನವು ಬಹಳಷ್ಟು ಯಾಂತ್ರಿಕ ಹಾಗೂ ನೀರಸದಿಂದ ಕೂಡಿರುವುದು ಕಂಡುಬರುತ್ತದೆ. ಕಾವ್ಯವನ್ನು ರಚಿಸುವಾಗ ಅಷ್ಟದಶವರ್ಣನೆಯ ಅವಶ್ಯಕತೆ ಇರಲಿ ಅಥವಾ ಇಲ್ಲದಿರಲಿ ಲಾಕ್ಷಣಿಕರು ಹೇಳಿದ ಹದಿನೆಂಟು ವರ್ಣನೆಯನ್ನು ಸಂದರ್ಭಕ್ಕೆ ತಕ್ಕಂತೆ ಕಾವ್ಯದಲ್ಲಿ ಸೇರಿಸಲೇಬೇಕಿತ್ತು. ನಿಯಮ ಮೀರಿದರೆ ಆ ಕಾವ್ಯಕ್ಕೆ ಮಾನ್ಯತೆ ದೊರೆಯುತ್ತಿರಲಿಲ್ಲ. ಆದ್ದರಿಂದ ಸಂಪ್ರದಾಯಕ್ಕೆ ಶರಣಾಗಿದ್ದರು. ಅಂಥಹ ನಿರ್ಭಂಧದ ನಡುವೆಯೂ ಪಂಪ, ಜನ್ನ, ನಾಗಚಂದ್ರ ಮುಂತಾದವರು ತಮ್ಮ ಪ್ರತಿಭಾಶಕ್ತಿಯನ್ನು ಮೆರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಯಾವುದೇ ಕಟ್ಟುಪಾಡುಗಳಿಲ್ಲದೆ ಸಂಪೂರ್ಣ ಸ್ವಾತಂತ್ರವಾಗಿ ಪ್ರಕೃತಿ ವರ್ಣನೆ ಮಾಡಿರುವುದನ್ನು ನೊಡಬೇಕಾದರೆ ಇಪ್ಪತ್ತನೇ ಶತಮಾನದ ನವೋದಯ ಸಾಹಿತ್ಯಕ್ಕೆ ಬರಬೇಕಾಗುತ್ತದೆ. ಈ ಕಾಲಘಟ್ಟದ ಕವಿಗಳು ಯಾವುದೇ ಲಾಕ್ಷಣಿಕರ, ರಾಜ–ಮಹಾರಾಜರ ಅದೀನಕ್ಕೆ ಒಳಗಾಗದೇ ಸಂಪೂರ್ಣ ಸ್ವತಂತ್ರವಾಗಿ ಕಾವ್ಯವನ್ನು ರಚಿಸಿ ತಮ್ಮ ಅನುಭವ, ಅಭಿವ್ಯಕ್ತಿಗೆ ತಕ್ಕಂತೆ ಪ್ರಕೃತಿ ವರ್ಣನೆ ಮಾಡಿರುವುದನ್ನು ಕಾಣಬಹುದು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿ:

ಅಷ್ಟದಶ ವರ್ಣನೆಯ ಅಂಗವಾಗಿ ಪ್ರಕೃತಿ

ಅಷ್ಟದಶ ವರ್ಣನೆಯ ಅಂಗವಾಗಿ ಪ್ರಕೃತಿಯ ವೈವಿಧ್ಯಮಯ ಸಂಪ್ರದಾಯಬದ್ಧ ರೀತಿಯ ನಾನಾ ವರ್ಣನೆಗಳನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ಪ್ರಕೃತಿ ಕುರಿತಾದ ನೈಜ ರಸಾನುಭವ ಇರಲೇಬೇಕಾಗಿರಲಿಲ್ಲ. ಅಂತಹ ವರ್ಣನೆಗೆ

ಲಾಕ್ಷಣಿಕರ ನಿರ್ಬಂಧವೇ ಮುಖ್ಯ ಕಾರಣವಾಗಿತ್ತು. ಇಂತಹ ಕಟ್ಟುಪಾಡುಗಳಿಂದ ಕನ್ನಡಸಾಹಿತ್ಯ ಹೊಸತನವಿಲ್ಲದೆ ಸೊರಗಿತ್ತು. ಡಿ.ಎಲ್.ಎನ್. ಅವರು ಹೇಳುವಂತೆ "ಲಾಕ್ಷಣಿಕರ ನಿರ್ಬಂಧವು ಚಿನ್ನದ ಸಂಕೋಲೆಯ ಹಾಗಿದೆ. ಕೆಲವು ಕನ್ನಡ ಕಾವ್ಯವನ್ನು ಓದಿದರೆ ಅವರು ಮಾಡಿರುವ ಕಟ್ಟುಗಳು ಅತ್ಯಂತ ಅವಶ್ಯಕ-ವಾದುದೆನಿಸುತ್ತದೆ. ಆದರೆ ಒಳಹೊಕ್ಕು ನೋಡಿದರೆ ತಿರುಳಿಲ್ಲ"[೧].

ಹೀಗೆ ಪರಂಪರಾನುಗತವಾಗಿ ಬಂದ ಕಟ್ಟುಪಾಡುಗಳು ಕವಿಯ ಸೃಜನಶೀಲತೆಯನ್ನು ನಿರ್ಬಂಧಕ್ಕೆ ಒಳಪಡಿಸಿ, ಅವರು ಹೊಸರೀತಿ ಯೋಚಿಸಲು ಸ್ವತಂತ್ರವಾಗಿ ಕೃತಿ ರಚಿಸಲು ಅಡ್ಡಿಯಾದದ್ದು ನಿಜ ಎಂಬುದು ಮನಗಾಣಬೇಕಾಗುತ್ತದೆ.

ಉದಯಾದಿತ್ಯ ಎಂಬ ಲಾಕ್ಷಣಿಕನ ಪ್ರಕಾರ ಅಷ್ಟದಶ ವರ್ಣನೆ ಎಂದರೆ

ಉದದಿ ಪುರಾಧಿವ ಸುತ ಮಂ
ತ್ರಿ ದೂತ ಗಮನಾಜ ವಿರಹ ಪರಿಣಯ ಸುರತ।
ರ್ತು ದಿನೇಶ ಚಂದ್ರ ಮಧು ಕುಬೈ
ದುದಕ ವನಸ್ಪತಿಯೆ ಕೃತಿಗೆ ಪದಿನೆಂಟಂಗಂ॥

ಮೇಲೆ ಹೇಳಿರುವ ವರ್ಣನೆಗಳಲ್ಲಿ ಏಳು ಮಾತ್ರ ಕೃತಿಗೆ ಸಂಬಂಧಿಸಿವೆ ಅವುಗಳೆಂದರೆ ಕಾಡು ಕಡಲಿನ ವರ್ಣನೆ, ಋತುವರ್ಣನೆ, ಸೂರ್ಯಚಂದ್ರ ವರ್ಣನೆಗಳಾಗಿ ಕಾಣಬಹುದಾಗಿದೆ.

೧) ಕಾಡು ಕಡಲಿನ ವರ್ಣನೆ: ಕಾಡಿನ ರುದ್ರ ರಮಣೀಯತೆ, ಭವ್ಯತೆಯ ಎದುರು ಮಾನವ ತನ್ನ ಕುಬ್ಜತನವನ್ನು ಅರಿಯುತ್ತಾನೆ. ಪ್ರಾಚೀನ ಕನ್ನಡ ಕವಿಗಳು ತಾವು ಕಂಡ ಬೆಟ್ಟಗುಡ್ಡ, ಮರಗಿಡ, ಹೂವು ಬಳ್ಳಿಗಳು ಹುಲ್ಲಿನ ಪೊದೆಗಳು, ಕ್ರೂರಮೃಗಗಳು, ಪ್ರಾಣಿಪಕ್ಷಿಗಳು ಮುಂತಾದವುಗಳನ್ನು ತಾನು ಕಂಡಂತೆ ಸಹಜವಾಗಿ ವರ್ಣಿಸದೆ ಮಲ್ಲಿಕಾರ್ಜುನನ ಶ್ರೀಶೈಲ ಪರ್ವತವನ್ನು ಅನುಸರಿಸಿರುವುದು ಕಂಡುಬರುತ್ತದೆ. ಕವಿ ತಾನು ವರ್ಣಿಸುತ್ತಿರುವುದು ತನ್ನ ಸುತ್ತಮುತ್ತಲೂ ಇರುವ ಬೆಟ್ಟಗುಡ್ಡ ಕಾಡುಗಳನ್ನು ಎಂದು ನಮಗೆ ಮನದಟ್ಟು ಮಾಡಲು ತಪ್ಪಿದ್ದಾನೆ. ತಾನು ಕಂಡ ಅರಣ್ಯದ ರೌದ್ರ ಸೌಂದರ್ಯದ ನಿಜಸ್ಥಿತಿಯನ್ನು ಏಕೆ ಚಿತ್ರಿಸದೆ ಹೋದರೋ ಎನ್ನುವುದಕ್ಕೆ ಉತ್ತರವಿಲ್ಲದಂತಾಗಿದೆ. ಅದು ಕೃತಕವಾಗಿದ್ದು ಚಿತ್ರ ವಿಚಿತ್ರ ವಸ್ತುಗಳ ಒಂದು ಸಮೂಹವಾಗಿ ಕಂಡುಬರುತ್ತದೆ.

---

೧. ಡಿ.ಎಲ್.ಎನ್, ಪೀಠಿಕೆಗಳು, ಲೇಖನಗಳು, ಪು. ೫೪೧.

ನಮ್ಮ ಪ್ರಾಚೀನ ಕವಿಗಳಲ್ಲಿ ಕಾಡಿನ ಹೆಮ್ಮರಗಳ ದೈತ್ಯಾಕಾರವನ್ನಾಗಲೀ, ಅರಣ್ಯದ ಭವ್ಯ ವಿಸ್ತಾರವನ್ನಾಗಲೀ ನಾವು ಕಾಣಲು ಸಾಧ್ಯವಿಲ್ಲ. ಆದರೆ ಪಂಪ, ರಾಘವಾಂಕ, ಲಕ್ಷ್ಮೀಶ, ಇವರಿಗೆ ಕಾಡಿನ ಎಲ್ಲಾ ಪರಿಚಯವಿದೆ ಎಂದು ಹೇಳಬಹುದಾಗಿದೆ.

ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಅರಣ್ಯದ ರೌದ್ರ ಸೌಂದರ್ಯವನ್ನು ಹೀಗೆ ವರ್ಣಿಸಿದ್ದಾನೆ.

'ಅದು ಮದದಂತಿ ದಂತ ಮಸಲ ಪ್ರವಿಭಗ್ನ ಮಹಾಮಹೀರುಹಾ
ಸ್ಪದಮ್, ಅದು ಸಿಂಹನಾದ ಜನಿತ ಪ್ರತಿಶಬ್ದ ಮಹಾ ಭಯಾನಕ
ಪ್ರದಮ್, ಅದು ನಿರ್ಝರೋಚ್ಚಳಿತ ಶೀಕರ ಶೀಕಳವಾತ ನರ್ತಿತೋ
ನ್ಮದ ಶಬರೀ ಜನಕಳಾಮ್, ಅದು ಆಯತ ವೇತ್ರಲತಾ ವಿತಾನಕಂ'

(ಪಂಪಭಾತರ-೩-೧೦)

ಮದವೇರಿದ ಆನೆಯ ಮುಸಲ ಸದೃಶ್ಯವಾದ ದಂತದಿಂದ ಭಗ್ನವಾದ ದೊಡ್ಡ ದೊಡ್ಡ ಮರಗಳು, ಸಿಂಹನಾದದಿಂದ ಉಂಟಾದ ಪ್ರತಿ ಶಬ್ದಗಳಿಂದ ಮಹಾ ಭಯಾನಕ ಆವರಣ, ನಿರ್ಝರಿಣಿಯ ಶೀಕರದಿಂದ ಶೀತವಾದ ತಂಗಾಳಿಯಿಂದ ಕುಣಿವ ಮುಂಗುರುಳುಳ್ಳ ಶಬರೀ ಜನರು, ವಿಶಾಲವಾದ ಬೆತ್ತಬಿದಿರಿದ ಕಾಡು ಎನ್ನುವ ಹಲವಾರು ಚಿತ್ರಗಳನ್ನು ಬಣ್ಣಿಸಿದ್ದಾನೆ.

ವನಸ್ಪತಿಗಳೆಲ್ಲಾ ಕವಿಗಳ ಆದರಕ್ಕೆ ಪಾತ್ರವಾದ ಮಾವಿನ ಮರವನ್ನು ವರ್ಣಿಸಬೇಕಾದರೆ ಕೋಗಿಲೆಯ ಇಂಚರ, ದುಂಬಿಗಳ ಝೇಂಕಾರ, ಗಿಳಿಗಳ ದಿಂಡು ಮುಂತಾದವನ್ನು ದರ್ಶಿಸಿ ನಂತರ ಮಾವಿನ ಮರವನ್ನು ವರ್ಣಿಸಬೇಕಿತ್ತು. ಹಾಗೆ ನೊಡಿದರೆ ಮಾವಿನ ಮರದ ವ್ಯಕ್ತ ಸೌಂದರ್ಯವನ್ನು ವರ್ಣಿಸುವ ಪಂಪನಿಗೆ ಅದು ಚೈತನ್ಯಶೀಲವಾಗಿ ಕಾಣುತ್ತದೆ. ಹಾಗೂ ಅಂತಃಪ್ರೇರಣ ಶಕ್ತಿಯುಳ್ಳದ್ದಾಗಿಯೂ ಕಾಣಿಸುತ್ತದೆ ಆದ್ದರಿಂದ

ತಳಿರೊಳ್ ನೀನೆ ಬೆಡಂಗನಯ್, ನನೆಗಳೊಳ್ ನೀಂನೀಟನ್ನೈ
ಪುಷ್ಪ ಸಂಕುಳದೊಳ್ ನೀನೆ ವಿಲಾಸಿಯ್ಯೈ
ಮಿಡಿಗಳೊಳ್ ನೀ ಚೆಲ್ವನ್ನೈ
ಪಣ್ತ ಪಣ್ಗಳಿನೋವೋ ಪೆಟತೇನೂ ನೀನೆ ಭುವನಕ್ಕಾರಾಧ್ಯನ್ನೈ
ಭೃಂಗ ಕೋಕಿಲ ಕೀರಪ್ರಿಯ ಚೂತರಾಜ
ತರುಗಳ್ ನಿನ್ನಂತೆ ಚೆನ್ನಂಗಳೇ.... (ಆದಿಪುರಾಣ, ೧೧-೯)

ಬಹುಕಾಲದಿಂದಲೂ ಮಾವಿನ ಮರವನ್ನು ಕಂಡು ಒಲಿದ ಕವಿಯ ಹೃದಯಾನುಭೂತಿ ಸುಂದರ ಪ್ರಶಂಸೆಯೊಂದರಲ್ಲಿ ತನ್ನ ಬಿಡುಗಡೆ ಪಡೆದಿದೆ. ಕವಿ ಮಾವಿನ ಮರದ ಕೆಂದಳಿರುಗಳ ಕೋಮಲತೆಯನ್ನೂ, ಹೂವುಗಳ ಬೆಡಗನ್ನೂ, ಮಾವಿನ ಕಾಯಿಗಳ ಸೊಗಸನ್ನೂ, ಹಣ್ಣಿನ ಸವಿಯನ್ನೂ ವರ್ಣಿಸುತ್ತಾ ಅದನ್ನ ಭುವನೈಕರಾಧ್ಯನೆಂದು ಕರೆದು ಗೌರವಿಸುತ್ತಾನೆ. ಕೊನೆಗೆ ಭೃಂಗ, ಕೋಕಿಲ, ಕ್ಷೀರ, ಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ ಎಂದು ಸಂತೋಷ ಭಾವದಿಂದ ಬಣ್ಣಿಸಿದ್ದಾನೆ.

ಲಾಕ್ಷಣಿಕರ ಪ್ರಕಾರ ಅಷ್ಟದಶ ವರ್ಣನೆಯಲ್ಲಿ ಮೊದಲನೇ ಸ್ಥಾನ ಕಡಲ ವರ್ಣನೆಗೆ. ಈ ವರ್ಣನೆಗೆ ಒಂದು ನಿಯಮವಿತ್ತು ಅದೆಂದರೆ- ಜಳದಿಯೊಳೆ ತಿಮಿತಿಮಿಂಗಿಳಗಿಗಳ ಮಕರ ಪ್ರಕರ ಶಂಖ ಸಂಭವಮಕ್ಕ" ಎಂಬುದನ್ನು ಅನುಸರಿಸಬೇಕಿತ್ತು. ಈ ನಿಯಮವನ್ನು ಎಲ್ಲಾ ಕವಿಗಳು ಒಪ್ಪಿ ಅದೇರೀತಿ ಅನುಸರಿಸುತ್ತಾ ಬಂದಿದ್ದಾರೆ. ಹಾಗೆಯೇ ದುರ್ಗಸಿಂಹ, ಹರಿಹರ, ಲಕ್ಷ್ಮೀಶ, ಪದ್ಮಣಾಂಕ ಇವರೂ ಸಹ ಲಾಕ್ಷಣಿಕರ ನಿಯಮವನ್ನು ಒಪ್ಪುತ್ತಲೇ ಸ್ವಲ್ಪ ಸ್ವಾತಂತ್ರ್ಯವನ್ನು ವಹಿಸಿದ್ದಾರೆ. ಅಂದಿನ ಕವಿಗಳಲ್ಲಿ ಕಡಲಿನ ವರ್ಣನೆಯನ್ನು ಸೆರೆ ಹಿಡಿದವನೆಂದರೆ ರತ್ನಾಕರವರ್ಣಿಯೊಬ್ಬನೇ. ಅವನು ತಾನು ನೋಡಿ ಆನಂದಿಸಿದ ಸಮುದ್ರದ ಸೊಬಗನ್ನು ತನ್ನದೇ ಆದ ಶೈಲಿಯಲ್ಲಿ ಚಿತ್ರಿಸಿದ್ದಾನೆ.

ಕಡಲ ತಡಿಯ ಕರುಮಾಡದಿಂದ ಭರತ ಚಕ್ರಿಯ ಅರಮನೆಯ ರಾಣಿಯರು ಸನಿಹದ ಕಡಲನ್ನು ಕಂಡಿದ್ದು ಹೀಗೆ.

"ಅಟ್ಟುವ ತೆರೆಯ ಮುಂದೋಡುವ ತೆರೆಯಾ ಪೆ
ರ್ಬೆಟ್ಟದಂತೇಳ್ವ ತೆರೆಗಳಾ
ತೊಟ್ಟನೆ ಬಯಲಹ ತೆರೆಗಳನವರು ಕ
ಣ್ಣಿಟ್ಟು ನೋಡಿದರರ್ತಿವಡುತ
ಎಡೆ ಗತ್ತಿಗಳನಲ್ಲಿಗಲ್ಲಿ ನಿಂದದ್ರಿಯ
ನಿಡಗಲ್ಲುಗಳನದರೊಳಗೆ
ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ
ಹಡಗುಗಳಿರುವ ನೋಡಿದರು

ತುಂತುರು ತೆರೆನೊರೆ ಸುಳಿ ಘುಳುಘುಳುರವ
ತೊಂತಿಟ್ಟ ಹೊಳೆವ ವಾರಧಿಯಾ"

(ಭರತೇಶ ವೈಭವ: ಪೂರ್ವ ಸಾಗರ ದರ್ಶನ ಸಂಧಿ, ೯೫, ೯೬, ೯೭)

ಇಲ್ಲಿ ಪ್ರಮುಖವಾಗಿ ಕವಿ ಕಡಲತೀರ ಪ್ರದೇಶದ ದಕ್ಷಿಣ ಕನ್ನಡ ಜಿಲ್ಲೆಯವನಾಗಿದ್ದು ಸಮುದ್ರದ ವಾಸ್ತವಿಕತೆಯನ್ನು ತಾನು ನೋಡಿಯೇ ವರ್ಣಿಸಿದ್ದಾನೆ.

೨) **ಋತು ವರ್ಣನೆ:** ಕನ್ನಡ ಎಲ್ಲಾ ಕವಿಗಳೂ ಋತು ವರ್ಣನೆಗೆ ತುಂಬಾ ಕುತೂಹಲದಿಂದ ಸ್ಪಂದಿಸಿ, ಬಹಳ ಉತ್ಸಾಹದಿಂದ ವರ್ಣಿಸಿರುವುದು ವಿಸ್ಮಯಕಾರಿಯಾಗಿದೆ.

ವಸಂತಋತು: ವಸಂತಕಾಲ ಕವಿಗೆ ಪ್ರಿಯವಾದ ಕಾಲ, ಆಗ ಪ್ರಕೃತಿಯೆಲ್ಲಾ ಹಸುರಿನಿಂದ ಕಂಗೊಳಿಸುತ್ತಿದ್ದು, ಇಳೆಯಲ್ಲಾ ಹಸಿರಿನಿಂದ ಕಂಗೋಳಿಸುತ್ತಿದ್ದು, ಮರಗಿಡವೆಲ್ಲಾ ಹೂಬಿಟ್ಟಿದ್ದು, ಹಕ್ಕಿಗಳ ಚಿಲಿಪಿಲಿ ಸದ್ದು, ಕೋಗಿಲೆಗಾನ ಗಿಳಿವಿಂಡು ಮುಂಜಾನೆಯ ಕಿರಣ, ಇವೆಲ್ಲಾ ಕವಿ ಜನರನ್ನೂ ತನ್ನೆಡೆಗೆ ಸೆಳೆದಿದೆ.

ಕವಿ ಪಂಪ ವಸಂತಕಾಲದ ರಮ್ಯತೆಯನ್ನು ವರ್ಣಿಸಿರುವ ಬಗೆ ನೂತನವಾಗಿದೆ.

"ಎಳೆವಿಸಿಲೀಗಲೀಗಳೇ ಮುದಿರ್ದುದು ಚೂತ ಕುಜಾತಮೀಗಳೀ
ಗಳೆ ನೆನೆದೊಟಿ ತಿಂದೊಳದಿನುಣ್ಮಿದ ಷಟ್ಪದ ವೃಂದಮೀಗಳೀ।
ಗಳೆ ಮೊರೆದತ್ತು ಚಂದನದ ತಳ್ಳಬಲಾ ನಿಕರಕ್ಕದೀಗಳೀ
ಗಳೆ ನೆಗಟ್ದಿತ್ತಲೇ ಪುಗಿಲದುಗಲೆವೇಡ ವಸಂತರಾಜನಾ॥" (ಆದಿಪುರಾಣ)

ಪಂಪ ವಸಂತ ಮಾಸದ ಅವ್ಯಕ್ತ ಸೌಂದರ್ಯದ ಅತೀಸೂಕ್ಷ್ಮತೆಯನ್ನು ತೋರಿಸಿದ್ದಾನೆ. ಎಳಬಿಸಿಲು ಈಗಷ್ಟೇ ಪ್ರಜ್ವಲಿಸುತ್ತಿದೆ. ಮಾವಿನ ಮರಗಳು ಹೂವು ಬಿಡಲಾರಂಭಿಸಿದೆ. ಈಗತಾನೆ ದುಂಬಿಗಳ ಝೇಂಕಾರ ಮೊರೆಯುತ್ತಿದೆ. ಈಗಲೀಗ ಅಬಲೆಯರ ನಿಖರ ಚಂದನ ತಳಿರುಗಳ ತಳ್ಕೆಯನ್ನು ಆಶಿಸುತ್ತಿದೆ. ಆದ್ದರಿಂದ ವಸಂತಾಗಮನವು ಆಗಲೇಬೇಕು ಎಂದು ಪಂಪ ತನ್ನ ಕಾವ್ಯದಲ್ಲಿ ವರ್ಣಿಸಿರುವ ಬಗೆ ಮೋಹಕವಾದುದು.

ಗ್ರೀಷ್ಮಋತು: ವಸಂತಋತುವಿನ ನಂತರದ ಋತುವಾಗಿದ್ದು ಸುಂದರ ಮನೋಹರವಾದ ವಸಂತಕಾಲದ ಮೇಲೆ ದಾಳಿಮಾಡಿ ಪ್ರಕೃತಿಯನ್ನು ಬಿಸಿಲಿನ ಬೇಗೆಯಿಂದ ಕಂಗೆಡೆಸಿ, ಎಲ್ಲೆಲ್ಲೂ ದೂಳು, ಸೆಕೆ, ದಣಿವು, ಬಾಯಾರಿಕೆ, ಬಂಜೆಮೋಡಗಳು, ದರಿಬಿಟ್ಟ ನೆಲ, ಬಿಸಿಲಿನ ಬೇಗೆಯಿಂದ ತತ್ತರಿಸಿ ನಿಸರ್ಗವು ಕಾಂತಿಹೀನವಾಗಿ ಪ್ರಾಣಿಪಕ್ಷಿಗಳು ಲವಲವಿಕೆ ಕ್ಷೀಣಿಸುತ್ತದೆ ಹಾಗೂ ಮನುಷ್ಯನ ಮೇಲೆ ಆಘಾತವಾದ ಪರಿಣಾಮವನ್ನು ಬೀರುವ ಋತುವಾಗಿದ್ದು ಇದನ್ನು ಪ್ರಾಚೀನ ಕವಿಗಳು ಹೃದಯಸ್ಪರ್ಶಿಯಾಗಿ ವರ್ಣಿಸಿದ್ದಾರೆ.

ಹರಿಹರ ಗ್ರೀಷ್ಮಋತುವಿನ ಬೇಗೆಯನ್ನು ವಿವಿಧ ರೂಪದಲ್ಲಿ ಅದ್ಭುತವಾಗಿ ವರ್ಣಿಸಿದ್ದಾನೆ.

"ಮರದಡಿಯೊಳ್ ಕಾನನದೊಳ್ ಗಿರಿತಟದೊಳ್
ಬಟ್ಟಬಯಲೊಳ್ ಅಂಬರ ತಳದೊಳ್
ಕರಿಯ ಬಿಸಿಲ್, ಉರಿಯ ಬಿಸಿಲ್
ಅಚ್ಚರಿಯ ಬಿಸಿಲ್ ಪಿರಿಯ ಬಿಸಿಲ್
ಅಖಂಡಿತದ ಬಿಸಿಲ್" (ಗಿರಿಜಾಕಲ್ಯಾಣ ೯–೨೩)

ಮರದಡಿಯ ನೆರಳೂ ಸಹ ಕರಿಯ ಬಿಸಿಲಾಗಿದೆ ಎನ್ನುವ ಕವಿ ಕಲ್ಪನೆ ಅದ್ಭುತ ಬಿಸಿಲ ಬೇಗೆಯ ತೀವ್ರತೆಯನ್ನು ತಿಳಿಯಲು ಈ ಸಾಲುಗಳೇ ಸಾಕು.

ವರ್ಷಋತು: ಇದು ಮುಂಗಾರು ಮಲೆಯ ಕಾಲವಾಗಿದ್ದು ಕವಿಗಳಿಗೆ ಅತ್ಯಂತ ಪ್ರೀತಿ ಪಾತ್ರವಾದ ಋತುವಾಗಿದೆ. ಮಳೆಯ ಭಾವ ಭಂಗಿ, ರುದ್ರರಮಣೀಯತೆಯನ್ನು ಕವಿಗಳು ಬಹಳ ಅಂದವಾಗಿ ವರ್ಣಿಸಿದ್ದಾರೆ.

ವರ್ಷ ಋತುವನ್ನು ಸ್ವವಿಸ್ತಾರವಾಗಿ ವರ್ಣಿಸಿರುವವರಲ್ಲಿ ಮೊದಲಿಗ ಷಡಕ್ಷರಿ ಕವಿ ಇವನ ವರ್ಣನೆಯೇ ಉಳಿದ ಕವಿಗಳಿಗೂ ಉತ್ತಮ ಮಾದರಿಯಾದಂತೆ ತೋರುತ್ತದೆ. ಆತ್ಮಸ್ಪರ್ಶಿಯಾದ ಒಂದು ಪದ್ಯದಲ್ಲಿ ಮಳೆಯ ವರ್ಣನೆಯನ್ನು ಹೀಗೆ ಹಿಡಿದಿಟ್ಟಿದ್ದಾನೆ.

"ಘುಡು ಘುಡು ಚಿಟಿಲೆಂದು
ಗ್ಗಡದ ಸಿಡಿಲ್ದನಿಯೆ ಪೊಡೆಯೆ ಗಗನ ಸ್ಥಲದಿಂ
ದುಡುಗಳ್ ಪಟಪಟನುದಿರ್ವ ವೊ
ಲೆಡೆವಿಡದಿಟುವಾಲಿವರಲ ಮಟಿಬಗೆಗೊಳಿಕುಂ" – ಷಡಕ್ಷರಿ

ನಂತರ ಲಾಕ್ಷಣಿಕರ ಸಂಪ್ರದಾಯಕ್ಕೆ ಅನುಗುಣವಾಗಿ ಜಾತಕ ಪಕ್ಷಿಗಳ ಉಲ್ಲಾಸವನ್ನು ನವಿಲಿನ ನಾಟ್ಯವನ್ನು ಒಂದೆರಡು ಪದ್ಯದಲ್ಲಿ ವರ್ಣಿಸಿ ಅನಂತರ

ಜಳಮಯಮಿಳೆ ಜಳದ ಮಯಂ
ಜಳಧರ ಮಾರ್ಗಂ ತಟಿನ್ಮಯಂ ದಿಗ್ವಳಯಂ।

ಕಳೆಗೊಳ್ ನವಸೃಷ್ಟಿಯನೇಂ
ತಳೆದುದೊ ಭುವನಂ ಘನಾಗಮಾನಂಬುಜ ಭವನಿಂ॥

ಧರೆಯಲ್ಲಾ ಜಳಮಯವಾಗಿ ಕಾಂತಿಹೀನವಾಗಿದೆ ಎಂದು ವರ್ಣಿಸಿದ್ದಾನೆ.

ಶರದೃತು: ಮಳೆಗಾಲ ಮರೆಯಾಗುತ್ತಿದ್ದಂತೆಯೇ ಶರದೃತು ಪ್ರವೇಶದ ಸೊಬಗನ್ನು 'ಕುಮಾರವ್ಯಾಸ' ಮೂರು ಮಾತಿನಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ.

"ಜಾರಿದುದು ಮಳೆಗಾಲ ಅತಿ ಬಿಳುಪೇರಿದುವು ಮುಗಿಲುಗಳು
ಕತ್ತಲೆ ಸೂರೆಹೋದುದು ಹಗಲಿರುಳು ರವಿ ಶಶಿಗಳುಪಟಳಕೆ"

ಆಕಾಶ ಬೆಳಪೇರಿ ಶುಭ್ರವಾದವು ಹಗಲು ಸೂರ್ಯನಿಂದ ಇರುಳು ಚಂದ್ರ ತಾರೆಗಳ ಬೆಳಕಿನಿಂದ ಕತ್ತಲು ದೂರವಾಯಿತೆಂದು ಬಣ್ಣಿಸಿದ್ದಾನೆ. ಹೀಗೆ ಶರದೃತುವನ್ನು ಪಂಪ, ರನ್ನ, ಲಕ್ಷ್ಮೀಶ, ಷಡಕ್ಷರಿ ಇನ್ನೂ ಮುಂತಾದ ಕವಿಗಳು ಅದರ ಸೊಬಗನ್ನು ತಮ್ಮದೇ ಆದ ಭಾವ, ವಿಭಿನ್ನತೆಯಲ್ಲಿ ಬಣ್ಣಿಸಿದ್ದಾರೆ.

ಹೇಮಂತ ಮತ್ತು ಶಿಶಿರ ಋತುಗಳು

ಇವೆರಡೂ ಋತುಗಳು ಬೇರೆ ಬೇರೆಯಾಗಿದ್ದರೂ ಸಹ ಇವೆರಡರ ಸ್ವಭಾವಗಳು ಒಂದೇ ಆಗಿವೆ. ಆದ್ದರಿಂದ ಕನ್ನಡ ಕವಿಗಳು ಇವೆರಡನ್ನೂ ಒಂದಾಗಿಯೇ ಕಂಡು. ಈ ಮಂಜಿನ ಲೋಕವನ್ನು ಮಾಗಿ ಎಂದು ಕರೆದು ಉತ್ಸುಕತೆಯಿಂದ ವರ್ಣಿಸಿದ್ದಾರೆ. ಮಾಗಿಯ ಕಾಲದ ಮಂಜಿನ ಲೋಕವನ್ನಾಗಲೀ, ಚಳಿಗಾಲದಲ್ಲಿನ ಪ್ರಕೃತಿಯ ವಿಶಿಷ್ಟ ಬದಲಾವಣೆಯನ್ನಾಗಲೀ ಅದರ ಧಾರುಣತೆಯನ್ನಾಗಲೀ ನಮ್ಮ ಕವಿಗಳು ವರ್ಣಿಸಲು ಹೋಗಿಲ್ಲ. ಮಾನವನಿಗೆ ಚಳಿಯಿಂದಾಗಿ ನೀರೂ ನೆರಳೂ ಬೇಡವಾಗಿ ನಡುಗುವುದೊಂದೇ ಆಯಿತು ಎಂಬಂತೆ ವರ್ಣಿಸಿದ್ದಾರೆ.

ಅಜ್ಞಾತ ಕವಿಯೊಬ್ಬ ಮಾಗಿಯ ಮಂಜನ್ನು ವಿಶಿಷ್ಟವಾಗಿ ವರ್ಣಿಸಿದ್ದಾನೆ.

ಗಗನಂ ದಿಗ್ವಳಯಂ, ದಿನೇಶವಳಯಂ, ಶೈಲಾಳಿ ತೋಯಾಶಯಂ
ನಗರಂ, ನಂದನಮ್ - ಎಂಬ ವಸ್ತುಗಳಿಗೆ ಆರುಂ ಕಾಣದಂ
ತಾಗಿ ತೊಟ್ಟಿಗೆ ಕಣ್ ವಂಚಿಸಿ ನುಂಗಿತೋರ್ಪ ಚಪಲಂ ಹೇಮಂತನೆಂಬ
ಇಂದ್ರಜಾಲಿಗನಿರ್ದು ಊದಿದ ಧೂಮದಂತೆ ಅಸದಳಂ ಪೆರ್ಬಿತ್ತುಮಂಜೆತ್ತಲುಂ

(ಸೂಕ್ತ ಸುಧಾರ್ಣವ, ಪು. ೨೭೭, ಪದ್ಯ ೨೩೯)

ಹೇಮಂತನೆಂಬ ಮಂತ್ರವಾದಿಯ ಮಾಟದಿಂದ ಆಕಾಶ, ದಿಕ್ಕು, ಸೂರ್ಯನಕಿರಣ, ಬೆಟ್ಟ, ನದಿ, ಕೆರೆ, ನಗರ ನಂದನ ಇವುಗಳನ್ನು ಯಾರೂ ನೋಡದಹಾಗೆ ಇಂದ್ರಜಾಲಿಕ ಮಂತ್ರಧೂಮವನ್ನು ಊದಿದ್ದಾನೆ ಎಂದು ಋತುವನ್ನು ಚಿತ್ರಿಸಿದ್ದಾನೆ.

ಸೂರ್ಯ, ಚಂದ್ರ, ವರ್ಣನೆ: ದಿನಕರನ ಉದಯದ ಸೌಂದರ್ಯ ಲಹರಿಯನ್ನು ವೇದೋಪನಿಷತ್ ಋಷಿಗಳಿಂದ ಹಿಡಿದು ಜನಪದ ಕವಿಗಳವರೆಗೂ ಸುಂದರವಾಗಿ ವರ್ಣನೆ ಮಾಡುತ್ತಾ ಬಂದಿದ್ದಾರೆ. ಪ್ರಾಚೀನ ಕವಿಗಳಲ್ಲಿ ಬಹಳ ಸಂಪ್ರದಾಯಬದ್ಧವಾಗಿದ್ದು, ನಿರಸ ನಿರಾಸೆಯನ್ನುಂಟು ಮಾಡುತ್ತದೆ. ಸೂರ್ಯೋದಯದ ದೃಶ್ಯವೊಂದು ನಿರಂತರ ಚೆಲುವಿನ ಚಿಲುಮೆಯಾಗಿ ತೋರದೆ ಕೇವಲ ಕಾಲಸೂಚಕವಾಗಿ ಸೂರ್ಯೋದಯದಿಂದ ಆದ ಪರಿಣಾಮವನ್ನು ಕವಿ–ಸಮಯ ಸಂಕೇತಗಳಿಂದ ಕಮಲ ಅರಳಿತು, ನೈದಿಲೆ ಕಣ್ಣುಮುಚ್ಚಿತು, ಚಕೋರ ಕೊರಗಿತು, ನಕ್ಷತ್ರಗಳು ಮುಸುಳಿದವು ಇತ್ಯಾದಿಯಾಗಿ ಬಣ್ಣಿಸುವುದು ಅವರ ಪದ್ಧತಿಯಾಗಿತ್ತು.

ಹಾಗೆ ನೋಡಿದರೆ ರತ್ನಾಕರವರ್ಣಿಯ ಸೂರ್ಯೋದಯದ ವರ್ಣನೆ ಬಹಳ ಚೆಲುವಾದುದು:

ತಂಗಾಳಿ ತಿಡಿತು ತಾರಗೆ ಮುಸುಳ್ದುವು
ಹಿಂಗಿತು ಜಗದಂದಕಾರ
ಮುಂಗಾರ ಮೊಳಗಿನಂದದಿ ಮೊಳಗಿದುವು ವಾ
ದ್ಯಂಗಳು ಜಿನಗೃಹದೊಳಗೆ
ಎಳವಿಸಿಲಡರ್ದೇಂ ಜಿನನಿಲಯದ ರತ್ನ
ಕಳಶದೊಳ್ಮಾತಾಡೆ ಕಂಡು
ಬೆಳಗಾಯ್ತು ದೇವ ಕಣ್ತೆರೆ ಎಂದು ವನಿತೆಯ
ರೆಳೆಸಿ ಬಿನ್ನವಿಸಿದರಾಗ
(ಭರತೇಶ ವೈಭವ, ಪರ್ವಯೋಗ ಸಂದಿ ೭–೮)

ಇಲ್ಲಿ ಸುಪ್ರಭಾತಕಾಲದ ಸೌಂದರ್ಯಾನುಭವದ ಸೊಬಗು ಕಣ್ಮುಂದೆ ಬರುತ್ತದೆ. ಅದರಲ್ಲೂ ಎಳೆಯ ಬಿಸಿಲು ಅಡರ್ದು, ಏರಿ, ಜಿನ್ನನಿಲಯದ ರತ್ನ ಕಳಶದೊಡನೆ ಮಾತಾಡಿತು ಎನ್ನುವ ಕವಿಯ ಕಲ್ಪನೆ ಅದ್ಭುತವಾದುದು. ಪ್ರಸ್ತುತದಲ್ಲಿ ಸೂರ್ಯೋದಯದ ವರ್ಣನೆ ಪ್ರತಿಯೊಂದು ಕಾವ್ಯದಲ್ಲಿ ಇದ್ದರೂ ಒಬ್ಬಿಬ್ಬರು ಕವಿಗಳನ್ನು ಹೊರತುಪಡಿಸಿ ಉಳಿದವರು ಸೂರ್ಯೋದಯದ ಚೆಲುವನ್ನು ವೀಕ್ಷಿಸಿ ರಸಾನುಭವ ಪಡೆದಿಲ್ಲ; ಒಂದು ವೇಳೆ ಪಡೆದಿದ್ದರೂ ಅದನ್ನು ಸರಿಯಾಗಿ ತಿಳಿಸಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಚಂದ್ರ ಸೌಂದರ್ಯದ ಸಂಕೇತ, ಚಂದ್ರೋದಯದಂತಹ ಸುಂದರವಾದ ರೋಮಾಂಚನಕಾರಿಯಾದ ಘಟನೆ ಮತ್ತೊಂದಿಲ್ಲ, ಆದರೆ ಕವಿಯ ಕಾವ್ಯಲೋಕದಲ್ಲಿ

'ಶೃಂಗಾರಮೆ ರಸಂ' ಎನ್ನುವ ಅರ್ಥದಲ್ಲಿ ಈ ಬೆಳದಿಂಗಳು ಕಡಿವಾಣವನ್ನು ಕಿತ್ತೆಸೆದ ತುಂಟ ಕುದುರೆಯಂತೆ ಸೂಳೆಗೇರಿಯಲ್ಲಿ ಅಲೆಯುತ್ತದೆ. ಹಾಗೆಯೇ ಹರಿಹರನ ಗಿರಿಜಾಕಲ್ಯಾಣದಲ್ಲಿ ಗಿರಿರಾಜನೊಂದಿಗೆ ನಾರದನನ್ನೂ ಸೂಳೆಗೇರಿಯ ಬೀದಿ ಬೀದಿಯಲ್ಲಿ ಅಲೆಸಿ ಅದು ಪೂರ್ವಜನ್ಮದ ಕರ್ಮದ ಫಲ ಎಂದು ಚಿತ್ರಿಸಿದ್ದಾನೆ.

ಆದರೆ ಚಂದ್ರೋದಯದ ಸೌಂದರ್ಯವನ್ನು ಬೆಳೆದಿಂಗಳ ಶಾಂತ ಭವ್ಯತೆಯನ್ನು ಹಲವಾರು ಕವಿಗಳು ಬಣ್ಣಿಸಿದ್ದಾರೆ. ನಿಜವಾದ ಸೌಂದರ್ಯವನ್ನು ನಾವು ಕಾಣಬೇಕಾದರೆ ಪಂಪನಲ್ಲಿಗೆ ಹೋಗಬೇಕು. ಪಂಪನ ಕಣ್ಣಿಗೆ ಚಂದ್ರ ಸಿಂಹದಂತೆ ಕಾಣುತ್ತದೆ.

"ಬಳೆದ ತಮೋ ಮದೇಭಘಟೆಯೊಡ್ಡೊಡೆವನ್ನೆಗಂ
ಉನ್ನತ ಉದಯೊಚಳಗುಹೆಯಿಂ ಲಸತ್ಕಿರಣ ಕೇಸರಮಂ ಮರಮತುಂ
ಆಗಳ್ ಅಗುಳಿಸುವ ಬಾಯಕೆಂಪನ್ ಉದಯಂಗೆಯ ಪೊಣ್ಮುವ ಕೆಂಪು ಪೋಲ್ವಿನಂ
ತಳರೆ ಬೆಡಂಗಿನೊಳ್ ಮದಿದುದು ಎೞ್ತರಮ್ ಉದ್ಗತ ಚಂದ್ರ ಸಿಂಹದಾ"

(ಆದಿಪುರಾಣ ೧೨-೩೦)

ಇದೊಂದು ಅಪೂರ್ವ ಕಲ್ಪನಾಮಯ ಸೌಂದರ್ಯ, ಸುಮದರವಾದ ಚಂದ್ರೋದಯವೂ, ತಮೋಮದೇಭಗಳ ಕುಂಭಸ್ಥಳವನ್ನೂ ಒಡೆಯುತ್ತಾ ಕಿರಣ ಕೇಸರವನ್ನು ಕೆದರುತ್ತಾ ಕೆಂಪಾದ ಬಾಯಿಂದ ಆಗುಳಿಸುತ್ತಾ ಉನ್ನತ ಉದಯಾಚಲ ಶಿಖರದಿಂದ ಬರುವ ಸಿಂಹದಂತೆ ಅಗುರ್ವಾಗಿ ತೋರುತ್ತದೆ. ಆಗತಾನೇ ಮೂಡಿದ ಚಂದ್ರನ ಆ ರಕ್ತವಾದ ಬಿಂಬವನ್ನು ಕಂಡ ಕವಿಯ ಕಣ್ಣು ಇಲ್ಲಿ ಕಲ್ಪನಾಮಯವಾಗಿ ಚಿತ್ರಿಸಿದ್ದಾನೆ. ಒಟ್ಟಿನಲ್ಲಿ ಸೌಂದರ್ಯದ ಗಣಿಯಾದ ಚಂದ್ರನಿಗೆ ತಕ್ಕ ವರ್ಣನೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಂಡುಬರುವುದು ಸ್ವಲ್ಪ ಮಾತ್ರ. ಪಂಪನದೇ ಆದ ಈ ಪದ್ಯವನ್ನು ನೊಡಿದಾಗ-

ಅದೊಂದಿನಿಸು ಬೇಗದಿಂ ನವಜಪಾ ಪ್ರಸೂನಾಭವಮಾಯ್ತು
ಅದೊಂದಿನಿಸು ಬೇಗದಿಂ ಕನಕ ಕುಂಭದಂತಾಯ್ತು
ಮತ್ತದೊಂದಿನಿಸು ಬೇಗದಿಂ ಮೃದುಮೃಣಾಳ ಸಂಕಾಶಮಾಯ್ತು
ಅದೇಂ ಬಱಿಕೆ ಬಿಂಬದುಜ್ವಳಿಕೆಯೋ ಸುಧಾಸೂತಿಯಾ

(ಆದಿಪುರಾಣ. ೧೨-೪೭)

ಇಲ್ಲಿ ಕವಿಯ ಕಣ್ಣು ವಸ್ತು ಸೌಂದರ್ಯವನ್ನು ಕ್ಷಣಕ್ಷಣದಲ್ಲೂ ತೀವ್ರ ಆಸಕ್ತಿಯಿಂದ ಸಂಭ್ರಮದಿಂದ ಸೋಜಿಗದಿಂದ ವರ್ಣಿಸುತ್ತದೆ. ಚಂದ್ರ ಮೆಲ್ಲಮೆಲ್ಲಗೆ ಹೊಸದಾಗಿ ಅರಳಿದ ಜಪಕುಸುಮಗಳ ಕಾಂತಿಯನ್ನು ಹೊಂದುತ್ತಿದ್ದಾನೆ. ಮತ್ತೆ ಮೆಲ್ಲ ಮೆಲ್ಲಗೆ ಏಳುತ್ತಾ ಚಿನ್ನದ ಕುಂಭದಂತೆ ಆಗುತ್ತಾನೆ. ಪುನಃ ಮರುಕ್ಷಣದಲ್ಲೇ ಅರಳಿದ ಕೋಮಲ ಕಮಲದಂತೆ ರೂಪ ಪಡೆದಿದ್ದಾನೆ! ಆಹಾ! ಈಗ ಚಂದ್ರನೆಷ್ಟು ಉಜ್ವಲನಾಗುತ್ತಿದ್ದಾನೆ! ಎಂದು ಪಂಪ ಸೌಂಸರ್ಯಾನಂದದಿಂದ ಉದ್ಗಾರವೆತ್ತಿದ್ದಾನೆ.

ಕನ್ನಡ ನವೋದಯ ಕಾವ್ಯದಲ್ಲಿ ಪ್ರಕೃತಿ:

ಕನ್ನಡ ನವೋದಯ ಕವಿಗಳ ಮೆಲೆ ಆಂಗ್ಲೋ ರೊಮ್ಯಾಂಟಿಕ್ ಕಾವ್ಯದ ಪ್ರಭಾವ ಮತ್ತು ಅವರು ಅದನ್ನು ಮೀರಿನಿಂತ ಬಗೆ

ಪ್ರಕೃತಿ ನಿರಂತರ ಪರಿವರ್ತನಾಶೀಲ ಗುಣ ಉಳ್ಳದ್ದಾಗಿದೆ. ಹಾಗೆಯೇ ಸಾಹಿತ್ಯಕ್ಷೇತ್ರದಲ್ಲಿಯೂ ಹೊಸತನ ಎನ್ನುವುದು ನಿರಂತರವಾಗಿದ್ದು ಹೊಸ ಹೊಸ ದಿಗಂತಗಳನ್ನು ಕಣ್ಮುಂದೆ ತರುತ್ತದೆ. ಕನ್ನಡ ಕಾವ್ಯ ಪ್ರಪಂಚವೂ ಸಹ ಈ ಮಾತಿಗೆ ಹೊರತಾಗಿಲ್ಲ. ಅದು ಕಾಲ ಕಾಲಕ್ಕೆ ಉಚಿತವಾಗಿ ಮಾರ್ಪಾಡನ್ನು ಹೊಂದುತ್ತಾ ನಿತ್ಯನೂತನವೂ, ಪ್ರಗತಿಗಾಮಿಯೂ ಆಗಿ ಸಾಗಿಬಂದಿದೆ. ಬ್ರಿಟಿಷರ ಆಗಮನದಿಂದ ಭಾರತೀಯ ರಾಜಕೀಯದಲ್ಲಿ ಉಂಟಾದ ಗೊಂದಲ ಅಸ್ಥಿರತೆ. ಅಸಹಾಯಕತೆಗಳು, ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲಿ ಕಾಣಿಸಿಕೊಂಡಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಕಾಣಿಸಿಕೊಂಡಿತ್ತು. ಇಂಥ ಒಂದು ನೀರಸ ಸಂದರ್ಭದಲ್ಲಿ ಕಾಣಿಸಿಕೊಂಡ ನವೋದಯದ ಬೆಳಕು ಕಾವ್ಯದ ಜಡತೆಯ ಕತ್ತಲನ್ನು ಸರಿಸಿ ಕಾವ್ಯದ ಆಕ್ಷೇಪಣೀಯ ಪ್ರಗತಿಗೆ ಕಾರಣವಾಯಿತು.

ಆಧುನಿಕ ಕನ್ನಡ ಕಾವ್ಯದಲ್ಲಿ ನವೋದಯ ಕಾವ್ಯಕ್ಕೆ ತನ್ನದೇ ಆದ ಮಹತ್ವದ ಸ್ಥಾನವಿದೆ. ೧೯೨೦ರಲ್ಲಿ ಆರಂಭವಾದ ನವೋದಯ ಅಥವಾ ರೊಮ್ಯಾಂಟಿಕ್ ಕಾವ್ಯ ಯುಗವನ್ನು ಹೊಸಗನ್ನಡ ಸಾಹಿತ್ಯದ ಸುವರ್ಣಯುಗ ಎನ್ನಬಹುದು. ಈ ಸುವರ್ಣಯುಗದ ಹೆಜ್ಜೆಗಳು ಸ್ಪಷ್ಟವಾಗಿ ಗೋಚರಿಸಿದ್ದು ಬಿ.ಎಂ.ಶ್ರೀ. ಅವರ 'ಇಂಗ್ಲಿಷ್ ಗೀತೆಗಳು' ಕವನ ಸಂಕಲನದಲ್ಲಿ ೧೯೨೦ ರಿಂದ ೧೯೫೦ರವರೆಗೆ ಚಾಚಿಕೊಂಡ ಕಾವ್ಯ ನಿರ್ಮಿತಿಗೆ ಕುವೆಂಪು ಅವರು 'ನವೋದಯ ಕಾವ್ಯ' ಎಂದು ಕರೆದಿದ್ದಾರೆ. ಹೀಗೆ ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆಗಳ ಮೂಲಕ ಪ್ರಾರಂಭಗೊಂಡ ನವೋದಯ ಆಂಗ್ಲೋ ರೋಮ್ಯಾಂಟಿಕ್ ಕಾವ್ಯದಿಂದ ಪ್ರೇರಣೆ ಪಡೆದಿದ್ದರೂ ಅದು ಬೆಳೆದದ್ದು ಭಾರತೀಯ ಸಂಸ್ಕೃತಿಯ ಫಲವತ್ತಾದ ಮಣ್ಣಿನಲ್ಲಿ ಎಂಬುದನ್ನು ಮರೆಯುವಂತಿಲ್ಲ.

"ರೋಮ್ಯಾಂಟಿಕ್ ಕವಿಗಳಲ್ಲಿ ಕಂಡುಬಂದ ಬಹುಮುಖ್ಯವಾದ ಸಂಗತಿಗಳು ಎಂದರೆ ಒಂದು ಕಾವ್ಯವಸ್ತುವನ್ನು ಪುರಾಣ-ಇತಿಹಾಸಗಳ ವಲಯದಿಂದ, ತಮ್ಮ ದೈನಂದಿನ ಸರಳ ಸಾಧಾರಣ ಸಂಗತಿಗಳ ಕಡೆಗೆ ಸ್ಥಳಾಂತರಿಸಿದ್ದು. ಮತ್ತೊಂದು ದೇವರು, ಪೂಜೆ ಇತ್ಯಾದಿ ಭಾವನೆಗಳನ್ನು ದೇವಾಲಯಗಳಿಂದ ನಿಸರ್ಗದ ಕಡೆಗೆ ಸ್ಥಳಾಂತರಿಸಿದ್ದು."[೧]

ರೋಮ್ಯಾಂಟಿಕ್ ಕಾವ್ಯ ಮಾನವ ಮತ್ತು ಪ್ರಕೃತಿ ಸಂಬಂಧದ ಗಾಢತೆಯನ್ನು ವಿಶ್ಲೇಷಿಸುತ್ತದೆ. ಮಾನವನೇ ಅಲ್ಲಿ ಆಸಕ್ತಿಯ ಕೇಂದ್ರ ಬಿಂದುವಾಗಿದ್ದರೆ, ಅವನ ವ್ಯಕ್ತಿತ್ವದ ಘನತೆಯೇ ರೋಮ್ಯಾಂಟಿಕ್ ಕಾವ್ಯದ ಮೂಲ ನೆಲೆಯಾಗಿದೆ.

"ಇಂಗ್ಲಿಷ್‌ನ ರೋಮ್ಯಾಂಟಿಸಿಸಮ್‌ಗಿಂತ ಕನ್ನಡದ ನವೋದಯ ತುಂಬಾ ವಿಶಿಷ್ಟವಾಗಿದೆ. ಇಂಗ್ಲಿಷ್ ರೋಮ್ಯಾಂಟಿಸಿಸಂ ಆತ್ಮಕೇಂದ್ರಿತವಾದರೆ ಕನ್ನಡದ ನವೋದಯ(ರಮ್ಯ) ಜನಮುಖವಾಗಿದೆ. ಇಲ್ಲಿಯ ರಮ್ಯವಾದದಲ್ಲಿ ವೈವಿಧ್ಯತೆಯಿದೆ. ಪ್ರಾದೇಶಿಕ ಅನುಭವದ ವಿಶಿಷ್ಟ ಛಾಪು ಇದೆ. ಪಾಶ್ಚಾತ್ಯ ಕವಿಗಳ ಪ್ರೇರಣೆಯ ಜೊತೆಗೆ ಷರೀಫ್ ಸಾಹೇಬ, ಕಡಕೊಳ್ ಮಡಿವಾಳಪ್ಪರಂತಹ ಅನುಭವ ಕವಿಗಳ ಪ್ರಭಾವವೂ ಆಗಿದೆ. ಜಾಗತಿಕ ಚಿಂತನೆಗಳ ಜೊತೆಗೆ ಪರಮಹಂಸ, ವಿವೇಕಾನಂದ, ಅರವಿಂದರ ಆಲೋಚನಾ ಲಹರಿಯ ಪರಿಣಾಮವನ್ನುಂಟು ಮಾಡಿದೆ.

ಪಾಶ್ಚಾಮಾತ್ಯರ ಕಾವ್ಯರೂಪಗಳಾದ ಸಾನೆಟ್, ಬ್ಯಾಂಕ್‌ವರ್ಸ್, ಲಿರಿಕ್ಸ್ ಎರಿಜಿ, ಫ್ರೀವರ್ಸ್‌ಗಳ ಜೊತೆಗೆ ಷಟ್ಪದಿ, ಕಂದ, ಚೌಪದಿ, ರಗಳೆಗಳಂತಹ ದೇಸೀಯಾ ರೂಪಗಳು, ಏಳೆ, ತ್ರಿಪದಿ, ಲಾವಣಿ, ಗೀಗೀಪದ, ಪಾರಿಜಾತದ ಹಾಡು, ಡಪ್ಪಿನ ಹಾಡಿನಂತಹ ಜನಪದ ರೂಪಗಳು ನವೋದಯ ಕಾವ್ಯದ ಹೊಸ ರೂಪಗಳನ್ನು ಸಿದ್ಧಗೊಳಿಸಿಕೊಳ್ಳುವಲ್ಲಿ ಸಹಕಾರಿಯಾಗಿವೆ".[೨]

ನವೋದಯ ಕಾವ್ಯಕ್ಕೆ ಭಾರತದ ಸ್ವಾತಂತ್ರ್ಯ ಚಳುವಳಿ ಮುಖ್ಯ ವಸ್ತುವಾಯಿತು. ದೇಶಭಕ್ತಿ, ಪ್ರಕೃತಿ, ನಾಡು-ನುಡಿಯ ಬಗ್ಗೆ ಅಭಿಮಾನ, ಕಳಕಳಿ ನೀತಿ, ಆಧ್ಯಾತ್ಮ ಪ್ರೇಮ. ಬಡತನ, ಹಸಿವು ಇವೆಲ್ಲವೂ ನವೋದಯ ಕಾವ್ಯದ ಮೂಲನೆಲೆಗಳಾಗಿದ್ದವು ಹಾಗೂ ವಿಜ್ಞಾನ ಮತ್ತು ಧರ್ಮಗಳ ನಡುವೆ, ಇಹಪರಗಳ ನಡುವೆ, ಭಾರತೀಯ ಪಾಶ್ಚಾತ್ಯ ಸಂಸ್ಕೃತಿಗಳ ನಡುವೆ ನವೋದಯ ಕವಿಗಳು ಸಮನ್ವಯ ಸಾಧಿಸಿದರು.

---

೧. ಜಿ.ಎಸ್.ಶಿವರುದ್ರಪ್ಪ, ನವೋದಯ, ಪು. ೮

೨. ಡಾ. ಬಸವರಾಜ ಸಬರದ, ಸಾಹಿತ್ಯ ಸಂಗತಿ, ಪು. ೭

ನವೋದಯದ ಮುಖ್ಯ ನೆಲೆಗಳನ್ನು ಕುರಿತು ಶಾಂತಿನಾಥ ದೇಸಾಯಿ ಅವರ ಮಾತನ್ನು ಇಲ್ಲಿ ಗಮನಿಸಬಹುದು "ಭಾರತೀಯರ ಸಹಜ ಆತ್ಮಗೌರವ, ಆಶಾವಾದಿ ಆದರ್ಶಗಳು, ಜಾತ್ಯಾತೀತ ಪ್ರಜಾಪ್ರಭುತ್ವದ ಮೌಲ್ಯಗಳು, ವಿಶ್ವಧರ್ಮ, ವಿಶ್ವಭ್ರಾತೃತ್ವ, ಆಧ್ಯಾತ್ಮ, ಅನುಭಾವಗಳು ಇವೆಲ್ಲ ಸಮ್ಮಿಳನವಾದ ಯುಗದ ಮನೋಧರ್ಮವನ್ನು ನವೋದಯ ಪ್ರತಿಬಿಂಬಿಸಿತು. ಅದು ಮನುಷ್ಯನನ್ನು ನಿಸರ್ಗವನ್ನೊಳಗೊಂಡ ಸೃಷ್ಟಿಯಲ್ಲಿಟ್ಟು ನೋಡಿತು. ಸೃಷ್ಟಿಯಲ್ಲಿ ಸರ್ವವ್ಯಾಪಿಯಾದ ಒಂದು ಚೇತನವನ್ನು ಮನುಷ್ಯ ಮತ್ತು ನಿಸರ್ಗಗಳ ನಡುವೆ ಒಂದು ಆಧ್ಯಾತ್ಮಿಕ ಬಾಂಧವ್ಯವನ್ನು ಗುರುತಿಸಿತು"[೧]

ಆಂಗ್ಲಭಾಷೆಯ ಸಂಪರ್ಕದಿಂದ ಪ್ರಭಾವಿತರಾದ ಕನ್ನಡ ಕವಿಗಳು ಹೊಸ ಬಗೆಯ ಅಭಿವ್ಯಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸಿದರು "ಭಾವದ ಗತಿಯನ್ನು ಅನುಸರಿಸಿ ಬದಲಾಗುವ ಹೊಸದೊಂದು ಛಂದೋವಿನ್ಯಾಸ ಕನ್ನಡದ ಪ್ರಪ್ರಥಮ ಅಗತ್ಯವಾಗಿತ್ತು. ಸಂಸ್ಕೃತದಿಂದ ಎರವಲಾಗಿ ಪಡೆದ ವೃತ್ತಗಳೂ, ಕನ್ನಡ ದೇಶೀಯ ಛಂದಗಳಾದ ರಗಳೆ, ಷಟ್ಪದಿ, ಸಾಂಗತ್ಯಗಳೂ ಸಂಪೂರ್ಣವಾದ ಯಶಸ್ಸಿನಿಂದ ನಿರ್ವಹಿಸಲು ಸಾಧ್ಯವಲ್ಲದ ಭಾವಭಾವನಾ ವೈವಿಧ್ಯಗಳಿಗೆ ತಕ್ಕ ಛಂಧೋಪಾತ್ರಗಳ ಸೃಷ್ಟಿಯಾಗಬೇಕಾಯಿತು"[೨]

"........ಕಂದ ಸಂಸ್ಕೃತ ವೃತ್ತಗಳಲ್ಲಿ ನಾಲ್ಕು ಚರಣಗಳು, ಷಟ್ಪದಿಗಳಲ್ಲಿ ಆರು ಚರಣಗಳು ಈ ರೀತಿಯ ಅತಿ ನಿಯತವಾದ ಚರಣ ಸಂಖ್ಯೆಯೂ ಅವುಗಳ ಅತಿಬದ್ಧವಾದ ಗತಿಯೂ ಕವಿಯ ಹೃದಯದಲ್ಲಿ ಜನಿಸುವ ಅನಂತ ಭಾವಗಳಲ್ಲಿ ಎಲ್ಲವನ್ನೂ ಉತ್ಕೃಷ್ಟವಾಗಿ ನಿರೂಪಿಸಲಾರವು..... ಆದಕಾರಣ ಭಾವದ ಗತಿಗೆ ತಕ್ಕಂತೆ ಬಳುಕುವ, ಬೇಕೆಂದಾಗ ಹಿಗ್ಗುವ, ತುಂಬುವ ಹೊಳೆಯಂತೆ ಮೊರೆಯುವ, ಸಣ್ಣಕಾಲುವೆಯಂತೆ ನುಸುಳುವ, ಓದುವ ಕುದುರೆ ನಿಲ್ಲುವಂತೆ ತಟ್ಟನೆ ನಿಲ್ಲುವ ವಿವಿಧಗತಿಯ ಮಟ್ಟಗಳು ಕನ್ನಡಕ್ಕೆ ಬೇಕಾದುವು, ಹೊಸ ಮಾದರಿಯನ್ನು ಕಂಡುಹಿಡಿಯಬೇಕಾಯಿತು. ಈ ಕಾರ್ಯದಲ್ಲಿ ಆಧುನಿಕ ಕವಿಗಳು ಸಂಪೂರ್ಣವಾಗಿ ಹೊಸ ಜಾಡನ್ನೆ ಹುಡುಕುವುದು ಅವಶ್ಯಕವಾಗಲಿಲ್ಲ. ಇವರು ಬಯಸುತ್ತಿದ್ದ ಸ್ವಾತಂತ್ರ್ಯವನ್ನೇ ಹಿಂದಿನವರೂ ಬಯಸಿ ಅಲ್ಲಲ್ಲಿ ಹೊಸ ಮಟ್ಟಗಳನ್ನು ಏರ್ಪಡಿಸಿಕೊಂಡಿರುವುದು ಪ್ರಾಚೀನ ಸಾಹಿತ್ಯದಲ್ಲೇ ನಮಗೆ ಗೋಚರಿಸುತ್ತದೆ"[೩]

---

೧. ಡಾ. ಶಾಂತಿನಾಥ ದೇಸಾಯಿ, ಆಧುನಿಕ ಕನ್ನಡ ಸಾಹಿತ್ಯ, ಪು. ೩೬೩.

೨. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಪು. ೧೯೯.

೩. ತಿನಂಶ್ರೀ, ಕನ್ನಡದಲ್ಲಿ ಹೊಸಮಟ್ಟುಗಳಿರುವ ಅವಶ್ಯಕತೆ, ಪು. ೭

ಬಿ.ಎಂ.ಶ್ರೀ ಅವರು ಇಂಥದೊಂದು ಮಹತ್ವದ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರ 'ಇಂಗ್ಲಿಷ್ ಗೀತೆಗಳು' ಹೊಸಗನ್ನಡ ಕಾವ್ಯಲೋಕಕ್ಕೆ ಹೊಸದೊಂದು ರಾಜಮಾರ್ಗವನ್ನು ತೆರೆದ ಅಪಾರ ಸತ್ವಶಾಲಿಯಾದ ಕೃತಿ.

'ಶ್ರೀ'ಯವರು ನ್ಯಾಷ್ ಕವಿಯ ಸ್ಪ್ರಿಂಗ್ ಕವನವನ್ನು ಅನುವಾದಿಸಿರುವ ಬಗೆ ಅಪೂರ್ವ ಚೆಲುವಿನಿಂದ ಕೂಡಿದೆ. ಮೂಲಕವನವೂ ಮಧ್ಯಪ್ರಾಸ, ಅಂತ್ಯಪ್ರಾಸಗಳ ಅಪೂರ್ವ ಸಂಯೋಜನೆಯಿಂದ ಕೂಡಿದ್ದು ಸಹೃದಯನ ಮನಸೆಳೆಯುತ್ತದೆ.

ಮೂಲ:

Spring the sweet spring, is the year's pleasant king;
Then blooms each thing, the maids dance a ring
Cold doth not sting, the pretty brids do sing
Cuckoo Jug-Jug up – we to Witta woo!

ಅನುವಾದ:

"ವಸಂತ ಬಂದ, ಋತುಗಳ ರಾಜ ತಾ ಬಂದ
ಚಿಗುರನು ತಂದ ಹೆಣ್ಗಳ ಕುಣಿಸುತ ನಿಂದ
ಚಳಿಯನು ಕೊಂದ ಹಕ್ಕಿಗಳುಲಿಗಳೆ ಚೆಂದ
ಕೂವೂ, ಜಗ್, ಜಗ್, ಪುವ್ವೀ, ಟುವ್ವಿಟವೂ"[೧]

ಬಿ.ಎಂ.ಶ್ರೀ ಅವರು ಮೂಲದಲ್ಲಿರುವ ಮಧ್ಯಪ್ರಾಸ ಅಂತ್ಯಪ್ರಾಸಗಳನ್ನುಳಿಸಿದ್ದಾರೆ. ಅಂಶಗಣದ ಮಧುರ ಛಂದಸ್ಸಿನಲ್ಲಿ ಇದನ್ನು ಅನುವಾದಿಸಿದ್ದಾರೆ. ಮೂಲದಲ್ಲಿ ಇಲ್ಲದ ಬನದಲಿ ಬೆಳದಿಂಗಳೂಟ ಹಾಗೂ 'ಮಲ್ಲಿಗೆ ಬಯಲೆಲ್ಲ ಕೆಂಪು' ಎಂಬುದರಲ್ಲಿ ಮೊದಲನೆಯದು ಮೂಲದಲ್ಲಿಲ್ಲ. ಎರಡನೆಯದು ಮೂಲ ಭಾವಗ್ರಹಣದಿಂದ ಅರ್ಥ ವಿಸ್ತಾರವನ್ನು ಪಡೆದುಕೊಂಡಿದ್ದಾಗಿದ್ದು ಗೀತೆಯ ಸೌಂದರ್ಯಕ್ಕೆ ಮೆರಗು ನೀಡಿದೆ.

ರಾಬರ್ಟ್‌ಸನ್ ಕವಿಯ "My Love is like a red red rose" ಕವನವನ್ನು ಬಿ.ಎಂ.ಶ್ರೀ.ಯವರು 'ನನ್ನ ಪ್ರೇಮದ ಹುಡುಗಿ' ಎಂಬುದಾಗಿ ಅನುವಾದಿಸಿದ್ದಾರೆ. ಮೂಲದ ಸರಳ ಮುಗ್ಧತೆಗಳು ಅನುವಾದದಲ್ಲಿ ಕಂಡುಬರುವುದಿಲ್ಲ. ಇಲ್ಲಿ ಬಿ.ಎಂ.ಶ್ರೀಯವರು ಸಾಕಷ್ಟು ಸ್ವಾತಂತ್ರವಹಿಸಿದ್ದಾರೆ.

---

೧. ಡಾ. ಬಸವರಾಜ ಸಬರದ, ಸಾಹಿತ್ಯ ಸಂಗತಿ, ಪು. ೭

ಮೂಲ: "My Love is like a red red rose
that's newly sprung in June;
My love is like the melodie
That's sweetly play' d in tune
So fair art thou, my bonnie lass
So deep in love am I:
And I will love thee still, my dear
Till the seas gang dry"[೧]

ಅನುವಾದ:

ನನ್ನ ಪ್ರೇಮದ ಹುಡುಗಿ ತಾವರೆಯ ಹೊಸ ಕೆಂಪು
ತಾವರೆಯ ಹೊಸ ಅರಳ ಹೊಳೆವ ಕೆಂಪು
ನನ್ನ ಪ್ರೇಮದ ಹುಡುಗಿ ಕೊಳಲ ಮೆಲು ನುಡಿಯಿಂಪು
ಕೊಳಲು ಮೋಹಿಸಿ ನುಡಿವ ಗಾನದಿಂಪು
ಬೆಳೆಬೆಳೆಯಿತೆಷ್ಟೆಷ್ಟು ಭಿನ್ನಾಣ, ಎಲೆ ಚೆಲುವೆ,
ಮುಳುಗಿದೆನು ಅಷ್ಟಷ್ಟು ಪ್ರೇಮದೊಳಗೆ
ಬಿತ್ತುವುವು ಕಡಲುಗಳು ಮುಂದಾಗಿ, ಎಲೆ ಚೆಲುವೆ
ಬತ್ತಲಾರದು ತೊಟ್ಟು ಪ್ರೇಮದೊಳಗೆ

ಹೀಗೆ ಶ್ರೀಯವರ ಗೀತೆಗಳಲ್ಲಿ ಅನುವಾದದ ಸಿದ್ಧಿಯನ್ನು ಕಾಣಬಹುದು. ಇವರ ಗೀತೆಗಳು ಸಹಜ ಅನುವಾದದಿಂದ ಗಮನವನ್ನು ಸೆಳೆಯುತ್ತಿವೆ. ಅವರ ಇತರೆ ಗೀತೆಗಳಾದ 'ಅಡವಿಮರದಡಿಯಲಿ' 'ಬಸಂತ', 'ಮಳೆಬಿಲ್ಲು', 'ಮುಪ್ಪುಯೌವ್ವನ', 'ಮುದ್ದಿನ ಕುರಿಮರಿ', 'ಕಾಳಗದ ಪದ' ಕರುಣಾಳು ಬಾ ಬೆಳಕೆ' ಮುಂತಾದ ಗೀತೆಗಳು ಉತ್ತಮ ಅನುವಾದಗಳಾಗಿವೆ. ಹಾಗೆಯೇ ಗೋವಿಂದ ಪೈ, ಎಸ್.ಅನಂತನಾರಾಯಣ, ಪಂಜೆ ಮಂಗೇಶರಾಯ ಮುಂತಾದವರು ಕನ್ನಡ ಇಂಗ್ಲಿಷ್ ಭಾಷೆಗಳೆರಡರಲ್ಲೂ ಅಪಾರ ಪಾಂಡಿತ್ಯವನ್ನು ಹೊಂದಿ ಇಂಗ್ಲಿಷ್ ಭಾಷೆಯ ಹಲವಾರು ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಅವರ ಅಪಾರ ಪಾಂಡಿತ್ಯವನ್ನು ಕೊಡುಗೆಯಾಗಿ ನೀಡಿದ್ದಾರೆ.

ಬಿ.ಎಂ.ಶ್ರೀ.ಯವರು ಎಳೆದು ತಂದ ಈ ಹೊಸತನದ ಮಿಂಚನ್ನು ಬೇಂದ್ರೆ, ಕುವೆಂಪು, ಪುತಿನರವರು ಅಚ್ಚುಕಟ್ಟಾಗಿ ಮುಂದುವರೆಸಿಕೊಂಡು ಕನ್ನಡಕ್ಕೊಂದು

---

೧. Robert burns – The works of Robert burns, Page 318, Words worth editions, 1994.

ಸವಂತಿಕೆ ನೆಲೆಯನ್ನು ನಿರ್ಮಾಣ ಮಾಡಿದ್ದಾರೆ. ಪ್ರಕೃತಿಯ ಅದ್ಬುತ ಸೌಂದರ್ಯ ತುಂಬಿ ತುಳುಕುವ ಬೇಂದ್ರೆಯವರ 'ಬೆಳಗು' ಕವನ ಮುಂಜಾನೆಯ ಶಾಂತಿ, ಉಲ್ಲಾಸ ಆಹ್ಲಾದಗಳನ್ನು ಚೇತೋಹಾರಿಯಾಗಿ ವ್ಯಕ್ತಪಡಿಸುತ್ತದೆ. ಜಗತ್ತೆಲ್ಲವೂ ಬೆಳಗಿನಲ್ಲಿ ತೊಯ್ದು ಹೋಗುವ ಬಗೆ ವಿಶಿಷ್ಟಪೂರ್ಣವಾದ ಒಂದು ಬೆಳಕಿನ ದರ್ಶನ ಒಂದು ಹೊಸ ಅಧ್ಯಾಯದತ್ತ, ಪ್ರಗತಿಯತ್ತ ಸಾಗುವ ಸೂಚನೆಯಾಗಿದೆ.

"ಮೂಡಲ ಮನೆಯಾ ಮುತ್ತಿನ ನೀರಿನ
ಎರಕ್ಕವ ಹೊಯ್ದಾ
ನುಣ್ಣನ್ನೆರಕ್ಕವ ಹೊಯ್ದಾ
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ.
ಹೋಯ್ತೋ – ಜಗವೆಲ್ಲಾತೋಯ್ದಾ"೧

"ಪ್ರಕೃತಿ ಪ್ರಿಯವಾದ ಕವಿ ಹೃದಯ ಎಂತಹ ಆತ್ಮಿಯತೆಯಿಂದ ಬೆಳಗಾಗುವ ದೃಶ್ಯವನ್ನು ಕಂಡಿದೆ, ಅನುಭವಿಸಿದೆ. ಮನೆಯ ಬಾಗಿಲನ್ನು ತೆರೆದು ಬೆಳಗಾಗ ನೀರೆರಚುವಂತೆ ಮೂಡಲ ಮನೆಯ ಬಾಗಿಲು ತೆರೆದು ಮುತ್ತಿನ ನೀರಿನ ಸಂಸೇಚನೆಯಾಗುತ್ತಿದೆ. ಬೆಳಕು ಹರಿದು ಜಗವೆಲ್ಲಾ ತೊಯ್ದಿದೆ.

"ರತ್ನದರಸದಾ ಕಾರಂಜೀಯೂ
ಪುಟಪುಟನೇ ಪುಟಿದು
ತನೇ – ಪುಟಪುಟನೆ ಪುಟಿದು
ಮಘಮಘಿಸುವಾ ಮುಗಿದ ಮೊಗ್ಗೀ
ಪಟಪಟನೆ ಒಡೆದು
ತಾನೇ ಪಟಪಟನೆ ಒಡೆದು" (ಅದೇ)

ಬೇಂದ್ರೆಯವರ ಕಾವ್ಯ 'ಅಸ್ಪಷ್ಟ ಸುಂದರ ನಾದದಿಂದ ಬಂಧುರ' ಎರಡನೆಯ ಪದ್ಯಕ್ಕೆ ಈ ಮಾತು ಅನ್ವಯಿಸುತ್ತದೆ. ರತ್ನ ರಸದ ಕಾರಂಜಿ ಯಾವುದು ಎಂಬುದು ಗೊತ್ತಿಲ್ಲ. ಅದು ಪುಟಿದು ಶ್ರಾವಣದ ಸೂರ್ಯೋದಯವೆಂದು ಊಹಿಸಲಾರದೆ ಮೂಡಲಲ್ಲಿ ಬುಗ್ಗೆ ಚಿಮ್ಮುವ ಅನಂತ ವರ್ಣಗಳ ಮೇಳ ಎಂದು ಹೇಳಬಹುದು. ಹಾಗೆಯೇ ಸೂರ್ಯೋದಯ ವಾದೊಡನೆಯೇ ಕವಿ ಸಮಯ ಹೇಳುವಂತೆ – ತಕ್ಷಣ

---

೧. ಔದುಂಬರ ಗಾಥೆ, ಸಂಪುಟ. ೪, ದ.ರಾ.ಬೇಂದ್ರೆ, ಜೀವನ ಮಹಾಕಾವ್ಯ, ಪುಟ– ೬೩.

ಮೊಗದ ಮೊಗ್ಗುಗಳು ಅರಳುವುದೂ ಅಲ್ಲ ಪಟಪಟನೆ ಸದ್ದು ಮಾಡುವುದೂ ಅಲ್ಲ. ಹೂವರಳುವುದು ಹೆಣ್ಣಿಗೆ ಯೌವನೋದಯವಾಗುವಂತೆ. ಮೌನವಾಗಿ, ದಿಢೀರನೆ ಗಮನಕ್ಕೆ ಬಾರದ ರೀತಿಯಲ್ಲಿ, ರಹಸ್ಯವಾಗಿ ನಡೆಯುವ ಮಂತ್ರಕ್ರಿಯೆ. ರವೀಂದ್ರರೆನ್ನುವಂತೆ ರಾತ್ರಿಯ ಮೊಗ್ಗನ್ನು ಅರಳಿಸಿ ಅದರ ಕೀರ್ತಿಯನ್ನು ಹಗಲಿಗೆ ಬಿಡುತ್ತದೆ. ಕವಿಯ ಸೂಕ್ಷ್ಮೇಂದ್ರಿಯವಾದರೋ ಮೊಗ್ಗು ಅರಳುವ ರಹಸ್ಯಕ್ರಿಯೆಯನ್ನು ನೋಡುತ್ತದೆ. ಆಲಿಸುತ್ತದೆ. ಮೂರನೇಯ ಚರಣ ಕವನಕ್ಕೆ ಉತ್ಕರ್ಷತೆಯನ್ನು ನೀಡುತ್ತದೆ.

"ಎಲೆಗಳ ಮೇಲೇ ಹೂಗಳ ಒಳಗೇ
ಅಮೃತ್ಯದಾ ಬಿಂದು
ಕಂಡವು ಅಮೃತ್ಯದ ಬಿಂದು
ಯಾರಿರಿಸಿದವರು ಮುಗಿಲ್ಯಮೇಲಿಂ
ದಿಲ್ಲಿಗೇ ತಂದು.
ಈಗ – ಇಲ್ಲಿಗೇ ತಂದು"(ಅದೇ)

ಮುಂಜಾನೆಯ ಇಬ್ಬನಿ ಎಲೆಗಳ ಮೇಲೆ ಹೂಗಳ ಒಳಗೆ ತಂಗಿದೆ. ಇಬ್ಬನಿಯ ಹನಿಗಳು ಅಮೃತದ ಬಿಂದುವಿನಂತೆ ಇವೆಯೆಂದು ಎಂದು ಹೇಳಲಿಲ್ಲ ಕವಿ. 'ಅಮೃತದ ಬಿಂದು' ಎನ್ನುವುದು ಅದನ್ನೇ ಧ್ವನಿಸುತ್ತದೆ. ಕವಿ ಮುಗ್ಧರಾಗಿ ಕೇಳುತ್ತಾರೆ. "ಮುಗಿಲ ಮೇಲಿಂದ ಇಲ್ಲಿಗೆ ತಂದು ಯಾರು ಇದನ್ನು ಇರಿಸಿದ್ದಾರೆ".

ಬೇಂದ್ರೆಯವರ ಸೂಕ್ಷ್ಮವಾದ ಕಲ್ಪನೆಗೆ ಸಾಕ್ಷಿ ನಾಲ್ಕನೆಯ ಚರಣ. ಹೂವಿನ ಎಸಳಿನ ಚವರಿಯನ್ನು ಗಾಳಿಯ ಕೈಯಲ್ಲಿಟ್ಟರಂತೆ; ಗಾಳಿ ದುಂಬಿಯ ಹಿಂದಿನ ಮೈಗೆಲ್ಲಾ ಗಂಧವನ್ನು ಸವರಿರುವಂತೆ, ಆನಂತರ ಆ ದುಂಬಿಯ ಹಿಂಡನ್ನು ಹಾರಿಬಿಟ್ಟಿದ್ದಾರೆ.

"ಗಿಡಗಂಟೆಯಾ ಕೊರಳೊಳಗಿಂದ
ಹಕ್ಕೀಗಳ ಹಾಡು
ಹೊರಟಿತು – ಹಕ್ಕೀಗಳ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು ಕಾಡಿನಾ ನಾಡು" (ಅದೇ, ೬೪)

ಮುಂಜಾನೆಯ ಬೆಳಕಾದಾಗ ಗಿಡಗಂಟೆಯ ಪೊದೆಯೊಳಗೆ ಗೂಡುಮಾಡಿಕೊಂಡು ಕುಳಿತಿರುವ ಹಕ್ಕಿಗಳೆಲ್ಲಾ ಹಾಡಿದರೆ ಗಿಡಗಂಟೆಯ ಕೊರಳಿನಿಂದಲೇ ಹಾಡು ಮೂಡಿಬಂದಮತಾಯಿತಂತೆ. ಆ ಹಾಡು ಒಂದೇ ಕ್ಷಣದಲ್ಲಿ ಕಾಡುನಾಡೆಲ್ಲಾ ಗಂಧರ್ವರ ಸೀಮೆಯನ್ನಾಗಿ ಪರಿವರ್ತಿಸಿತು. ಹಾಡಿನ ಮಾಧುರ್ಯ ಅದು ಸೃಷ್ಟಿಸಿದ ನೂರನ ಲೋಕ – ಈ ಎಲ್ಲಾವನ್ನೂ ಗಂಧರ್ವರ ಸೀಮೆ ಎನ್ನುವ ಮಾತು ಧ್ವನಿಸುತ್ತದೆ.

"ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹ
ಸ್ಪರ್ಶಾ ಪಡೆದೀತೀ ದೇಹ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ ದೀ ಮನಸಿನ ಗೇಹಾ" (ಅದೇ)

ಕಣ್ಣು, ಕವಿ, ಮೂಗುಗಳಿಗೆ ಮಂತ್ರ ಮೀಸಲಾದ ಅನುಭವ ಸಕಲೇಂದ್ರೀಯ-ಗಳನ್ನೂ ವ್ಯಾಪಿಸಿತು. ಕಣ್ಣು ಸೂರ್ಯ ಮತ್ತು ಪ್ರಕೃತಿಯನ್ನ ನೋಡಿತು. ನಾಲಿಗೆ ಅದರ ಸವಿಯನ್ನು ಸವಿಯಿತು. ದೇಹ ಅದರ ಸ್ಪಶ ಪಡೆಯಿತು. ಕಿವಿಯು ಇಂಚರವನ್ನು ಕೇಳಿತು. ಪರಿಸರದ ವಾಸನೆ ಮುಗಿಗೆ ಬಡಿಯಿತು. ದೇವರು ಕೊಟ್ಟ ಈ ದೇಹಕ್ಕೆ ಅತೀಂದ್ರಿಯವಾದ ಸುಖ ಬೆಳಕಿನಿಂದ ದೊರೆಯಿತು.

"ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣಿಗೆ ಕಾಣೆದೋ ಬಣ್ಣಾ
ಶಾಂತೀರಸವೇ ಪ್ರೀತೀಯಿಂದಾ
ಮೈದೋರಿತಣ್ಣಾ
ಇದು ಬರಿ ಬೆಳಗಲ್ಲೋ ಅಣ್ಣಾ" (ಅದೇ)

ಇಲ್ಲಿ ಕವಿಯ ಮನಸ್ಸು ವೈಚಿತ್ರ್ಯಕ್ಕೆ ಬೆರಗಾಗಿ ಅಮೃತದ ಬಿಂದುವನ್ನು ತಂದಿಟ್ಟವರು ಯಾರು? ಗಂಧರ್ವ ಸೀಮೆಯನ್ನಾಗಿ ಈ ಪರಿಚಿತ ಭೂಮಿಯನ್ನು ಪರಿವರ್ತಿಸಿದವರು ಯಾರು? ಎಂದು ಅಚ್ಚರಿಪಡುತ್ತಿದ್ದ ಮನಸ್ಸು ಒಂದು ಗಳಿಗೆ ಈ ಸೌಂದರ್ಯಾಸ್ವಾದನೆಯಲ್ಲಿ ತನ್ಮಯತೆಯನ್ನು ಪಡೆಯಿತು. ಮರುಕ್ಷಣ ಏನು? ಎಂದು ಪ್ರಶ್ನಿಸಿದಾಗ ಏನೋ ಎಂತೋ ತಿಳಿಯದಾಯಿತು. ಇದರ ಅಳಿವು ತಿಳಿವನ್ನು

ಮೀರಿದುದು. ಈ ರಸಾನುಭವದಲ್ಲಿ ಮಿಂದ ಮನಸ್ಸಿಗೆ ಈಗ ಬಣ್ಣಗಳೂ ಕಾಣಿಸುತ್ತಿಲ್ಲ. ಅದರ ಬದಲು "ಶಾಂತಿರಸವೇ ಪ್ರೀತಿಯಿಂದ ಮೈದೋರಿತಣ್ಣಾ. ಇದು ಬರಿ ಬೆಳಗಲ್ಲೊ ಅಣ್ಣ" ಎನ್ನುವ ಅನುಭವವಾಗುತ್ತದೆ.

"ಕನ್ನಡ ನವೋದಯದಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ಪ್ರಕೃತಿಯ ದೈವೀಕರಣ".[೧] ಪ್ರಕೃತಿಯನ್ನು ಕುರಿತಾಗಿ ಆನಂದದ ಹುಚ್ಚುಮೂಡಿ, ಬೆಳೆದು, ಜೀವನವನ್ನೆಲ್ಲಾ ಆಕ್ರಮಿಸಿಕೊಂಡಿರುವ ಕವಿ 'ಕುವೆಂಪು'ರಂತಹ ಮತ್ತೊಬ್ಬ ಕವಿಯನ್ನು ಕನ್ನಡ ಸಾಹಿತ್ಯದಲ್ಲಿ ಎದುರುಗೊಳ್ಳುವುದು ಕಷ್ಟ. ಪ್ರಾಧಾನವಾಗಿ ಕುವೆಂಪು ಪ್ರಕೃತಿ ಕವಿ ಪ್ರಕೃತಿಯ ಮಡಿಲಿನಲ್ಲಿ ಹುಟ್ಟಿದವರು. ಅದನ್ನು ನೋಡುತ್ತಾ ಬೆಳೆದವರು ಎಳಮೆಯಿಂದಲೂ ಅದರ ಅಂತರಂಗದ ಆತ್ಮೀಯ ಸ್ಪರ್ಶವನ್ನು ಪಡೆದಿದ್ದಾರೆ. ತನ್ನನ್ನು ಒಲಿದು ಏಕಾಗ್ರತೆಯಿಂದ ಆರಾಧಿಸಿದ ಈ ಚೇತನಕ್ಕೆ ಪ್ರಕೃತಿಯೂ ತನ್ನ ಅಂತರಂತದ ಶ್ರೀಮಂತ ಭಂಡಾರವನ್ನು ಬಹಿರಂಗ ಸೌಂದರ್ಯವೆಂತೋ ಅಂತು ನಿರ್ವಂಚನೆಯಿಂದ ಸೂರೆಗೊಟ್ಟಿದೆ. ಆದ್ದರಿಂದಲೇ ಆ ಅನುಭವದ ಭಾರದಿಂದ ಬಳುಕುತ್ತಿರುವ ಅನೇಕ ಶ್ರೇಷ್ಠ ಕವನಗಳನ್ನು ಕನ್ನಡಕ್ಕೆ ಕಾಣಿಕೆಯಾ ನೀಡಿದ್ದಾರೆ.

ಅವುಗಳಲ್ಲಿ 'ಆನಂದಮಯ ಈ ಜಗಹೃದಯ'[೨] ಎಂಬ ಕವಿತೆಯಲ್ಲಿ ಪ್ರಕೃತಿಯ ಸೊಬಗನ್ನು ಈ ರೀತಿ ಬಣ್ಣಿಸಿದ್ದಾರೆ.

> "ಆನಂದಮಯ ಈ ಜಗಹೃದಯ
> ಏತಕೆ ಭಯ? ಮಾಣೋ!
> ಸೂರ್ಯೋದಯ ಚಂದ್ರೋದಯ
> ದೇವರ ದಯ ಕಾಣೋ!
> ಬಿಸಿಲಿದು ಬರಿ ಬಿಸಿಲಲ್ಲವೊ
> ಸೂರ್ಯನ ಕೃಪೆ ಕಾಣೋ!
> ಸೂರ್ಯನು ಬರಿ ರವಿಯಲ್ಲವೋ
> ಆ ಭ್ರಾಂತಿಯ ಮಾಣೊ!
> ರವಿ ವದನವೆ ಶಿವ ಸದನವೊ
> ಬರಿ ಕಣ್ಣುದು ಮಾಣೋ!
> ಶಿವ ನಿಲ್ಲದ ಸೌಂದರ್ಯವೇ
> ಶವ ಮುಖದ ಕಾಣೋ!"[೧]

೧. ಡಿ.ಆರ್.ನಾಗರಾಜ್, ಶಕ್ತಿ ಶಾರದೆಯ ಮೇಳ, ಪು. ೧೮.

೨. ಮು. ಶಿವನಂಜಯ್ಯ, ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ, ಪುಟ ಸಂಖ್ಯೆ – ೬೪.

ಸೌಂದರ್ಯ ಶಿವಾತ್ಮಕಕಾದದ್ದು. ಶಿವನನ್ನು ಉಳಿದು ಅದು ಮೈದೋರು-ವಂತಿಲ್ಲ. ಮೈದೋರಲು ಪ್ರಯತ್ನಿಸಿತೋ ಅದು ಶವಮುಖದ ಕಣ್ಣಾಗುತ್ತದೆ. ಪ್ರಕೃತಿ ಸೌಂದರ್ಯದ ಆಸ್ವಾದನೆಯೇ ಪರಮಾತ್ಮನ ಆರಾಧನೆ ಎನ್ನುವ ಶ್ರದ್ಧೆ ಕವಿಗೆ ಇದೆ. "ಮೇಲಿನ ಸಾಲುಗಳು ಒಟ್ಟಾರೆಯಾಗಿ ನವೋದಯ ಪ್ರಕೃತಿ ದರ್ಶನದ ಒಂದು ಮುಖವನ್ನು ಸೂತ್ರೀಕರಿಸಿ ಹೇಳುತ್ತವೆ. ಆದ್ದರಿಂದಲೇ ಕುವೆಂಪು ಅವರ ಈ ಕವನ ಪ್ರಾತಿನಿಧಿಕವಾಗಿದೆ"[೨] ಎಂದು ಡಿ.ಆರ್.ನಾಗರಾಜು ಹೇಳಿದ್ದಾರೆ.

ವಿಶ್ವದ ಚಲುವನ್ನು ಗುರುತಿಸುವುದು. ಅದನ್ನು ಆಸ್ವಾದಿಸುವುದೂ ದೇವರ ಅಹೇತಕ ಕರಣೆಯಿಂದಲೇ ಎಂಬುದು ಪು.ತಿ.ನ. ಅವರ ಅಚಲ ವಿಶ್ವಾಸ

"ಜಗ ಚೆಲುವೆನ್ನುವ ಬೆಯಾನುಕರಣನೆ
ವಿಶ್ವಾತ್ಮನ ನಿರ್ಹೇತುಕ ಕರಣೆ!!"

ಎನ್ನುತ್ತಾರೆ ಅವರು ಜಗದ ಚೆಲುವಿನ ಒಂದು ಮುಹೂರ್ತದ ಆಸ್ವಾದನೆ-ಯಿಂದ ತೃಪ್ತಿಪಡೆದ ಅವರ ಮನಸ್ಸು ಕ್ಷಣ ಮಾತ್ರದಲ್ಲಿಯೇ ಚಿಂತನಾಮಗ್ನವಾಗುತ್ತದೆ. ಚಿಂತನೆ ಅವರ ಕವನಗಳಲ್ಲಿ ಭಾವದ ಅವಿನಾಸಂಗಿ. ಭಾವತೀವ್ರತೆಯಾದರೂ ಒಮ್ಮೊಮ್ಮೆ ಕಡಿಮೆಯಾಗಬಹುದು. ಆದರೆ ಚಿಂತನೆಯ ಪ್ರಖರತೆ ಮುಸಳುವಂತಿಲ್ಲ. ಮೇಲೆ ಹೇಳಿರುವ ಪದ್ಯದಲ್ಲಿ ಒಮದಾದ ಮೇಲೊಂದು ಚಿತ್ರಗಳ ಪರಂಪರೆ ಬರುತ್ತದೆ. ಮೇಲುಗಾಳಿಯಲ್ಲಿ ತಿಡದೆಲೆ ಹೊರಳುತ್ತಿದೆ. ತಿಳಿಗೊಳ್ಳದಲ್ಲಿ ಕಿರಿಯ ತೆರೆಗಳು ಉರುಳುತ್ತಿವೆ. ನಡುಬಾನಿನಲ್ಲಿ ಬಿಳಿಯ ಮುಗಿಲು ಆಡುತ್ತಿದೆ. ಗುಡಿಯ ಗಂಟೆಯ ದನಿ ಆಕಾಶದಲ್ಲಿ ಮುಳುಗುತ್ತಿದೆ. ಅಲ್ಲಿ ಮುಳುಗಿರುವ ಭಾವಗಳನ್ನು ಮೇಲೆತ್ತಲೆಂಬಂತೆ. ಸಂಪಗೆಯ ನೆಳಲು ತೊಟ್ಟಿಲಾಡುತ್ತಿದೆ. ಬಿಸಿಲಿನ ಬಿಳಲು ನೇರಿಳೆಗೆ ಬಿದ್ದಿವೆ. ಹಿಣಿಲನ್ನು ಕುಣಿಸುತ್ತಾ ಬಸವ ಬರುತ್ತಿದೆ. ರೆಂಬೆಯನ್ನು ಆಲಂಬಿಸಿ ಕವಿ ಕುಳಿತಿದೆ. ಬಂಡೆಗಳೊಡನೆ ಸ್ನೇಹದಿಂದ ಕುರಿಯ ಮುಂದೆ ಚಳಿಸುತ್ತಿದೆ. ಮಲೆ ಉಸಿರಾಡುತ್ತಿದೆಯೋ ಎಂಬಂತೆ ಈ ಚಿತ್ರವನ್ನು ನಿಡಿ ಕವಿ ಕೇಳುತ್ತಾರೆ.

ಜಗದೀ ದೈನಂದಿನ ಜಂಗಮತೆ
ನನ್ನೊಳು ಜನಿಯಿಸಿತೇತಕೆ ಮಮತೆ?

ದಿನದಿನವೂ ನಡೆಯುವ ಸಾಮಾನ್ಯ ಕ್ರಿಯೆಗಳೂ ಕೂಡ ಇಂದು ಮಾತ್ರ ಏಕೆ ನನ್ನಲ್ಲಿ ಮಮತೆಯನ್ನುಂಟುಮಾಡಿದೆ.

---

೧. ಸಂಪಾದಕರು ಡಾ. ದೇಜಗೌ, ಡಾ. ಜಿ.ಎಸ್.ಶಿವರುದ್ರಪ್ಪ, ಡಾ. ಪ್ರದಾನ್‌ಗುರುದತ್ತ, ಕುವೆಂಪು ಸಂಚಯ, ಪು. ೪೦.
೨. ಡಿ.ಆರ್.ನಾಗರಾಜ್, ಶಕ್ತಿ ಶಾರದೆಯ ಮೇಳ, ಪು೧. ೧೮.

ಈ ಹೊರಜಗಕೂ ನನ್ನೊಳ ಮುದಕೂ
ಏತರ ನೆಂಟೆಂತದಕ್ಕೂ ಇದಕ್ಕೂ

ಹೊರಗಿನ ಜಗತ್ತಿಗೂ ಅಂತರಂಗದ ಮುದಕ್ಕೂ ಏತರ ಸಂಬಂಧ ಸೌಂದರ್ಯವನ್ನು ಕುರಿತು, ಅದರ ಆಸ್ವಾದನೆಯನ್ನು ಕುರಿತು ಉದ್ಭವಿಸಿರುವ ಈ ಪ್ರಶ್ನೆ ಅನಾದಿಕಾಲದ್ದು. ಅದಕ್ಕೆ ಬಂದಿರುವ ಉತ್ತರವೂ ಅನಾದಿಕಾಲದ್ದೇ.

ಶಾಸ್ತ್ರಗಮನಗಳ ಝುಂಕಿಸುವಂತೆ
ತರ್ಕ ಹೇತುಗಳ ಕೊಂಕಿಸುವಂತೆ
ನಿರ್ವ್ಯಾಜಂ ಬಹ ಹರಿಕೃಪೆಯೋಲು
ಮೋದದ ಕೃಪೆಗಿಂಬಾಯಿತು ಬಾಳು॥

ಆದುದರಿಂದಲೇ ಇದೊ ಈ ಒಂದು ನಿರ್ದಿಷ್ಟ ಗಳಿಗೆಯಲ್ಲಿ ಜಗತ್ತು ಚೆಲುವಾಗಿದೆ ಎಂಬ ಭಾವ ಮನಸ್ಸಿನಲ್ಲಿ ಸ್ಪಂದಿಸಿತೆಂದರೆ ಅದು ಭಗವತ್ಕೃಪೆಯಿಂದಲೇ. ಇದು ಕವಿಯ ಶ್ರದ್ಧೆಯೂ ಆಗಿದೆ.

ಪ್ರಕೃತಿಯ ಸೌಂದರ್ಯ, ಅದನ್ನು ಕಾಣುವ ಕವಿಯ ಮನಸ್ಸಿಗೆ ಉಲ್ಲಾಸ ಸಂತೋಷವನ್ನು ತರುತ್ತದೆ ಎಂಬುದು ಸಾಮಾನ್ಯ ಭಾವನೆಯಾಗಿದೆ. ಆದರೆ ಪುತಿನ ಅವರ ಒಂದೆರಡು ಕವನಗಳು ಈ ಭಾವನೆ ಅರ್ಧಸತ್ಯ ಮಾತ್ರ ಎಂಬುದನ್ನು ತೋರಿಸುತ್ತವೆ. 'ಒಂದು ಸಂಜೆ' ಹಾಗೂ ಬಾನ್ ತಿಳಿದಿತ್ತು ಎಂಬ ಕವನಗಳು ಈ ನಿಟ್ಟಿನಲ್ಲಿ ಗಮನಿಸಬಹುದಾದ ಕವನಗಳಾಗಿವೆ. ಸಂಜೆಯ ಚೆಲುವನ್ನು ಕಂಡು ಕವಿ ವಿಷಾದಪಡುವಂತೆ 'ಒಂದು ಸಂಜೆ'[೧] ಕವನದಲ್ಲಿ ಚಿತ್ರಿಸಲಾಗಿದೆ.

ಹೊತ್ತು ಮುಳುಗಿತ್ತು – ಮಾಸಿ ಹೋಯಿತು
    ಭೂಮಿ ಹೊರಳುವ ನಸುಕೊಳು
ತಾಯಿ ಕಣ್ಮರೆಯಾಗೆ ಧೂಳಿನೊ'
    ಳಾಡಿ ಮಾಸುವ ಮಗುವೊಲು
ಕತ್ತಲಾಯಿತು ಹೊಳೆದುವಿದುಗೋ
    ಮೇಲೆ ಚುಕ್ಕಿಗಳಂದದಿ
ಅಂಧಕಾರದ ತೆರೆಗಳಾವುದೊ
    ಬೆಲಕ ಬಿಂಬಿಸುವಂದದಿ
ತಲದಿ ನಾನಿಹೇನಿ ಪುರಾತನ
    ತಮಕು ತಾರಿಗು ಮೋಹಿಸಿ

೧. ಪುತಿನ – ರಸ ಸರಸ್ವತಿ, ಪು. ೩೭.

ನಿಜವಿಷಾದೊಳಲ್ಲಿಗಲ್ಲಿಗೆ

ಹೊಳೆವ ಭಾವಕೆ ಹೋಲಿಸಿ

ಸಂಜೆಯ ವರ್ಣನೆಯನ್ನು ಮಾಡುತ್ತಾ ಬರುವ ಕವಿಯನ್ನು ಇದ್ದಕ್ಕಿದ್ದಂತೆ ವಿಷಾದದ ಛಾಯೆ ಆವರಿಸಿ ನಮ್ಮನ್ನು ವಿಸ್ಮಯಗೊಳಿಸುತ್ತದೆ. ಪ್ರಕೃತಿ ಸೌಂದರ್ಯದಿಂದ ಸಂತೋಷವುಂಟಾಗುವ ಬದಲು ಅಳಲು ಮೂಡಿರುವುದನ್ನು ಇಲ್ಲಿ ಕಾಣುತ್ತೇವೆ. ಹೀಗೆ ಬೇಂದ್ರೆ, ಕುವೆಂಪು ಹಾಗೂ ಪುತಿನ ಅವರ ಪ್ರಕೃತಿಗಳನ್ನು ಕಾಣಬಹುದಾಗಿದೆ.

ಅಧ್ಯಾಯ ಐದು

ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ

ಮಣ್ಣು, ಕಲ್ಲು, ಕಾಡು, ಪರ್ವತ, ಸರೋವರ ಸಾಗರಗಳಿಂದ ಕೂಡಿದ ಭೂಮಿ ಸುಮದರವಾಗಿದೆ. ಬಹುದೂರಕ್ಕೆ ವ್ಯಾಪಿಸಿದ ಅದರ ಮೈ ಆಕಾಶವನ್ನು ದಿಗಂತದಲ್ಲಿ ಮುಟ್ಟುವಂತೆ ತೋರುತ್ತದೆ. ಹಗಲು, ಇರುಳು, ಮಳೆಗಾಲ, ಚಳಿಗಾಲ, ಸೆಕೆಗಾಲ ಒಂದರ ಅನಂತರ ಒಂದು ಬದಲಾಗುತ್ತದೆ. ಕಾಲ ಸಾಗುತ್ತದೆ. ತೇಲುವ ಮೋಡ, ಬೀಳುವ ಮಳೆ, ಹಸಿರು ಸಸ್ಯ, ಇವುಗಳಿಗೆಲ್ಲ ಜೀವನಾಧಾರ ಸೂರ್ಯ.

ಸೂರ್ಯ ನೋಡುವುದಕ್ಕೆ ಅತಿ ದೊಡ್ಡ ಹಾಗೂ ಪ್ರಕಾಶಮಾನವಾದ ಒಂದು ನಕ್ಷತ್ರ. ಭೂಮಿಯಿಂದ ಸೂರ್ಯನಿಗಿರುವ ಅಂತರ ಕೇವಲ ೧೪೯.೬ ಮಿಲಿಯನ್ ಕಿ.ಮೀ. ಇತರ ನಕ್ಷತ್ರಗಳು ಸೂರ್ಯನಿಂದ ಎಷ್ಟೋ ಪಾಲು ದೂರದಲ್ಲಿವೆ. ಹದಿಮೂರು ಲಕ್ಷ ಭೂಮಿಗಳು ಸೂರ್ಯನಲ್ಲಿ ಹಿಡಿಯಬಲ್ಲವು. ಸೂರ್ಯ ತಾನು ಉರಿದು ಸಸ್ಯ ಜೀವಿಗಳಿಗೆ ಆಹಾರ ತಯಾರಿಕೆಗೆ ಸಹಕಾರಿಯಾಗಿದೆ.

ಇಟಲಿಯ ವಿಜ್ಞಾನಿ ಗೆಲಿಲಿಯೋ ಮೊದಲ ಬಾರಿಗೆ ಸೂರ್ಯಕಲೆಗಳನ್ನು ಸ್ಪಷ್ಟವಾಗಿ ಗುರುತಿಸಿದ. ನಮಗೆ ದೊರಕುವ ಆಹಾರ ತಯಾರಾಗುವುದಕ್ಕೆ, ಹವಾಮಾನಗಳಿಗೆ ಸೂರ್ಯ ನೀಡುವ ಚೈತನ್ಯವೇ ಕಾರಣ. ಶುಭ್ರವಾದ ಆಕಾಶ ಹಗಲಿನಲ್ಲಿ ತಿಳಿನೀಲಿ ಬಣ್ಣದಿಂದ ಕಂಗೊಳಿಸುತ್ತದೆ. ಮುಂಜಾನೆ ಪೂರ್ವದಿಂದ ಏರಿದ ಸೂರ್ಯ ಸಂಜೆ ಪಶ್ಚಿಮದಿಂದ ಇಳಿದು ಮರೆಯಾಗುತ್ತಾನೆ. ಆಕಾಶದಲ್ಲಿ ಕೆಂಪು ಕಿತ್ತಲೆ ಬಣ್ಣಗಳ ಓಕುಳಿಯಾಡುತ್ತಾನೆ.

ಸಾವಿರಾರು ವರುಷಗಳಿಂದ ಜನರು ಪ್ರಪಂಚದ ವಿವಿಧ ಭಾಗಗಳಲ್ಲಿ ಸೂರ್ಯನನ್ನು ದೇವರೆಂದು ಪೂಜಿಸುತ್ತಿದ್ದಾರೆ. ಭೂಮಿಯ ಚರಿತ್ರೆಯಲ್ಲಿ ಸೂರ್ಯನದು ಮಹತ್ವದ ಪಾತ್ರ. ನಮ್ಮ ದೇಶದ ಜನರಿಗೆ ಸೂರ್ಯ ಪೂಜ್ಯನೂ ಹೌದು ಹಾಗೂ ರಹಸ್ಯವುಳ್ಳವನೂ ಹೌದು. ಅದಕ್ಕಾಗಿಯೇ ತಮ್ಮ ಮೋಕ್ಷ ಸಿದ್ಧಿಗಾಗಿ ಋಷಿಮುನಿಗಳು ಸೂರ್ಯನ ಮೊರೆಹೋಗುತ್ತಿದ್ದರು. ಸೂರ್ಯೋದಯವನ್ನು ನಮ್ಮ ಹಿರಿಯರು 'ಪ್ರಜ್ಞೋದಯ' ಎಂದೂ ಕರೆದಿದ್ದಾರೆ.

೧೯ನೇ ಶತಮಾನದ ಕೊನೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಘಟ್ಟ ಆರಂಭವಾಯಿತು. ಇದು ಪಾಶ್ಚಾತ್ಯ ಕಾಲ ಅಂದರೆ ಮುಖ್ಯವಾಗಿ ಆಂಗ್ಲ ಸಾಹಿತ್ಯ ಮತ್ತು ವಿಚಾರಗಳ ಪ್ರಭಾವದಿಂದ ಆರಂಭವಾದ ಕಾಲ. ಪಾಶ್ಚಾತ್ಯ ವಿಚಾರಗಳ

ಮಹಾಪ್ರಭಾವದಿಂದ ಕನ್ನಡ ಸಾಹಿತ್ಯವಾಹಿನಿ ಬಹಳ ಬದಲಾಯಿಸಿದೆ ಮತ್ತು ವಿಶಾಲವಾಗಿದೆ" ಎಂದು ಇ.ಪಿ.ರೈಸ್ ಹೇಳಿದ್ದಾರೆ.[೧] "ಪರಿವರ್ತನೆ, ನಿತ್ಯ ನೂತನೆಯಾದ ಕಾವ್ಯಕನ್ನಿಕೆಯ ಚಿರಂತನ ಲಾವಣ್ಯದ ಒಂದು ಹೃದಯ ರಹಸ್ಯ" ಅನುಭವಸ್ಥವಿರೆಯಾದರೂ ಸರ್ವದಾ ಪ್ರಗತಿಶೀಲೆ; ಸಂಪ್ರದಾಯ ಸುಸ್ಥಿರೆಯಾದರೂ ನಿರಂತರ ಕ್ರಾಂತದರ್ಶಿನಿ: ಪ್ರಾಚೀನೆಯಾದರೂ ನಿತ್ಯನೂತನ; ಸಾಹಿತ್ಯ ಲಕ್ಷ್ಮಿ ಸ್ವಭಾವತಃ ನವನವೋನ್ಮೇಷಶಾಲಿನಿ"[೨]

"ಜನಜೀವನದ ನದಿ ಹರಿದ ಮೇಲೆ ಸಿದ್ಧವಾಗುವ ನದಿಪಾತ್ರದಂತಲ್ಲ ಸಾಹಿತ್ಯ; ನದಿಯ ನೀರನ್ನೂ ಸೃಜಿಸಿ, ಅದು ಹರಿಯುವ ದಿಕ್ಕನ್ನು ಹರಿಸಬೇಕಾದ ದಾರಿಯನ್ನೂ ನಿರ್ಣಯಿಸುವ ಚೇತನಶಕ್ತಿಯೂ ಹೌದು. ರಸರತಿ ಆ ಚೇತನಶಕ್ತಿ, ಸೃಷ್ಟಿಮೂಲ-ವಾಗಿರುವುದರಿಂದ, ಅದು ಸೃಷ್ಟಿ ಹೃದಯದಲ್ಲಿ ಸದಾ ಸ್ಪಂದಿಸುತ್ತಿರುವುದರಿಂದ, ಸೃಷ್ಟಿದೇವಿಯಾಗಿ ಮಹಾಲಕ್ಷ್ಮಿಯಂತೆ ವಾಗ್ದೇವಿಯ ಮಹಾಸರಸ್ವತಿಯೂ ಯಾವಾಗಲೂ ಹೊಸ ಹೊಸದಾಗಿ ನವನವೀನ ಪ್ರಕಾರಗಳಲ್ಲಿ ಪ್ರವಾಹಲೋಲೆ-ಯಾಗಿರುವ ನವನವೋನ್ಮೇಷ ಶಾಲಿನಿ ಮತ್ತು ಕ್ರಾಂತದರ್ಶಿನಿ".[೩]

"ಕನ್ನಡ ಸಾಹಿತ್ಯ ನೂತನ ರೂಪುರೇಖೆಗಳು, ನೂತನ ಪದಗಳ ಸಾಹಸಯಾತ್ರೆಗಳನ್ನು ಕೈಗೊಳ್ಳುವುದಕ್ಕೆ ಪಾಶ್ಚಾತ್ಯ ಪ್ರಭಾವವೇ ಪ್ರೇರಣಾಶಕ್ತಿ. ಹಲವು ಶತಮಾನಗಳಷ್ಟು ದೀರ್ಘಕಾಲ ಈ ದೇಶ ರಾಜಕೀಯವಾಗಿ, ಆರ್ಥಿಕವಾಗಿ ಘೋರ ವಿಪತ್ಪರಂಪರೆಗಳನ್ನು ಎದುರಿಸಬೇಕಾಗಿ ಬಂದುದಕ್ಕೆ ಎಷ್ಟೇ ಉಗ್ರವಾಗಿ ಇಂಗ್ಲಿಷರನ್ನು ಟೀಕಿಸಿದರೂ ಅನ್ನ ಪ್ರಾಣ ಮನೋಮಯಗಳಲ್ಲಿ ನಡೆದ ಒಂದು ಅಮೋಘವಾದ ಕ್ರಾಂತಿಗಾಗಿ ಅವರನ್ನು ಅಭಿನಂದಿಸಬೇಕಾಗುತ್ತದೆ. ಇಂಗ್ಲಿಷ್ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯದ ವಸ್ತುರೀತಿಗಳ ವೈವಿಧ್ಯವನ್ನು ಕಂಡು ದೇಶಭಾಷೆಗಳು ಮೊದಲು ಮುಗ್ಧವಾದರೂ, ಬಳಿಕ ಧೈರ್ಯವಾಗಿ ಸಖ್ಯ ಬೆಳೆಸಿ ಕ್ರಮಕ್ರಮವಾಗಿ ತಮ್ಮವನ್ನಾಗಿ ಮಾಡಿಕೊಂಡು ಕೊನೆಗೆ ಅಂತರ್ಗತವನ್ನಾಗಿಯೂ ಅಡಗಿಸಿಕೊಂಡವು. ಈ ಶತಮಾನದ ಆದಿಯ ದೇಶಭಾಷೆ ಚರಿತ್ರೆಯೆಂದರೆ ನವಲಾವಣ್ಯವತಿಯಾದ ಪಶ್ಚಿಮದ

---

೧. ಎಸ್ಸ್.ಅನಂತನಾರಾಯಣ 'ಹೊಸಗನ್ನಡ ಕವಿತಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ', ಪುಟ. ೪.

೨. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ.ಮೂರ್ತಿ, ಪ್ರಕಾಶನ, ಮೈಸೂರು, ೧೯೬೬, ಪುಟ. ೧೩.

೩. ಕುವೆಂಪು, 'ಇಂದಿನ ಹೊಸಗನನ ಕವಿತೆ ಮತ್ತು ಅದರ ಮುಂದಿನ ನಡೆ, ವಿಭೂತಿಪೂಜೆ, ಪುಟ. ೧೯.

ಕಾವ್ಯ ಕನ್ನೆಗೆ ಸೀರೆಯುಡಿಸಿ, ಮಾಂಗಲ್ಯ ತೊಡಿಸಿ ಭಾರತೀಯವಾದ ಆತ್ಮವನು ನೀಡಿದುದು"[೧]

ಬಿ.ಎಂ.ಶ್ರೀ ಅವರ "ಇಂಗ್ಲಿಷ್ ಗೀತೆಗಳು" ಆಧುನಿಕ ಕನ್ನಡ ಪ್ರಪಂಚಕ್ಕೆ ಹೊಸದೊಂದು ದಾರಿಯನ್ನು ನಿರ್ಮಿಸಿದ ಕೃತಿಯಾಯಿತು. ಈ ದಾರಿಯನ್ನೇ ಹಿಡಿದು ಅನಂತರದ ಕವಿಗಳು ಆಂಗ್ಲ ಸಾಹಿತ್ಯವನ್ನು ಬಳಸಿಕೊಂಡು ಕನ್ನಡದಲ್ಲಿ ಭಾವಗೀತೆಯನ್ನು ರಚಿಸತೊಡಗಿದರು. ಈ ಕ್ಷೇತ್ರದಲ್ಲಿ ಬೇಂದ್ರೆ, ಕುವೆಂಪು, ಪು.ತಿ.ನ., ಕೆ.ಎಸ್.ನ., ಜಿ.ಎಸ್.ಎಸ್. ಮೊದಲಾದವರನ್ನು ಹೆಸರಿಸಬಹುದು.

ಪ್ರಸ್ತುತ ಸಂಪ್ರಬಂಧದಲ್ಲಿ "ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ" ಎಂಬ ವಿಷಯವನ್ನು ಆಯ್ದುಕೊಂಡು ಅವರ ಸಮಗ್ರಕಾವ್ಯವನ್ನು ಅಧ್ಯಯನಕ್ಕೆ ಒಳಪಡಿಸಿ, ಅವರ ಪ್ರಕೃತಿ ಕವನಗಳ ಆಳ ಮತ್ತು ವಿಸ್ತಾರವನ್ನು ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಾಗಾಗಿ, ಅವರ ಪ್ರಕೃತಿ ಕವನಗಳನ್ನು ಅಧ್ಯಯನ ದೃಷ್ಟಿಯಿಂದ 'ಸೂರ್ಯೋದಯದ ಗೀತೆಗಳು' ಶ್ರಾವಣಮಾಸದ ಗೀತೆಗಳು ಹಾಗೂ 'ಇತರೆ ಪ್ರಕೃತಿ ಗೀತೆಗಳು' ಎಂದು ವಿಂಗಡಿಸಲಾಗಿದೆ.

ಸೂರ್ಯೋದಯದ ಗೀತೆಗಳು

ಬೇಂದ್ರೆಯವರ ಸೂರ್ಯೋದಯದ ಗೀತೆಗಳಲ್ಲಿ ಮೊದಲನೇ ಸ್ಥಾನದಲ್ಲಿ 'ಬೆಳಗು'[೨] ತುಂಬಾ ಪ್ರಸಿದ್ಧಿ ಪಡೆದ ಕವನ. ಈ ಕವನದಲ್ಲಿ ಅವರು ಉದಯಕಾಲದಲ್ಲಿ ಮೈಮರೆತ ಕವಿಯ ಭಾವಸಮಾಧಿಯನ್ನು ಚಿತ್ರಿಸಿದ್ದಾರೆ. ಅತ್ಯಂತ ಸರಳವಾದ ಅಚ್ಚಗನ್ನಡ ಪದಗಳಿಂದ ಅತ್ಯಾಪೂರ್ವವಾದ ವರ್ಣನೆ ಅನುಭವಗಳನ್ನು ಒಳಗೊಂಡಿರುವ ಈ ಕವನ ಜನಪ್ರಿಯತೆಯನ್ನು ಪಡೆದುಕೊಂಡಿದೆ.

ಶಾಂತಿರಸವೇ ಪ್ರೀತಿಯಿಂದ
ಮೈದೋರಿತಣ್ಣಾ
ಇದು ಬರಿ ಬೆಳಗಲ್ಲೋ ಅಣ್ಣಾ

ಎಂದು ಏಕಾಂತ ಭಾವನೆಯನ್ನು ಕವಿ ತೋರಿದ್ದಾರೆ. ಮತ್ತೊಂದು ಕವಿತೆಯಾದ 'ನಸುಕು ತುಂಬಾ ನಸುಕು'[೩] ಎಂಬ ಕವಿತೆಯಲ್ಲಿ ಕವಿ ನಸುಕನ್ನು ವರ್ಣಿಸಿದ್ದಾರೆ. ನಸುಕು ಎಂದರೆ 'ಬೆಳಗಿನ ಜಾವ'

---

೧. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೬೬, ಪು. ೯೩, ೯೪.

೨. ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೬೩.

೩. ಅದೇ, ಪುಟ ೨೯೭.

ಬೆಳಗು ಗಾಳಿ ತಾಕಿ ಚಳಿತು
ಇರುಳ ಮರವು ಒಡೆದು ತಳಿತು
ಅರುಣ ಗಂಧ ಹರುಹಿ ಒಳಿತು
ನಸುಕು ಬಂತು

ಬೆಳಗಿನ ಗಾಳಿ ಬಂದಾಗ ಇರುಳು ಒಡೆದು ಸೂರ್ಯನ ಕಿರಣ ಹಾಗೂ ಬೆಳಗಿನ ಗಂಧ ಹರಡಿ ಬೆಳಗಾಯಿತು ಎಂದು ಹೇಳಿದ್ದಾರೆ.

ಬೆಳಕು ಬಳ್ಳಿ ಬಿಟ್ಟು ಕುಡಿ
ಬಯಲಲೆತ್ತಿ ಹೆಗಲಗುಡಿ
ಅಡಗಿಸಿಟ್ಟು ರವಿಯ ಮಿಡಿ
ನಸುಕು ಬಂತು

ಅಡಗಿಸಿಟ್ಟಿದ್ದ ಬಯಲಗುಡಿಯನ್ನು ಅಡಗಿಸಿಟ್ಟಿದ್ದ ರವಿಯನ್ನು ಈ ಬೆಳಕು ಹೊರತಂದು ಬಯಲು ಮಾಡಿರುವ ನಸುಕು ಬಂತು.

ಬೆಳಗು ಸೂಸುತಿರಲು ಸುಸಿಲು
ಅದನು ಮೂಸುತಿರಲು ಉಸಿಲು
ಬೆಳಕು ಹೂತು ಆತು ಬಿಸಿಲು
ನಸುಕು ಬಂತು

ಮುಂಜಾವು ಬೆಳಕನ್ನು ಸೂಸುತಿರಲು ಅದನ್ನು ಶ್ವಾಸೋಚ್ವಾಸ ಮೂಸುತ್ತಿರಲು ಬೆಳಕು ಹೂತು ಆಯಿತು ಬಿಸಿಲು ಎಂದಿದ್ದಾರೆ. ಇಲ್ಲಿ ಹೂತು ಎಂದರೆ ಹೂಬಿಟ್ಟ ಎಂದು ಅರ್ಥ ಬೆಳಕಿನ ಹೂವು ಎಂಬ ಕಲ್ಪನೆಯೇ ಚಿತ್ತಾಕರ್ಷಕವಾಗಿದೆ. ಹಾಗೆಯೇ 'ಬೆಳಗುಜಾವ'[೧] ಎಂಬ ಕವನದಲ್ಲಿ ಪ್ರಕೃತಿ ಹಾಗೂ ಮನುಷ್ಯನಲ್ಲಿ ಆಗುವ ಬದಲಾವಣೆಗಳನ್ನು ಕವಿ ಕಟ್ಟಿಕೊಟ್ಟಿದ್ದಾರೆ. ಬೆಳಗನ್ನು ಕಂಡು ನಮ್ಮ ಜನ ಆನಂದಪಡದೆ ಹೊತ್ತು(ಸೂರ್ಯ) ನೆತ್ತಿಗೆ ಬರುವವರೆವಿಗೂ ಜಡತ್ವದಿಂದ ಸೋಂಬೇರಿಗಳಾಗಿ ಮಲಗಿರುವ ಹಾಗೂ ಮಲಗುವ ಜನರಿಗೆ ತರಾಟೆ ತೆಗೆದುಕೊಂಡಿದ್ದಾರೆ. ಈ ಕವಿತೆಯಲ್ಲಿ ಕವಿ ಜನಪದ ಗೇಯತೆಯನ್ನು ಹೊಂದಿರುವ ಈ ಗೀತೆ ಎಲ್ಲರಿಗೂ ಅರ್ಥವಾಗುವಂತೆ ಶ್ರೀ ಸಾಮಾನ್ಯನ ನೆಲೆಯಲ್ಲಿ ನಿಂತು ಬೆಳಗಿನ

೧. ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೧೫.

ಜಾವದ ಆರಾಧನೆ ಕವಿ ಹಾತೊರೆಯುತ್ತಿರುವುದು ಹಾಗೂ ಎಲ್ಲರಲ್ಲೂ ಹಾತೊರೆಯುವ ಭಾವವುಂಟಾಗುವಂತೆ ಮಾಡುತ್ತಿದ್ದಾರೆ.

'ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯ ಕಣ್ಣ
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನು ಬಣ್ಣ
ಜೇನ್ನೊಣದ ಹದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ.
ಗುಡಿ ಗೋಪುರಕ್ಕೂ ಬಲೆ ಬೀಸಿ ಬಂದ ಅಗೋ ಬೆಳಕು ಬೇಟೆಗಾರ

ಹೇಗೆ ಹುಲಿಕಂಡ ಹುಲ್ಲೆಯಂತೆ ಹೆದರಿ ಓಡುವುದೋ ಹಾಗೂ ಬೇಟೆಗಾರರನ್ನು ಕಂಡ ಮಿಗಗಳು ಪಲಾಯಾನಗೊಳ್ಳುವುವೋ ಹಾಗೆ ಈ ಬೆಳಕು ಎಂಬ ಬೇಟೆಗಾರ ಬಂದಾಗ ನಕ್ಷತ್ರವು ಜಾರುವುದು. ತಮವೆಲ್ಲ ಸೋರುವುದು ಬಾನಿನಲ್ಲಿ ಬಣ್ಣ ಮೈದಾಳಿದಾಗ ಎಲ್ಲರ ಮನಸ್ಸಿಗೂ ಅವರ್ಣನೀಯ ಆನಂದ, ಉತ್ಸಾಹ ಉಲ್ಲಾಸ ಮೂಡಿ ರಸಿಕತೆ ಮೈದಾಳುವುದು. ಬೆಳಕು ಎಂಬ ಮಾರನಿಂದ. ಬೆಳಕು ಎಂಬ ಬಲೆಯನ್ನೆಲ್ಲ ಇಳೆಯಲೆಲ್ಲ ಹರಡಿ ಎಲ್ಲರನ್ನು ಸೆರೆಗೊಯುವ ಬೇಟೆಗಾರ ಈ ಬೆಳಕು.

ಅವನ ಒಲುಮೆಯ ಬಲೆಗೆ ಸಿಕ್ಕಿದಾಗ ನಿಶೆಯಿಳಿದ ಉಷೆಯ ಎಳೆನಗೆಗೆ ಸೋತು ತನ್ನನ್ನ ಆ ಉಷೆಗೆ ಅರ್ಪಿಸಿಕೊಂಡು ಅದರಲ್ಲಿ ಲೀನವಾಗುತ್ತಿರುವುದನ್ನು ಕವಿ "ಮಕ್ಕಳಿರ ಕೇಳಿ ರಸ ಕುಡಿಯಲೇಳಿ, ಹುಸಿನಿದ್ದೆಗೆದ್ದೆ ಸಾಕು" ಎನ್ನುತ್ತಿದ್ದಾರೆ. ಈ ಬೆಳಗಿನ ಜಾವವನ್ನು ಒಂದು ದಿನದ ಮಟ್ಟಿಗೆ ಅನುಭವಿಸಿಬಿಡುವುದಲ್ಲ. ಅದು ಪ್ರತಿಕ್ಷಣಕ್ಕೂ ಪೊಸತಾವಾಗಿಯೇ ಕಾಣುತ್ತಿರುತ್ತದೆ. ಆದುದರಿಂದ ತುಂಬುಬಾಳಿನಿಂದ ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಮುಂದಿನ ಮೂರನೇ ವೃತ್ತದಲ್ಲಿ ಕೋಳಿಯ ಚಿತ್ರಣವನ್ನು ತರುತ್ತಾರೆ. ಈ ಪ್ರತಿಮೆ ಪ್ರಾಚೀನ ಕವಿಗಳಿಂದಲೂ ಒಂದಂತ್ತದ್ದು ಎಂಬುದನ್ನು ಈಗಾಗಲೇ ಪ್ರಾಚೀನ ಕನ್ನಡ ಸಾಹಿತ್ಯದ ಸೂರ್ಯೋದಯ ವರ್ಣನೆಯೇ ಕೋಳಿಯ ಕೂಗಿನ ವರ್ಣನೆಯನ್ನು ನೋಡಿದ್ದೇವೆ. ಬೇಂದ್ರೆಯವರೂ ಕೂಡ ಆ ಚಿತ್ರವನ್ನು ಇಲ್ಲಿ ತಂದಿದ್ದಾರೆ.

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರಗಿ ಬಂದಾರೆ? ಅವರು ಬರಲಿಕ್ಕು ಇಲ್ಲಿ ಮರಳಿ

ಜೀವನವೆಂಬುದೇ ಅಂಗಡಿ. ಆ ಅಂಗಡಿಯ ಕದವ ತೆಗೆದು ಬೆಳಗಿನ ಜಾವದ ಸ್ಪರ್ಶಕ್ಕೆ ಮೈಯೊಡ್ಡಿ ಎನ್ನುತ್ತಿದ್ದಾರೆ. ಹುಟ್ಟಿನ ಬೆನ್ನೊಟ್ಟಿಗೆಯೇ ಸಾವು ಕೂಡ

ಬರುತ್ತಿರುತ್ತದೆ. ಅದು ಬರುವುದರೊಳಗೆ ಇಂತಹ ಸೌಂದರ್ಯದ ಆನಂದವನ್ನು ಕಾಣಿ ಈ ಬೆಳಕಿನಿಂದ.

"ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟು ಸುಗ್ಗಿಮತ್ತೆ?
ಮುಳುಗಿರಲಿ ಮುಪ್ಪು ಚಿಂತನದಿ; ತಾನು ಹರಯಕ್ಕೆ ಬೇರೆ ಹೊತ್ತೆ?"

ಹೇಗೆ ಕತ್ತಲಾದ ಬಾನು ಬೆಳಕಿನಿಂದ ಪ್ರಕಾಶಿಸುವುದೋ ಬೋಳುಮರ ಹೇಗೆ ಚಿಗುರೊಡೆಯುವುದೋ ಹಾಗೆ ಮುಪ್ಪಿಗೂ ಬೆಳಗಿನ ಜಾವದಿಂದ ಹರೆಯು ಹೊಮ್ಮುವುದು ಎಂದಿದ್ದಾರೆ ವರ ಕವಿ ಬೇಂದ್ರೆಯವರು. ಹಾಗೆಯೇ

ಬೇಂದ್ರೆಯವರ ಮತ್ತೊಂದು ಸರಳವಾದ ಸೂರ್ಯೋದಯ ಕವನ ಎಂದರೆ 'ಉದಯ ರವಿ ತಂಪು ಕೆಂಡ'[೧] ಇದು ಆಧ್ಯಾತ್ಮಗೀತೆಯಾಗಿದೆ. ಆಧ್ಯಾತ್ಮದಲ್ಲಿ ಸೂರ್ಯ ಭಗವಾನನನ್ನು ದರ್ಶಿಸುತ್ತಿದ್ದಾರೆ ಕವಿ.

ಕದಳಿ ಕೆದಡಿತು ಪೂರ ಬಂತು ಕರ್ಪೂರ
ಊರಿ ಹತ್ತಿ ಉಳಿದದ್ದು
ಬರಿ ವಾಸನೆ

ಇಲ್ಲಿ ಕದಳಿ ಎಂದರೆ ಬಾಳೆಗಿಡವಲ್ಲ. ಆಧ್ಯಾತ್ಮದ ಒಂದು ಸಂಕೇತ. ಕದಳಿ ಎಂದರೆ ಇನ್ನೊಂದರ ಅರ್ಥ ತಮವು (ಅಂಧಕಾರ) ಸುಟ್ಟು, ಬೆಳಕಿನ ಕರ್ಪೂರ ಉರಿದು ಬಂತು. (ಇಲ್ಲಿ ಬೆಳಕು) ಅದು ಉರಿದು ಬಂದಾಗ ಹೇಗೆ ಬೂದಿ ಸಿಗುವುದಿಲ್ಲವೋ ಬರಿ ವಾಸನೆ ಮೂಗಿಗೆ ಗೋಚರಿಸುತ್ತದೋ ಹಾಗೆಯೇ ಬೆಳಕು ಬಂತು.

ಶೇಷ ಸಹ ಭಾವ, ಫಲ ಹಳಕು ಹಳಕು
ಇಲ್ಲ ಹುಳುಕು
ಇಲ್ಲ ಕೊಳಕು

ಇದನ್ನು ವ್ಯಾಖ್ಯಾನದಲ್ಲಿ ಸಂಪೂರ್ಣವಾಗಿ ಹಿಡಿಯಲು ಸಾಧ್ಯವಿಲ್ಲ. ಮುಂದಿನ ಸಾಲಿನಲ್ಲಿ

ಇದು ಯಾವ ಗಂಧವೋ ಘ್ರಾನದಲ್ಲಿ?
ಕಂಪುಕಂಪಿಸುತಿಹುದು ಪ್ರಾಣದಲ್ಲಿ

---

೧. ಉದಯರವಿ ತಂಪು ಕೆಂಡ ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೯೯.

ಅಹಂ – ಕೋಹಂ? ಸೋಹಂ! ನಾಹಂ ಎಂಬುದು ನಾನು ಯಾರು 'ಅದು ನಾನು' 'ನಾನು ಅದಲ್ಲ' ಎಂಬ ಆಧ್ಯಾತ್ಮದ ಪರಿಭಾಷೆ ಮಿಳಿತವಾಗಿದೆ.

ಕವಿ ಬಾಳೆಯನ್ನು ಕೊನೆಯ ಸಾಲಿನಲ್ಲಿ ಚಿತ್ರಿಸಿದ್ದಾರೆ. "ಬಾಳೆ ಪಿಂಡ" ಎಂದರೆ ಬಾಳೆಗಿಡ ಪಿಂಡ ಎಂದು ಒಂದರ್ಥವಾದರೆ ಇನ್ನೊಂದರ ಅರ್ಥ 'ಬಾಳು' ಪಿಂಡ ಎಂದು. ಕವಿಗೆ ರವಿ ಉರಿಯುವ ಕೆಂಡದಾಗೆ ಕಾಣದೆ ಮೈಮನಕ್ಕೆ ತಂಪು ಕೊಡುವ "ತಂಪು ಕೆಂಡ"ವಾಗಿ ಕಂಡಿದ್ದಾನೆ. ಹಾಗೆಯೇ ಅವರ ಮತ್ತೊಂದು ಕವನವಾದ 'ನಮೋ ನಮಃ'[೧] ಎಂಬ ಮತ್ತೊಂದು ಆಧ್ಯಾತ್ಮ ಪರಿಭಾಷೆಯಲ್ಲಿ ಸೂರ್ಯನನ್ನು ವರ್ಣಿಸಿದ್ದಾರೆ. 'ನಮೋ ನಮಃ'ವು ಸೂರ್ಯನಿಗೆ

ನಿಸರ್ಗ ಮಾರ್ಗದ ನೇಸರನೇ।
ಗಗನ ಕಮಲದಾ ಕೇಸರನೇ।

ಎಂಬುದು ಸೂರ್ಯನನ್ನು ಎಲ್ಲರಿಗೂ ಅರ್ಥವಾಗುವ ಹಾಗೆ ವರ್ಣಿಸಿದ್ದಾರೆ. ನಿಸರ್ಗ ಮಾರ್ಗದ ನೇಸರ, ಗಗನದಲ್ಲಿ ಕಮಲದ ಹೂವಿನಂತಿರುವವನೆ

ಅಬ್ಜಜಾತನೇ ಅಕ್ಷರನೇ!
ತಸ್ಕರ ಮಾರಕ ಭಾಸ್ಕರನೇ!
ಸ್ಥಿತಿಲಯ ಛಂದೋಕಾರಕನೇ!

ಅಬ್ಜನ ಮಗನೇ ಅ + ಅಕ್ಷರದಂತೆ ಅಂದರೆ ನಾಶವಿಲ್ಲದವನೇ ತಸ್ಕರ (ಕತ್ತಲು) ಮಾರಕನಾಗಿರುವವನೆ ಭಾಸ್ಕರನೇ ನಿನಗೆ 'ನಮೋ ನಮಃ' ಎಂದು ಸ್ತುತಿಗೈಯುತ್ತಿದ್ದಾರೆ.

ಸತ್ ಚಿತ್ ಜಗದೋದ್ಧಾರಕನೇ।
ಬದುಕಿಗೆ ಬಾಳಿನ ಪ್ರೇರಕನೇ।
ಮುದುಕಿಗೆ ಮುತ್ತಿನ ಹಾರಕನೇ।

ಸತ್ ಚಿತ್ ಜಗಕ್ಕೆ ಉದ್ಧಾರಕನಾಗಿ ಇರುವವನೆ ಎಲ್ಲರ ಬಾಳಿನ ಬೆಳಕಿಗೆ ಪ್ರೇರಕನೆ

ಅಂಬಿಕೆ ಬಿಂಬಿಸೆ ತಾರಕನೇ
ವಿಸರ್ಗದಾನಸ್ವಾರಕನೇ!

---

೧. ನಮೋ ನಮಃ, ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೮೫.

ಅಂಬಿಕಾತನಯದತ್ತನನ್ನು ಬಿಂಬಿಸಿದ್ದಾನೆ. ಅನುಸ್ವಾರಕನಂತೆ ದುಂಡಗೆ(೦) ಇರುವವನೆ ನಿನಗೋ ನಮೋ ನಮಃ ಎಂದು ಸ್ತುತಿಪಠನೆ ಮಾಡಿದ್ದಾರೆ ಬೇಂದ್ರೆಯವರು. ಇಲ್ಲಿ ಕವಿಗೆ ನಿಸರ್ಗವೇ ದೇವರ ಸಾಕ್ಷಾತ್ಕಾರ, ನಿಸರ್ಗದ ಜ್ಞಾನವಾಗಿಬಿಟ್ಟರೆ ಜಗತ್ತಿನಲ್ಲಿ ತಿಳಿದುಕೊಳ್ಳಬೇಕಾದ ವಿಷಯವೇ ಇಲ್ಲ. ನಿಸರ್ಗವೇ ಬ್ರಹ್ಮ ಎಂದು ತಿಳಿಸಿದ್ದಾರೆ.

'ಸೂರ್ಯ ಪಾನ'[೧] ಎಂಬ ಕವನದಲ್ಲಿ ಸೂರ್ಯನನ್ನು ಆಸ್ವಾದಿಸಬೇಕು ಎಂದು ಕವಿ ಹೇಳುತ್ತಿದ್ದಾರೆ. ಆರೋಗ್ಯ ದೃಷ್ಟಿಯಿಂದ ಸೂರ್ಯನ ಮುಂಜಾವಿನ ಬೆಳಕು ಜೀವನಿರೋಧಕ ಶಕ್ತಿಯನ್ನು ಪಡೆದಿದೆ. ಪ್ರತಿಯೊಬ್ಬನಿಗೂ ಈ ಅಮೃತ ಕಿರಣದ ಅವಶ್ಯಕತೆ ಇದ್ದೇ ಇದೆ. ವೈದ್ಯಕ್ಷೇತ್ರದಲ್ಲಿ ಮಾತಿದೆ. ಅದನ್ನು ಕವಿ ಇಲ್ಲಿ ಒಂದು ಹೆಜ್ಜೆ ಮುಂದಿ ಹೋಗಿ ಸೂರ್ಯನ ಬೃಹತ್ ಮಹತ್ವವನ್ನು ಸಾರುತ್ತಿದ್ದಾರೆ.

ಏನಿದರ ಔನ್ನತ್ಯ ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವದು
ಬಾನಗಣಿನ ಬಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವುದು

ಸೂರ್ಯನ ನೋಟವು ಔನ್ನತ್ಯದಿಂದ ಔದ್ಧತ್ಯದಿಂದ ಕೂಡಿ ಕಣ್ಣುಗಳನ್ನು ಕುಕ್ಕುತ್ತಿದೆ. ಮುಂಜಾವಿನ ಬೆಳಕು ಬಾಡಿ ಹೋಗುವ ಮುನ್ನ ಕುಡಿಯಬೇಕು. ಈ ಬೆಳಕನ್ನು ಎಷ್ಟು ಕುಡಿದರೂ ಸಾಲದು, ಮತ್ತೆ ಮತ್ತೆ ಬೇಕು ಎಂಬ ತೃಷೆಯೇ ಹೊರತು ಸಾಕು ಎಂಬ ಭಾವನೆ ಆಗುವುದಿಲ್ಲ.

ಗಿರಿನಾರ ಕೋಡಿನಲೊ ಕೈಲಾಸ ಶಿಖರದಲೊ
ವಿಶ್ವದೀಪಕ ದೃಷ್ಟಿ ಮೂಡುವಂತೆ
ದಿಂಬಿನಲಿ ಮೊಗದೋರಿ ಎಸಳನಾಯಾಳಿಸುತ
ಸಿಂಹಾವಲೋಕನದಿ ನೋಡುವಂತೆ

ಗಿರಿಸಾರ ಕೋಡಿನಲೋ ಕೈಲಾಸ ಶಿಖರದಲೋ ವಿಶ್ವದೀಪಕ ದೃಷ್ಟಿ ಎಂಬುದು ಕವಿಯ ಪೂರ್ಣ ದೃಷ್ಟಿಯನ್ನು ನೋಡಬಹುದಾಗಿದೆ.

ಸೂರ್ಯ ಪಾನವ ನೋಡು ಹೇಗೆ ನಿಂತಿಹುದು
ಎನುವಂತೆ ದಿವ್ಯತೆ ದೀಕ್ಷೆ ಇಂತಿಹುದು

---

೧. ಸೂರ್ಯಪಾನ, ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೩೪.

ಮೇರುದಂಡವು ಚಿಗಿತು ಹೂತ ಹಾಗೆ
ಹೃದಯದಾಕೂತಿಗಿದೆ ಕಣ್ಣು ಮೇಗೆ

ಸೂರ್ಯಕಳಸ (ಪಾನಕ್ಕೆ ಇರುವ ಅರ್ಘ ಕಳಸ) ನೋಡು ಹೇಗೆ ನಿಂತಿಹುದು ಎನ್ನುವಂತೆ ಭವ್ಯತೆಯಿಂದ ದಿವ್ಯತೆಯಿಂದ ಕೂಡಿದೆ. ಅದರ ಭವ್ಯ ನೋಟ ನನ್ನ ಕಣ್ಣಿನ ಹೃದಯದಲ್ಲಿ ನರ್ತಿಸುತಿದೆ ಎನ್ನುತ್ತಾರೆ ಕವಿ. ಕವನ ಲೌಕಿಕದ ನೆಲೆಯಿಂದ ಅಲೌಕಿದ ನೆಲೆಗೆ ಏರುವುದು ಇದರ ವೈಶಿಷ್ಟ್ಯ.

ದ.ರಾ.ಬೇಂದ್ರೆಯವರು ಪ್ರಕೃತಿ ಸೌಂದರ್ಯದ ಸೊಬಗನ್ನು "ಹೊತ್ತು"೧ ಕವನದಲ್ಲಿ ರಚಿಸಿದ್ದಾರೆ. ಇವರ ಕವನಗಳಲ್ಲಿ ಪೂರ್ವದಿಕ್ಕಿನಲ್ಲಿರುವ ಬೆಟ್ಟಗಳ ವರ್ಣನೆ ಹೀಗಿದೆ.

ಪೂರ್ವಸಾಗರವನ್ನು ಮುಕ್ಕುಳಿಸಿ ಮೇಲ್ಮೆಯಲಿ
ಮೂಡಣದ ಬೆಟ್ಟಗಳ ಮೆಟ್ಟಿ ಎದ್ದೆ
ಕೈಗೆ ಕೈ ಚಿಗುರಿ, ನೂರ್ನೂರು ಸಾಸಿರವಾಗಿ
ದಿಗ್ದೇಶಗಳನ್ನು ಸೆರೆಗೊಳುತಲಿದ್ದೆ
ಮಧ್ಯಾಹ್ನ ಬಿಸಿಲುನೊಲು ಭಾಗ್ಯವಿಳಿಯುತಲಿರಲು
ಪಡುವಲದ ಘಟ್ಟಗಳನ್ನೇರಿ ಬರುವೆ
ಕಡಿದುಡಿದು ಬಸಿವ ಕೈ ಕೆನ್ನೀರ ಕಲೆ ಕೊಳೆಯೆ
ಕೊಂಕಣದ ಕಡಲಿನಲಿ ಧುಮುಕಲಿರುವೆ'

ಈ ಕವಿತೆಯಲ್ಲಿ ನೇಸರನು ಪೂರ್ವದಿಕ್ಕಿನಲ್ಲಿ ಉದಯಿಸಿ ಬೆಟ್ಟಗಳ ಮಧ್ಯೆ ಸೀಳಿಕೊಂಡು ಬರುತ್ತಿರುವಾಗ ಜನರು, ಪ್ರಾಣಿ ಪಕ್ಷಿಗಳು ದಿಕ್ಕುದಿಕ್ಕುಗಳಲ್ಲಿಯೂ ಚಟುವಟಿಕೆಯಿಂದ ಕೂಡಿರುತ್ತಾರೆ. ಮಧ್ಯಾಹ್ನದ ವೇಳೆಗೆ ನೆತ್ತಿಯ ಮೇಲೇರುತ್ತಾನೆ. ರೈತರು ದುಡಿದು ಬರುವಾಗ ಕೈಯಲ್ಲಿ ಮೆತ್ತಿರುವ ಮಣ್ಣನ್ನು ತೊಳೆಯುವುದನ್ನು ನೋಡಿಕೊಂಡು ಕೊಂಕಣ ತೀರದ ಪಡುವಣ ದಿಕ್ಕಿನಲ್ಲಿ ಮುಳುಗುತ್ತದೆ ಎಂದು ನೇಸರನ್ನು ವರ್ಣಿಸಿರುವ ಈ ಕವನವು ತುಂಬಾ ಸೊಗಸಾಗಿದೆ.

ಕಾಲನಿಗು ಕಾಲುಂಟು ನಿಂತಲ್ಲೆ ನಿಲ್ಲನವ:
ಅವನ ತೇರಿನ ಗಾಲಿ ತಿರುಗಲಹುದು
ಸುಖವುಂಟು, ದುಃಖವಿದೆ, ಅದನು ತೂಗುತ್ತಿರಲು

---

೧. ಹೊತ್ತು = ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೦೩.

ತಕ್ಕಡಿಯ ತೊಲೆಯು ತಲೆದೂಗಬಹುದು!
ಮೂಡು ಮುಳುಗಿನ ಮುಸುಕಿನಲ್ಲಿಯಂತೆ
ನಟಿಸುತಿಹೆ ನಾಟಕದ ಅಮರರಂತೆ

ಸಮಯಕ್ಕೂ ಕೂಡ ತೇರಿನ ಗಾಲಿಗೆ ಇರುವ ಚಕ್ರದಂತೆ ಹೊತ್ತಿಗೂ ಕೂಡ ಕಾಲುಂಟು. ಸುಖವಿರಲಿ ದುಃಖವಿರಲಿ, ಹಗಲಿರುಳು ಎನ್ನದೆ ದುಡಿಯುವೆ, ನಾನು ಅಂದರೆ ಹೊತ್ತು, ತಕ್ಕಡಿಗೆ ಕಟ್ಟಿರುವ ತೊಲೆಯು ತೂಗಾಡಬಹುದು. ಆದರೆ ಎಲ್ಲಾ ವೇಳೆಯಲ್ಲಿಯೂ ಹೊತ್ತು ನಮಗೆ ಅಮರವಾಗಿದೆ. ಚಿರಪರಿಚಿತವೂ ಆಗಿದೆ. ಇಂದಿನ ಬದುಕಿನಲ್ಲಿಹೊತ್ತು ಬಹುಮುಖ್ಯವಾಗಿದೆ.

ದ.ರಾ.ಬೇಂದ್ರೆಯವರು ಈ ಕವನದಲ್ಲಿ ಸೂರ್ಯೋದಯ ಮತ್ತು ಸೂರ್ಯಾಸ್ತದ ವರ್ಣನೆಯನ್ನು ತುಂಬಾ ಮನೋಹರವಾಗಿ ಬಣ್ಣಿಸಿದ್ದಾರೆ.

'ಮಾತು ಮೌನ'[೧] ಅರುಣೋದಯ ಗೀತೆಯ ಮತ್ತೊಂದು ಕವನವಾಗಿದೆ.

'ದಿನದ ಕವಿಯ ಪ್ರಭೆ ಚುಕ್ಕೆ ಚೂರಾಗಿ ದಿಕ್ಕು ದಿಕ್ಕಿನಲ್ಲಿ
ಸಿಕ್ಕಿಕೊಂಡಿತೋ ಕತ್ತಲಲ್ಲಿ ಇಕೊ ನಿಶೆಯು ನಕ್ಕಿತಿಲ್ಲಿ'

ಸೂರ್ಯ ಮೂಡಿದಾಗ ಅವನ ಕಿರಣವು ಚೂರುಚೂರಾಗಿ ದಿಕ್ಕು ದಿಕ್ಕಿಗೆಲ್ಲಾ ಪಸರಿಸಿ ನಿಶೆಯನ್ನು ನಕ್ಕಿತಂತೆ ಈ ಕಿರಣಗಳು ಉಲ್ಕೆಗಳಂತೆ ಬಿದ್ದಾಗ ಕತ್ತಲರಾಜ ಚಂದಿರನು ಮರೆಯಲ್ಲಿ ಅವಿತು ಸೂರ್ಯನ ಪ್ರಭೆಯನ್ನು ಇಣಕಿ ನೋಡುತ್ತಿದ್ದನಂತೆ.

ಎಲ್ಲಾ ಜೀವಕೋಟಿಗಳಿಗೂ ಜೀವ ದ್ರವ್ಯ ಸೂರ್ಯ ಇವ ಬಂದ ಕೂಡಲೆ ಸಸ್ಯ ಸಂಕುಲಗಳು ಭೂವಿಯ ತುಂಬೆಲ್ಲ ಕುಸುಮ ಹಾಸಿಗೆಯನ್ನು ಹಾಸಿ, ಬೇಲಿ ಬೇಲಿಯಲ್ಲಿಯೂ ಹಕ್ಕುಗಳ ಸುಪ್ರಭಾತವು ಕೇಳಿ ಬರುತ್ತದೆ.

ಮೌನವು ಮೌನದಲ್ಲಿ ಹೆಪ್ಪುಗೊಂಡಿರಲು ಈ ಅವರ್ಣನೀಯವಾದ ನೋಟವನ್ನು ಮೌನದಿಂದ ಸವಿಯಬೇಕೆ ಹೊರತು ಬಣ್ಣಿಸಲು ನಿಲುಕುವುದಿಲ್ಲ ಎಂದು ಆ ನೋಟವನ್ನು ಬೇಂದ್ರೆ ನೋಡಿ ಅದರಲ್ಲಿ ಒಂದಾಗುತ್ತಾರೆ.

'ಉಷಾಸೂಕ್ತ'[೨] ಎಂಬ ಕವನದಲ್ಲಿ ಉಷೆಯ ರಾಯಭಾರವನ್ನು ಕವಿ ಸಶಕ್ತವಾಗಿ ಚಿತ್ರಿಸಿದ್ದಾರೆ. ಉಷೆಯು ಭೂಮಿಗೆ ಬರುವಾಗಲೇ ಕತ್ತಲೆಯೊಡೆನೆ ಜಗಳವಾಡಿ ಅದನ್ನ ಹೊಸೆದು ತಿಕ್ಕಿಬರುತ್ತದೆ.

---

೧. ಮಾತು ಮೌನ, ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೪೩೧.

೨. ಉಷಾಸೂಕ್ತ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೯೧.

ಕತ್ತಲನ್ನು ಹೊಸೆದು ತಿಕ್ಕಿ
ಹಡೆದಿತೇನೋ ಬೆಳ್ಳಿ ಚುಕ್ಕಿ
ಅಹಾ! ಏನು ನಗೆಯ ನಕ್ಕಿ
ಮರೆಯ ಹರಿದು ಬಾರೆ
ತೆರೆಯ ತೆರೆದು ಬಾರೆ
ಬಿಸಿಯೆ ಸಾಕು ಏಕೆ ಬಿಸಿಲು
ತಮಪಿನಲ್ಲೆ ತಣಿಯೆ ಸುಸಿಲು
ಜಡಜಗವೂ ಅಡಿ ಉಸಿಲು

ಈ ನುಡಿ ಪದ ಪೊಂಥಾವಣಿಯೇ ಕವನವನ್ನು ಆಕರ್ಷಕವಾಗಿಸುತ್ತದೆ. ಸರಳವಾದ ಮಾತುಗಾರಿಕೆ ತಂಪಾದ ಸುಸಿಲನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುತ್ತದೆ. ಜಡವಾದ ಜಗವು ಬಿಸಿಯ ಸೊಂಕಿನಿಂದ ಚೈತನ್ಯಗೊಳ್ಳುತ್ತವೆ. ಬೆಳಕಿನ ಕುಣಿತ ಕೇಳಿಯೇ ನಡೆಯುತ್ತದೆ.

ನಿನ್ನ ಬೆಳಕ ಕುಣಿತ ಕೇಳಿ
ಎದ್ದಿತು ಮಲಗಿದ್ದ ಗಾಳಿ
ಗಿಡ ಬಳ್ಳಿಗೆ 'ಏಳಿ ಏಳಿ'

ಅದುವರೆವಿಗೂ ಮಲಗಿದ್ದ ಗಾಳಿಯು ಎಚ್ಚರಗೊಂಡು ಗಿಡ ಬಳ್ಳಿಗಳನ್ನು "ಏಳಿ ಏಳಿ ಬೆಳಗಾಯಿತು" ಎಂದು ಹೇಳುವಂತೆ ತೋರುತ್ತದೆ. ಸೃಷ್ಟಿಯ ಚಲನವಲನವನ್ನು ಬೇಂದ್ರೆ ಇಲ್ಲಿ ಸೊಗಸಾಗಿ ಗುರುತಿಸಿದ್ದಾರೆ.

ಎಲೆ 'ನೂತನ'[೧] ಎಂದರೆ ಹೊಸ ಎಂಬ ಅರ್ಥವು ಇದೆ. ಕವಿಯೇ "ಚೈತ್ರದ ರವಿಯ ದಿಗ್ವಿಜಯಕೆ ನಿಂತನು" ಎಂದಿರುವುದರಿಂದ ಚೈತ್ರಮಾಸದ ಸೂರ್ಯೋದಯ-ವನ್ನು ಕುರಿತು ಹೇಳುತ್ತಿದ್ದಾರೆ ಎಂದು ಖಚಿತವಾಗಿ ಗೊತ್ತಾಗುತ್ತದೆ.

ಚೈತ್ರ ಪ್ರಾರಂಭ ನಿಸರ್ಗದಲ್ಲಿ ಹೊಸ ಚೈತನ್ಯೋತ್ಕರ್ಷದ ಕಾಲ. ಸೂರ್ಯನ ಕೃಪೆಯಿಂದ ನೆಲದ ಸೃಜನಶೀಲತೆ ಹಾಗೂ ಸಮೃದ್ಧವಾದ ಬಣ್ಣ ಬೆಡಗುಗಳು ಪ್ರಕಟವಾಗುವ ಕಾಲ. ಇಂಥ ಕಾಲದ ಸೂರ್ಯನನ್ನು ಕಂಡು ಬೆರಗಾಗದ ಕವಿಯಿಲ್ಲ. ಮರುಳಾಗದ ಕಲೆಗಾರನಿಲ್ಲ. ಸಂತೋಷ ಪಡೆದ ಹೃದಯವಿಲ್ಲ.

---

೧. ಎಲೆನೂತನ– ಔದುಂಬರ ಗಾಥೆ, ಸಂಪುಟ. ೧, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೮೫.

"ಎಲೆ ನೂತನ ಹೊಸ ಹೊಸತನ ನೀ ಚಿತ್ತ ಚೇತನಾ" ಎಂಬ ಸಂಬೋಧನೆಯಲ್ಲಿಯೇ ಆತ್ಮೀಯತೆಯ ಸ್ಪರ್ಶವಿದೆ. ಎಲೆ ಎಂಬುದರಿಂದ ನಾನಾರ್ಥ ಸ್ಫುರಿಸುತ್ತದೆ. ಒಂದು ಎಲೆ (Leaf) ಎಂದು, ಇನ್ನೊಂದು ಸಂಬೋಧನೆಯ ಅರ್ಥ ಎರಡು ಅರ್ಥಗಳು ಇಲ್ಲಿ ತುಂಬಿದೆ.

ಎಲೆ ಚೈತ್ರಮಾಸದ ಸೂರ್ಯನೇ ನೀನು ನೂತನವಾಗಿ ಇರುವೆ. ಹೊಸ ಹೊಸ ತನವನ್ನು ತೋರುವೆ. ನೀನು ನಿಜಕ್ಕೂ ಚೇತನಾ ಎನ್ನುತ್ತಾರೆ. ಸೂರ್ಯನ ಉದಯದಲ್ಲಿ ನೂತನತೆಯನ್ನು ಚೈತನ್ಯವನ್ನು ಕಾಣುವ ಕವಿಯ ದೃಷ್ಟಿ ತುಂಬಾ ಸಹಜವಾಗಿದೆ.

'ಬೆಳಕನೆರೆದು ತಮದ ಹರಿದು, ತೊರೆಯೋ ಅವಗುಂಠನಾ
ರವಿಸಮಾನ ಅನುಪಮಾನ ಎಲೆ ನವೀನ ನೂತನಾ'

ಬೆಳಕನೆರೆದು ತಮವ ಕಳೆದು ಕತ್ತಲೆ ಅವಗುಂಠನ ತೆರೆಯ ಮುರಿದು ಚೈತನ್ಯೋತ್ಕರ್ಷವನ್ನು ಉಂಟುಮಾಡುವ ರವಿಸಮಾನ ರವಿಯ ಸಮ ಯಾರೂ ಇಲ್ಲ ಅವನು ಉಪಮಾತೀತ.

ಬೇಸಿಗೆಯನು ಹಾಸಿ ಬರಲಿ, ಚಿರಯುವಕ ವಸಂತನು
ಕುಸುಮವು ಪುಂಖಾನುಪುಂಖ
ಪುಲಕದಲ್ಲಿ ಧ್ವನಿತ ಶಂಖ
ಕವಿಯಲ್ಲಿಯೇ ಚೈತ್ರ ರವಿಯು, ದಿಗ್ವಿಜಯಕೆ ನಿಂತನು

ಋತುವನ್ನು ಪರಿವರ್ತಿಸಿ ಚೈತ್ರಮಾಸದ ಚೈತ್ರನ್ಯೋತ್ಕರ್ಷವನ್ನು ಉಂಟುಮಾಡಿ ಹಾಡು, ಕುಣಿತ ಉತ್ಸಾಹ ಉಗ್ಗಡಿಸುತ್ತ ವಸಂತದ ಚೆಲುವನ್ನು ನೇಯ್ದು ಎಲ್ಲೆಲ್ಲೂ ಎಲ್ಲರಲ್ಲೂ ಹರೆಯವನ್ನು ಉಕ್ಕಿಸಿ ಹೊಸತನವನ್ನು ಉತ್ಕರ್ಷಿಸಿ ದಿಗ್ವಿಜಯ ಕೈಗೊಂಡಿರುವ ಚೈತ್ರರವಿಯೇ ನೂತನ ಎಂದು ಕಾಣುವ ಕವಿ ಪ್ರತಿಭೆ ವಿಶಿಷ್ಟವಾಗಿದೆ.

ಹೀಗೆ ಸೂರ್ಯೋದಯ ಕವನಗಳ ಬೇಂದ್ರೆಯವರನ್ನು ಅಮರ ಭಾವಗೀತಕಾರರನ್ನಾಗಿಸಿದೆ. ಅವರ ಗೀತೆ ಭಾವತೀವ್ರವಾಗಿ, ಗಾನ ಪ್ರದಾನವಾಗಿ, ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನು ಪಡೆದಿದೆ. ಅವರ ಅನೇಕ ಸೂರ್ಯೋದಯ ಕವನಗಳು, ಅವರ ಗೀತೆಗಳಿಗೆ ಜನಪದ ಗೇಯತೆ ಇರುವುದರಿಂದ ಅವರ ಗೀತೆಗಳು ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವುದು ಅವರ ಜನಪ್ರಿಯತೆಯ ಕುರುಹಾಗಿದೆ.

ಹಾಗೆಯೇ ಏಳಣ್ಣ, ಓಡು, ಸೂರ್ಯನ ಹೊಳಿ, ಚಿಗುರು ಬೆಳಕು ಇನ್ನೂ ಮುಂತಾದ ಹಲವಾರು ಸೂರ್ಯೋದಯದ ಗೀತೆಗಳನ್ನು ದ.ರಾ.ಬೇಂದ್ರೆಯವರು ರಚಿಸಿದ್ದಾರೆ.

(೨) ಶ್ರಾವಣ ಮಾಸದ ಗೀತೆಗಳು

ಶ್ರಾವಣಮಾಸ ಚಂದ್ರಮಾನದ ಐದನೇ ತಿಂಗಳಿನಲ್ಲಿ ಬರುವ ಹೊಸ ಭರವಸೆಯ ಮೂಡಿಸುವ ಮಾಸ. ಪಮಚಮಿ, ಷಷ್ಠಿ ಅಮ್ಯಾವಾಸೆ ಹುಣ್ಣಿಮೆ ಎಂದು ಎಲ್ಲಾ ಮನೆಗಳಲ್ಲೂ ಪೂಜೆ ಮತ್ತು ಔತಣಕೂಟವನ್ನು ಏರ್ಪಡಿಸುವ ಮಾಸವಾಗಿದೆ. ಶ್ರಾವಣ ಬಂತು ನಾಡಿಗೆ, ಬಂತು ಬೀದಿಗೆ ಎಂದು ಪ್ರಕೃತಿಮಾತೆ ನಲಿವಿನ ಸಂಭ್ರಮದ ಸಿರಿಯನ್ನೂ ಹೊತ್ತು ಬಡವ ಶ್ರೀಮಂತನೆಂಬ ಭೇದವಿಲ್ಲದೆ ಮನೆಮನೆಗೆ ಬಂದು ಕದವ ತಟ್ಟಿ ಸಂತೋಷವನ್ನು ನೀಡುವ ಸುಂದರ ಸಮಯ. ಇದು ಶ್ರಾವಣಮಯ, ಆನಂದಮಯವೂ ಹೌದು.

ವರ್ಷ ಋತುವಿನೊಡನೆ ಶ್ರಾವಣಮಾಸ ಧರೆಗೆ ಕಾಲಿಟ್ಟಿತೆಂದರೆ ಆಷಾಡದ ಜಡತೆ ಪಲಾಯನಗೈಯ್ಯುತ್ತದೆ. ಬೋರೆಂದು ಸುರಿಯುವ ಮಳೆ ಹಸಿರುವ ಸೀರೆಯನ್ನುಟ್ಟು ಬಣ್ಣದ ಹೂಗಳ ತೊಟ್ಟ ಪ್ರಕೃತಿ ದೇವಿಯ ವೈಭವ ಈ ಮಾಸಕ್ಕೆ ವಿಶಿಷ್ಟವಾದ ಕಳೆ ತಂದಿದೆ. ಕಾಡಿನ ಹಲವು ಬಗೆಬಗೆಯ ಪುಷ್ಪಗಳು ಪೇಟೆಗೆ ಆಗಮಿಸುತ್ತದೆ. ಮನೆಗಳೂ ದಿನಕ್ಕೊಂದು ಹಬ್ಬದ ಸಂಭ್ರಮ ಇವೆಲ್ಲವೂ ಶ್ರಾವಣಮಾಸದ ವೈಶಿಷ್ಟ್ಯಗಳು. ಈ ಶ್ರಾವಣಮಾಸ ಪ್ರತಿಯೊಂದು ಜೀವಿಯಲ್ಲಿಯೂ ನವ ಚೈತನ್ಯವನ್ನು ಮೂಡಿಸುವ ಕಾಲವಾಗಿದೆ. ವರಕವಿ ಬೇಂದ್ರೆಯವರುಸಹ ತಮ್ಮ ಬದುಕಿನ ಉದ್ದಕ್ಕೂ ಪ್ರಕೃತಿಯನ್ನು ಆರಾಧಿಸುತ್ತಾ ಬಂದಿದ್ದಾರೆ. ಅವರಿಗೆ ಪ್ರಕೃತಿಯೊಡನೆ ನಿರಂತರ ಒಡನಾಟವಿದ್ದರಿಂದ ಪ್ರಕೃತಿಯನ್ನು ಅವರ ಕಾವ್ಯ ಭಂಡಾರದಲ್ಲಿ ಒಡಮೂಡಿಸಿದ್ದಾರೆ. ಶ್ರಾವಣದ ವರ್ಣನೆಯಲ್ಲಂತೂ ಕವಿಯ ಚೈತನ್ಯದ ಪೂಜೆ ಅದ್ಭುತವಾಗಿ ಮೂಡಿಬಂದಿದೆ.

ಡಾ. ಎನ್.ಜಗದೀಶ್ ಕೊಪ್ಪರವರು ಶ್ರಾವನಮಾಸದ ಬಗ್ಗೆ ಹೀಗೆ ಹೇಳಿದ್ದಾರೆ. "ಬೇಂದ್ರೆಯವರ ಪಾಲಿಗೆ ಮನುಷ್ಯನ ಎಲ್ಲಾ ಮಾಯದ ಗಾಯಗಳಿಗೆ ಶ್ರಾವಣ ನೋವು ಶಮನ ಮಾಡುವ ಮುಲಾಮು ಇದ್ದಹಾಗೆ. ಅವರ ಪಾಲಿಗೆ ಮನುಷ್ಯನನ್ನು ನೋಯಿಸುವ, ಹಿಂಸಿಸುವ ಎಲ್ಲಾ ಸಂಗತಿಗಳು ಕಾಣೆಯಾಗುತ್ತವೆ"[೧] ಎಂದು ಹೇಳಿದ್ದಾರೆ.

'ಶ್ರಾವಣಾ ಬಂತು ಕಾಡಿಗೆ'[೨] ಎಂಬ ಕವನದಲ್ಲಿ ಹೀಗೆ ಹೇಳಿದ್ದಾರೆ.

ಶ್ರಾವಣ ಬಂತು ಕಾಡಿಗೆ। ಬಂತು ನಾಡಿಗೆ।
ಬಂತು ಬೀದಿಗೆ। ಶ್ರಾವಣ ಬಂತು॥

---

೧. ಡಾ. ಎನ್. ಜಗದೀಶಕೊಪ್ಪ, ಉತ್ತರ ದಕ್ಷಿಣ, ಪು. ೯೫.
೨. ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೬೫.

ಕಡಲಿಗೆ ಬಂತು ಶ್ರಾವಣಾ। ಕುಣಿದ್ಹಾಂಗ ರಾವಣ।
ಕುಣಿದಾವ ಗಾಳಿ। ಭೈರವನ ರೂಪತಾಳಿ॥

ಎಂದು ಹರುಷದಿಂದ ಹಾಡಿದ್ದಾರೆ. ಕವನದ ಪ್ರಥಮದಲ್ಲಿ ಶ್ರಾವಣ ಕಾಡಿಗೆ ಬಂದ ಹಾಗೂ ನಾಡಿಗೆ ಬಂದ ಚಿತ್ರಣವನ್ನು ನೀಡಿದ್ದಾರೆ. ರಾವಣನು ರುದ್ರ ನರ್ತನ ಮಾಡಿದಾ ಹಾಗೆ ಕಡಳಿಗೆ ಬಂತು ಶ್ರಾವಣ, ಹಾಗೆಯೇ ಶ್ರಾವಣನ ಜೊತೆಗೆ ಬರುವ ಗಾಳಿಯನ್ನು ಭೈರವನ ನಾಟ್ಯಕ್ಕೆ ಹೋಲಿಸಿದ್ದಾರೆ.

ಶ್ರಾವಣಾ ಬಂತು ಘಟ್ಟಕ್ಕೆ। ರಾಜ್ಯಪಟ್ಟಕ್ಕೆ।
ಬಾನಮಟ್ಟಕ।
ಏರ್ಯಾವ ಮುಗಿಲು। ರವಿ ಕಾಣೆ ಹಾಡೆ ಹಗಲು

ಶ್ರಾವಣ ಬೆಟ್ಟಗುಡ್ಡಕ್ಕೆ ಬಂತು ಎಂದು ಹೇಳಿದ ನಂತರ ರಾಜ್ಯಕ್ಕೆ ಶ್ರಾವಣ ಬರುವ ಸೂಚನೆಯ ಮೂಲಕ ಎಲ್ಲರ ಕ್ಷೇಮವನ್ನು ಸಮಾನತೆಯನ್ನು ಆಶಿಸುತ್ತಾರೆ.

ಶ್ರಾವಣಾ ಬಂತು ಹೋಳಿಗಳಿಗೆ। ಅದೇ ಶುಭಗಳಿಗೆ।
ಹೋಳಿಗೆ ಮತ್ತ ಮಳಿಗೆ।
ಆಗ್ಯೇದ ಲಗ್ನ। ಅದರಾಗ ಭೂಮಿ ಮಗ್ನ।

ಹೊಳೆಗಳಿಗೆ ಶ್ರಾವಣ ಬಂತು ಅದೇ ಶುಭ ಸಮಯದಲ್ಲಿ ಹೊಳೆ-ಮಳೆಗಳಿಗೆ ವಿವಾಹ ನಡೆದಿದೆ. ಆ ಸಂತೋಷದಲ್ಲಿ ಭೂಮಿ ತಲೀನವಾಗಿದೆ ಎಂದು ಬಣ್ಣಿಸಿದ್ದಾರೆ.

ಶ್ರಾವಣ ಬಂತು ಮನಿಮನಿಗೆ। ಕೂಡಿ ದನಿದನಿಗೆ
ಮನದ ನನಿಕೊನಿಗೆ
ಒಡೆದಾವ ಹಾಡೂ। ರಸ ಉಕ್ಕತಾವ ನೋಡು
ಶ್ರಾವಣ ಬಂತು

ಶ್ರಾವಣಮಾಸದಲ್ಲಿ ಎಲ್ಲಾರ ಮನೆಮನೆಗೂ ಎಲ್ಲಾರ ಮನಸ್ಸಿಗೂ ನವಚೇತನ ಹುಕ್ಕಿ ಹರಿದು ಹಾಡುಗಳು ಹೊರ ಹೊಮ್ಮುತಾವೆ ಎನ್ನುತ್ತಾರೆ.

ಗುಡ್ಡ ಗುಡ್ಡ ಸ್ಥಾವರಲಿಂಗ।
ಅವಕ ಅಭ್ಯಂಗ।
ಏರಿತಾವನ್ನೊ ಹಾಂಗ।
ಕೂಡ್ಯಾವ ಮೋಡ। ಸುತ್ತೆಲ್ಲ ನೋಡ ನೋಡ।

ಚಿಕ್ಕ ಚಿಕ್ಕ ಬೆಟ್ಟ ಸ್ಥಾವರ ಲಿಂಗಕ್ಕೆ ಮಜ್ಜನ ಮಾಡಿಸಲು ಆಕಾಶದಲ್ಲಿ ಕೂಡ್ಯಾವೆ ಮೋಡಗಳು ಸುತ್ತಮುತ್ತಲೂ ನೋಡು ಎಂದು ಕವಿ ಬಣ್ಣಿಸಿದ್ದಾರೆ. ಹೀಗೆ ಒಂದು ಶ್ರಾವಣಮಾಸವು ಭೂಮಿ, ಆಕಾಶ, ಮನೆಮನೆ, ಮನಸ್ಸು ಇವುಗಳ ಮೇಲೆ ಪರಿಸರ ಮಾಡುವ ಮಾಂತ್ರಿಕ ಪರಿಣಾಮದ ಚಿತ್ರಣ ಇಲ್ಲಿದೆ.

'ಬಂದಿಕಾರಾ ಶ್ರಾವಣಾ'[೧] ಸಂಕಷ್ಟದಲ್ಲಿ ಸಿಲುಕಿದವರನ್ನು ಕಷ್ಟದಿಂದ ಬಿಡುಗಡೆಗೊಳಿಸಲು ಮತ್ತೆ ಮತ್ತೆ ಬರುವುದೇ ಶ್ರಾವಣ. ಅಂದರೆ ಭಗವಂತನ ಜನ್ಮವು ಈ ಶ್ರಾವಣದಲ್ಲೆ ಆಯಿತು. ಇದು ಸಂಕಷ್ಟವನ್ನು ಪರಿಹರಿಸುವ ಕಾಲ ಎಂದು

ಬಂದಿಯೊಳಗಿದ್ದವರ ಬಂಧನವ ಬಿಡಿಸುವಾ
ಬಂದಿಕಾರಾ ಶ್ರಾವಣಾ
ಬಂಧನದೊಳಿಹರೊ ಜಗವಂದಿತರ ನಿಂದಿತರು
ಬಂದೆ ಬಿಡಿಸೈ ಶ್ರಾವಣಾ
ಅಂದಕಾರವಿದಲ್ಲ ಮಂದೇಹ ಸಂಘವಿದೆ
ಸಂದೇಹವೇ ಶ್ರಾವಣಾ
ಅಂದು ಗಾಯಿತ್ರಿ ಮನದಂದು ಕಿವಿದುಂಬಿಸಿದೆ
ಇಂದಾವುದೋ ಶ್ರಾವಣಾ?

ಬಂಧನದಲ್ಲಿ ಸಿಲುಕಿಕೊಮಡವರ ಬಿಡುಗಡೆಗೊಳಿಸಲು ಬಂದಂತಹ ದೇವರೆ ಶ್ರಾವಣಾ ಈ ಜಗತ್ತಿನಲ್ಲಿ ಬಂಧನದಲ್ಲಿ ಇರುವವರು ಲೆಕ್ಕವಿಲ್ಲದಷ್ಟು ಇದ್ದಾರೆ. ಅವರನ್ನು ನೀಬಂದು ಬಿಡಿಸು ಈ ಮಾಸ ಅಂಧಕಾರದ ಮಾಸವಲ್ಲ. ಬೆಳದಿಂಗಳು ತುಂಬಿ ಅಂಧಕಾರವನ್ನು ಅಳಿಸಿ ಹೊಸ ಚೈತನ್ಯವನ್ನು ತರುವಂತ ಕಾಲವೇ ಶ್ರಾವಣಾ ಎಂದು ಕವಿ ಹೇಳಿ ಅಂದು ಗಾಯಿತ್ರಿ ಮನದಂದು ಕಿವಿದುಂಬಿಸಿದೆ. ಇಂದು ಯಾವುದೋ ಶ್ರಾವಣ ಎಂದು ಕವಿ ಶ್ರಾವಣಮಾಸವನ್ನು ಪ್ರಶ್ನಿಸಿದ್ದಾರೆ.

ಬಂಧಮುಕ್ತಿಯ ದಿನವೇ ಬಂದೆಯಾ ಬಾ ಬಳಿಗೆ ಎಂದು ಕರೆಯೋ ಶ್ರಾವಣ. ಶ್ರೀ ಕೃಷ್ಣ ದುಷ್ಟ ರಾಕ್ಷಸ ಕಂಸನನ್ನು ಕೊಂದು ತಂದೆತಾಯಿಯನ್ನು ಬಂಧನದಿಂದ ಬಿಡುಗಡೆಗೊಳಿಸಿದ್ದೂ ಶ್ರಾವಣಮಾಸದಲ್ಲಿ ಹಾಗೆಯೇ ಕತ್ತಲೆಯು ಕಡಿಮೆಯಾಗಿ ಹಗಲು ಜಾಸ್ತಿ ಇರುವ ಕಾಲವಿದು ಅಂದರೆ ಅಂಧಕಾರವನ್ನು ಹೊಡೆದೊಡಿಸುವ ಕಾಲವಿದು. ಹಾಗೆಯೇ ಸ್ವಾತಂತ್ರ್ಯ ಸಹ ಈ ಶ್ರಾವಣ ಮಾಸದಲ್ಲಿಯೇ ಭಾರತೀಯರು

---

೧. ಬಂದಿಕಾರಾ ಶ್ರಾವಣಾ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೬೮.

ಪಡೆದುಕೊಂಡದ್ದು. ಆದ್ದರಿಂದ ಈ ಶ್ರಾವಣಮಾಸ ಯಾರು ಶೋಷಣೆಗೆ ಒಳಗಾಗಿರುತ್ತಾರೋ ಯಾರು ಕಷ್ಟದಲ್ಲಿ ಇರುತ್ತಾರೋ ಅವರನ್ನು ಬಿಡುಗಡೆಗೊಳಿಸಿ ಸ್ವತಂತ್ರರಾಗಿ ಮಾಡುವ ಕಾಲವೆಂದು ಬಣ್ಣಿಸಿದ್ದಾರೆ.

ಬೇಂದ್ರೆಯವರು 'ಶ್ರಾವಣದ ಹಗಲು ಕವಿತೆ'ಯಲ್ಲಿ[೧] ತಮ್ಮ ಜೀವನಕ್ಕೂ ಶ್ರಾವಣಮಾಸಕ್ಕೂ ಇರುವ ನೆಂಟನ್ನು ಈ ರೀತಿಯಲ್ಲಿ ಸೂಚಿಸಿದ್ದಾರೆ. ನೆಲ ಹಸಿರು, ಹೊಲ ಹಸಿರು, ಗಿಡಗಂಟಿ ಹಸಿರು ಫಲ ಏನೂ? ಎಂಬ ನಿರಾಸೆಯೊಂದಿಗೆ ಪ್ರಾರಂಭವಾಗುವ ಕವಿತೆ ಅವರ ಜೀವನದ ಕಹಿ ಘಟನೆಗಳನ್ನು ನೆನೆಪಿಸುವ ಹಾಗೆ

ನೆನೆ ನೆನೆಸಿ ಅತ್ತೆಂತೆ ಆಗಾಗ ಮಳೆಯು,
ಅನಿತರೊಳು ನಡು ನಡುವೆ ಹೊಂಬಿಸಿಲ ಕಳೆಯು

ಮತ್ತೆ ಮತ್ತೆ ಮಳೆ ಬರುವ ಹಾಗೆ ಕವಿಯ ಜೀವನದಲ್ಲಿ ದುಃಖವು ಮರುಕಳಿಸುತ್ತಿರಲು ನಡುವೆ ಸಂತೋಷ ಹೊಂಬಿಸಿಲಿನ ರೀತಿ ಬರುತ್ತಿದೆ.

ಗಾಳಿ ಗೋಳಿಡುವಂತೆ ಬೋರಾಡುತಿಹುದು
ಬಾಳುವೆಯೆ ಹೊಸದೊಂದು ಒಗಟಾಗಿಹುದು
ನೆಲೆಯರಿಯದೇ, ತೂಗು ಜೋಕಾಲಿಯಾಗಿ
ತಲೆ ತಿರುಗಿಸುವುದೊಮ್ಮೆ ಕೆಳಗೆ ಮೇಲಾಗಿ

ಈ ರೀತಿ ಎನ್ನುತ್ತಾ ಸುಖದುಃಖಗಳನ್ನು ತುಲನೆ ಮಾಡುತ್ತಾರೆ. ಕೊನೆಯಲ್ಲಿ

ನನ್ನ ಬಾಳುವೆಯಂತಹುದು ಶ್ರಾವಣದ ಹಗಲು
ತನ್ನ ಹೊಯ್ದಾಟದಲಿ ಅದಕ್ಕಿಂತ ಮಿಗಿಲು

ನನ್ನ ಜೀವನ ಶ್ರಾವಣದ ಹಗಲಿನಂತೆ ಯಾವುದೂ ನಿರಂತರವಾಗಿ ಕಷ್ಟವೇ ಆಗಲೀ ಸುಖವೇ ಆಗಲಿ ನೆಲೆ ನಿಲ್ಲದೆ ಶ್ರಾವಣದ ಹಗಲಿನ ಹಾಗೆ ನನ್ನ ಜೀವನ ಸಾಗಿದೆ ಎಂದು ಬಣ್ಣಿಸಿದ್ದಾರೆ.

ಶ್ರಾವಣಮಾಸ ಎಲ್ಲಾ ಅನಿಷ್ಟಗಳನೂ ದೂಡುವ ಮಾಸವಾಗಿದ್ದು ಈ ಮಾಸದಲ್ಲಿನ 'ಮಳೆಗಾಲ'[೨] ಮಳೆಯು ಸಮೃದ್ಧಿಯ ಸಂಕೇತವಾಗಿ ಬಿಂಬಿತವಾಗಿದೆ.

---

೧. ಶ್ರಾವಣದ ಹಗಲು – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೪೮.

೨. ಮಳೆಗಾಲ – ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೬೫.

ಅಡಗಿದೆ ದೃಷ್ಟಿ
ಆದರು ಸುರಿಯುತ್ತಿದೆ ವೃಷ್ಟಿ!
ಮೋಡದ ಮೇಲ್ಮೋಡ
ತಿಳಿಯದು ಏನಿದೆಯೋ ಗೂಢ!

ಮೋಡಗಟ್ಟಿದ ವಾತಾವರಣದಿಂದ ನಿರಂತರವಾಗಿ ಸುರಿಯುತ್ತಿರುವ ಮಳೆ, ಸೂರ್ಯ ಇದ್ದರೂ ಇಲ್ಲದಂತೆ ಮಾಡಿದೆ. ಆಕಾಶದ ತುಂಬಾ ಮೋಡದ ಮೇಲೆ ಮೋಡ ಬಂದು ಆವರಿಸಿ ಸೂರ್ಯನ ಇರುವಿಕೆಯೇ ತಿಳಿಯದಾಗಿದೆ. ಹಾಗೆಯೇ ಹಕ್ಕಿಗಳ ಚಿಲಿಪಿಲಿ ಸದ್ದು, ಕಪ್ಪೆಗಳು ಗುಟರ್ಗುಡುವುದು, ಜೀರುಂಡೆಯ ಕಿಲಕ, ಹಸಿರಿನ ಉಲ್ಲಾಸ, ಪಾತರಗಿತ್ತಿಯ ಸುಳಿದಾಟ, ಆಕಾಶದ ಮೋಡ, ತುಂಬಿದೆಕೆರೆ ಹೂಬಿಟ್ಟ ಗಿಡಗಳ ಕೂಟ, ರಸತುಂಬಿದ ನೇರಳೆ ಹಣ್ಣಿನಮರ ಇವೆಲ್ಲವೂ ಶ್ರಾವನ ಮಾಸದ ಮಳೆಗಾಲದಲ್ಲಿ ಹೊಸ ಹುರುಪನ್ನು ಪಡೆದು ಕಂಗೊಳಿಸುತ್ತವೆ. ಒಟ್ಟಿನಲ್ಲಿ ಪ್ರಕೃತಿಯಲ್ಲಿ ವಾಸಿಸುವ ಜೀವಸಂಕುಲಕ್ಕೂ ಜಲಚರಗಳಿಗೂ ಜೀವಸೆಲೆಯನ್ನು ನೀಡುತ್ತಿದೆ ಈ ಮಳೆಗಾಲ.

'ಬಾರೋ ಸಾಧನಕೇರಿಗೆ'[೧] ಕವಿತೆಯನ್ನು ಕವಿ ಬೇಂದ್ರೆಯವರು ಕುಟುಂಬವತ್ಸಂ ಗೃಹಸ್ಥರಾದ ಮೇಲೆ ಅವರ ಚಿಕ್ಕಪ್ಪ ಸಾಧನಕೇರಿಯ ಮನೆಯನ್ನು ಉಡುಗೊರೆಯಾಗಿ ನೀಡಿದ್ದಾರೆ. ಅವರ ವಾಸಸ್ಥಾನದಿಂದ ಸಾಧನಕೇರಿಯ ನಿಸರ್ಗ ರಮಣೀಯ ಸೌಂದರ್ಯವನ್ನು ಕವಿ ಹೀಗೆ ಬಣ್ಣಿಸಿದ್ದಾರೆ.

ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಸೇರಿದೆ ಊರಿಗೆ
ಹಸಿರು ಚಾಚಿದೆ ದಾರಿಗೆ
ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ॥ ಬಾರೋ

ಸಾಧನಕೇರಿಯು ಮಳೆಯಿಂದ ಆವೃತವಾಗಿ ತುಂತುರ ಮಳೆ ನಿರಂತರವಾಗಿ ಬೀಳುತ್ತಲಿದೆ. ಹಸಿರು ಬೆಟ್ಟಗುಡ್ಡ ಕಾಡುಮೇಡಿನಲ್ಲೆಲ್ಲಾ ಚಿಗುರಿದೆ. ಆ ಹಸಿರು ಊರನ್ನು ಆವರಿಸಿದೆ. ಇದು ಸ್ಮೃದ್ಧಿಯ ಸಂಕೇತವಾಗಿದೆ. ರಸ್ತೆಯ ಇಕ್ಕೆಲಗಳಲ್ಲೆಲ್ಲಾ

೧. ಬಾರೋ ಸಾಧನಕೇರಿಗೆ – ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೪೨೫.

ಗಿಡಮರಗಳು ಹಸಿರಿನಿಂದ ಚಾಚಿಕೊಂಡಿದೆ. ಆ ಸಂದರ್ಭದಲ್ಲಿ ನಂದನದ ತುಣುಕೊಂದು ಬಿದ್ದಿದೆ. ನೋಟ ಸೇರದು ಯಾರಿಗೆ ಎಂದು ರವಿ ಬಣ್ಣಿಸಿದ್ದಾರೆ. ಹಾಗೆಯೇ

ಮಲೆಯ ಮೊಗವೇ ಹೊರಳಿದೆ
ಕೋಕಿಲಕೆ ಸವಿ ಕೊರಳಿದೆ
ಬೇಲಿಗೂ ಹೂ ಬೆರಳಿದೆ
ನೆಲಕೆ ಹರೆಯವು ಮರಳಿದೆ
ಭೂಮಿತಾಯ್ ಒಡಮುರಿದು ಎದ್ದಳೊ
ಶ್ರಾವಣ ಸಿರಿ ಬರಲಿದೆ॥ ಬಾರೊ

ಸಾಧನಾಕೇರಿಯ ಪರಿಸರದಲ್ಲಿ ಗಿಡಮರಗಳೆಲ್ಲಾ ಹಸಿರಿನಿಂದ ರಂಗೋಳಿಸುತ್ತಿದೆ. ಆ ಹಸಿರಿನ ವಾತಾವರಣದಲ್ಲಿ ಮರಗಳ ಮಧ್ಯೆ ರೆಂಬೆಕೊಂಬೆಗಳಲ್ಲಿ ಕುಳಿತ ಪಕ್ಷಿಗಳು ಚಿಲಿಪಿಲಿ ಎಂದು ಸವಿಗಾನವನ್ನು ಹೊರಹೊಮ್ಮಿಸುತ್ತಿವೆ. ರಸ್ತೆ ಹಾಗೂ ಇತರೆ ಸ್ಥಳಗಳಲ್ಲಿ ಇರುವಂತಹ ಸಾಧನಕೇರಿಯ ಬೇಲಿಯೂ ಸಹ ಹಸಿರು ಆವರಿಸಿ ಬೇಲಿಯೂ ಬಣ್ಣಬಣ್ಣ ಹೂವುಗಳು ಅರಳಿ ನಿಂತಿವೆ. ಈ ಶ್ರಾವಣಮಾಸದ ಸಂದರ್ಭ ಎಷ್ಟೊಂದು ಸೊಗಸಾಗಿದೆ. ನೆಲಕ್ಕೆ ಯೌವನ ಬಂದಿದೆ. ಭೂತಾಯಿ ನೀ ಒಡಮುರಿದು ಎದ್ದೇಳು ಶ್ರಾವಣಮಾಸ ಸಮೃದ್ಧಿಯನ್ನು ಹೊತ್ತು ಬರಲಿದೆ ಎಂದು ಬಣ್ಣಿಸಿದ್ದಾರೆ.

ಮೋಡಗಳ ನೆರಳಾಟವು
ಅಡವಿ ಹೂಗಳ ಕೂಟವು
ಕೋಟಿ ಜೇನ್ನೊಣಕೂಟವು
ಯಕ್ಷಿ ಮಾಡಿದ ಮಾಟವು
ನೋಡು ಬಾ ಗುಂಪಾಗಿ ಪಾತರ
ಗಿತ್ತಿ ಕುಣಿಯುವ ತೋಟವು ॥ಬಾರೋ॥

ಇಲ್ಲಿ ಮೋಡಗಳ ನೆರಳಾಟ ಎಂದರೆ ಶ್ರಾವಣ ಆಗಮವಾಗುತ್ತಿದ್ದಂತೆಯೇ ಮೋಡಗಳು ಸೂರ್ಯನ ಬಿಸಿಲಿನ ಜೊತೆ ಆಟವಾಡುವಂತೆ ಸೂರ್ಯನ ಕಿರಣ ಭೂಮಿಗೆ ಬೀಜದ ರೀತಿಯಲ್ಲಿ ಆಟವಾಡುತ್ತಿರುತ್ತವೆ ಅಂದರೆ ಮಂಜು ಮುಸುಕಿದ ವಾತಾವರಣದಿಂದ ಕೂಡಿರುತ್ತದೆ. ಕಾಡುಮೇಡುಗಳಲೆಲ್ಲಾ ಹೂವುಗಳು ಅರಳಿ ಗುಂಪುಗುಂಪಾಗಿ ಬಣ್ಣಬಣ್ಣದಿಂದ ಕೂಡಿದ್ದು ಅದು ಕವಿಯ ಕಣ್ಣಿಗೆ ಹೂಗಳ ಕೂಟದ

ರೀತಿಯಲ್ಲಿ ಕಾಣಿಸುತ್ತದೆ. ಈ ಹೂಗಳ ಮಕರಂದವನ್ನು ಹೀರಳು ಗುಂಪುಗುಂಪಾಗಿ ಕೋಟ್ಯಾಂತರ ಜೇನುನೊಣಗಳು ಆ ದಟ್ಟಡವಿಯ ತುಂಬಾ ಹಾರಾಡುತ್ತಿವೆ. ಹಾಗೆಯೇ ಬಣ್ಣಬಣ್ಣದ ಚಿಟ್ಟೆಗಳು ಹಾರಾಡುತ್ತಿವೆ ನೋಡುಬಾ ಸಾಧನಕೇರಿಯ ಸೌಂದರ್ಯವ ಎಂದು ಕರೆಯುತ್ತಿದ್ದಾರೆ.

ಮರವು ಮುಗಿಲಿಗೆ ನೀಡಿದೆ
ಗಿಡದ ಹೊದರೊಳು ಹಾಡಿದೆ
ಗಾಳಿ ಎಲ್ಲೂ ಆಡಿದೆ
ದುಗುಡ ಇಲ್ಲಿಂದೋಡಿದೆ
ಹೇಳುಗೆಳೆಯಾ ಬೇರೆ ಎಲ್ಲೀ
ತರದ ನೋಟವ ನೋಡಿದೆ॥ ಬಾರೋ.....

ಸಾಧನಕೇರಿಯ ಪರಿಸರದಲ್ಲಿ ಮರಗಳು ಮುಗಿಲೆತ್ತರಕ್ಕೆ ಬೆಳೆದು ನಿಂತಿವೆ. ಗಿಡಗಳ ಪೊದೆಯೊಳಗೆ ಗಿಡಗಳೇ ಹಾಡಿದಂತೆ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿವೆ. ಅದು ಗಾಳಿಯ ಮೂಲಕ ತೇಲಿಬರುತ್ತಲಿದೆ. ಇದನ್ನು ನೋಡಿದ ಯಾರಿಗೇ ಆಗಲಿ ದುಃಖ ದುಮ್ಮನಗಳು ಮನಸ್ಸಿನಲ್ಲಿ ಉಳಿಯುವುದಿಲ್ಲ. ಹೇಳು ಗೆಳೆಯಾ ಇಂತಹ ಸುಂದರ ನೋಟವನ್ನೂ ನೀನು ಎಲ್ಲಿಯಾದರೂ ನೋಡಿದ್ದಿಯಾ? ನೋಡಲು ಸಾಧ್ಯವಿಲ್ಲ. ಅದು ಈ ಸಾಧನಕೇರಿಯಲ್ಲಿ ಮಾತ್ರ ಕಾಣಬಹುದು ಎಂದು ಶ್ರಾವಣಮಾಸದ ಸಂದರ್ಭದಲ್ಲಿ ಸಾಧನಕೇರಿಯ ಪ್ರಕೃತಿಯನ್ನು ಬಣ್ಣಿಸಿದ್ದಾರೆ.

'ಸಣ್ಣ ಸೋಮವಾರ':[೧] ಈ ಕವನವು ಒಂದು ಶ್ರಾವಣ ಸೋಮವಾರದ ದಿನ. ಕವಿ ಚಿಕ್ಕ ವಯಸ್ಸಿನಲ್ಲಿದ್ದಾಗ ಸೋಮೇಶ್ವರನ ದೇವಾಲಯಕ್ಕೆ ಹೋಗಿ ಬರುವಾಗ ಅವರು ದಾರಿಯಲ್ಲಿ ಕಂಡಂತಹ ದೃಶ್ಯವನ್ನು ನೆನಪಿಸುತ್ತಾ ಈ ಕವನವನ್ನು ಬಣ್ಣಿಸಿದ್ದಾರೆ.

ಈ ಕವನವು ಪ್ರಕೃತಿ ಸೌಂದರ್ಯವನ್ನು ಬಿಂಬಿಸುವ ಕವನವಾಗಿದೆ.

ಹಾದಿಗುಂಟು ಚೆಲ್ಲಾಟ
ದಾರಿ ಉದ್ದ ನೀರನೋಟ
ಹಂಸರಾಣಿ ಬನರಾಣಿ ತ್ವಾಟ;
ಅತ್ತ ಏರೀ ಇತ್ತ ವಾರಿ
ನಡು ನಡುವೆ ಕೆರಿ, ಕೆರಿ
ಸುತ್ತಮುತ್ತು ಪಯಿರಿನ ಮಾಟ

೧. ಸಣ್ಣಸೋಮವಾರ – ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೪೪೫.

ಈ ಮೇಲ್ಕಂಡ ಕವನದಲ್ಲಿ ಮಕ್ಕಳ ಗುಂಪು ಸೋಮೇಶ್ವರನ ದೇವಾಲಯಕ್ಕೆ ಹೋಗುತ್ತಿದ್ದ ಸಡಗರದಲ್ಲಿ ಸುತ್ತಮುತ್ತ ನೋಡುತ್ತ ನಡೆಯುತ್ತಿದ್ದ ಸನ್ನಿವೇಶವನ್ನು ಕವಿ ನಿರೂಪಿಸಿದ್ದಾನೆ.

ದಾರಿಯಲ್ಲಿ ನಡೆಯುವಾಗ ರಸ್ತೆಯ ಎಡಬಲದಲ್ಲಿನ ಗದ್ದೆಯ ಪಯಿರುಗಳು ಗದ್ದೆಯಲ್ಲಿ ಕಾಣುತ್ತಿದ್ದ ನೀರು ಇವುಗಳನ್ನು ನೋಡುತ್ತ ಮಕ್ಕಳು ಸಾಗುತ್ತಿದ್ದರು.

ಮುಗಿಲಾಗ ಮೋಡದ ಹಡಗು
ಎಲ್ಲೆಲ್ಲೊ ಮಿಂಚೂ ಗುಡುಗು
ಚಳಿಗ್ಯಾಳಿ ತಂದ್ವರು ನಡುಗು
ಹುಡುಗ ಪಾಳ್ಯಕ್ಕ ಎಲ್ಲಾನು ಬೆಡುಗು

ದಾರಿಯಲ್ಲಿ ಸಾಗುವಾಗ ಮಕ್ಕಳು ಮಳೆ, ಗಾಳಿ, ಚಳಿ, ಮಿಂಚು, ಗುಡುಗು ಯಾವುದನ್ನೂ ಲೆಕ್ಕಿಸದೇ ಆನಂದದಿಂದ ನಡೆದುಹೋಗುತ್ತಿದ್ದ ಸನ್ನಿವೇಶವನ್ನು ಕವಿ ನಿರೂಪಿಸಿದ್ದಾನೆ.

ಮಕ್ಕಳು ದಾರಿಯಲ್ಲಿ ನಡೆಯುವಾಗ ನಾಮುಂದೆ, ನೀ ಮುಂದೆ ಎಂದು ಸಾಮಾನುಗಳನ್ನು ಹಿಡಿದು ನಡೆಯುತ್ತಾರೆ. ಇದನ್ನು ಮುಂದಿನ ಸಾಲುಗಳಲ್ಲಿ ಕಾಣುತ್ತೇವೆ.

ನಾ ಮುಂದ ನೀ ಮುಂದ
ನಡಿಗೀಯು ತರತರದಿಂದ
ಸಾಲ್ಯಿಗೆ ಸೂಟಿ ಎಂಥ ಹ್ವಾರೆ?
ಕಾಯಿ ಕಪ್ಪುರ ಕಟ್ಟಿಕೊಂಡು
ಬೆಲಪತ್ರಿ ಹಿಡಿಕೊಂಡು
ಸಂಗಾಟ ಫರಾಳ ಬ್ಯಾರೇ.

ಮಕ್ಕಳು ದಾರಿಯಲ್ಲಿ ದೇವಾಲಯಕ್ಕೆ ತಂದಿರುವ ಕಾಯಿ, ಕರ್ಪೂರ, ಬೆಲಪತ್ರಿ ಮತ್ತು ಫರಾಳವನ್ನು ಹಿಡಿದುಕೊಮಡು ಹೊರಟ ಚಿತ್ರವನ್ನು ಕಾಣುವ ನಿರೂಪಕ ಧಾರವಾಡ ಸೀಮೆಯ ಅಭಿಮಾನವನ್ನು ವರ್ಣಿಸುತ್ತಾರೆ.

ಹುಡುಗರು ಸೋಮೇಶ್ವರನ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಮಳೆಯಲ್ಲಿ ನೆನೆಯುತ್ತಾ, ಮರದಿಂದ ಮರಕ್ಕೆ ಜಿಗಿಯುವ ಮಂಗಗಳನ್ನೂ ನೋಡುತ್ತಾ ನಡೆಯುತ್ತಿದ್ದ ಚಿತ್ರಣವನ್ನು ನಿರೂಪಕ ಹೀಗೆ ಚಿತ್ರಿಸಿದ್ದಾರೆ.

ಧಾರವಾಡದ ಸೀಮಿ ಛಂದ
ಏರು ಇಳಿವಿನ ಅಂದ
ಹಬ್ಬ! ಕುಣಿಕೋತ ಹೊರಟಾಂಗ ಕುದುರಿ
ಮರದಿಂದ ಮರಕ ಹಾರಿ
ಟೊಂಗಿಯಿಂದ ಟೊಂಗಿಗೇರಿ
ಹುಬ್ಬ! ಹಾರ ಸತಾವ ಮಂಗ ಬೆದರಿ,
ತಪತಪ ತೊಯ್ದು ಗಿಡ
ಅಲ್ಲಾಡಿ ಟಪಟ್ಯಪ
ಅಬ್ಬ! ಬೀಳ್ತಾವ ನೀರಲಹಣ್ಣು ಉದುರಿ.

ಧಾರವಾಡದ ಸೀಮೆಯ ಏರು ಇಳಿವನ್ನು ಅಭಿಮಾನದಿಂದ ವರ್ಣಿಸುವ ಕವಿ ತನ್ನ ಬಾಲ್ಯದ ನೆನಪನ್ನು ಮಾಡಿಕೊಳ್ಳುತ್ತಾನೆ. ಮಂಗಗಳು ಮಕ್ಕಳು ತಂಡವನ್ನು ಕಂಡು ಬೆದರಿ ಮರದಿಂದ ಮರಕ್ಕೆ ನೆಗೆಯುವಾಗ ಮಳೆಯ ಹನಿ, ಮರದ ಹನಿ ಜೊತೆಗೆ ನೇರಳೆ ಹಣ್ಣುಗಳು ಉದುರುತ್ತಿದ್ದ ಸನ್ನಿವೇಶವನ್ನು ಬಣ್ಣಿಸಿದ್ದಾರೆ.

ದಾರಿಯಲ್ಲಿ ಸೀಟಿ ಊದುತ್ತಾ ಬರುತ್ತಿದ್ದ ಗೂಡ್ಸ್ ಗಾಡಿಗಳು ದಾರಿಗಾಗಿ ಸಿಗ್ನಲ್ ಮಾಡುತ್ತಿದ್ದ ದೃಶ್ಯ ಹೀಗಿದ್ದವು ಎಂದು ಕವಿ ಬಣ್ಣಿಸಿದ್ದಾನೆ.

ಗುಡ್ಸು ದುಡು ದೂಡು ಬರುತ್ತಿತ್ತು ದೂಡಿ
ಸೀಟಿ ಹೊಡೆತ್ತಿತ್ತು ದೂರಿಂದ ಗಾಡಿ
ಗೇಟಿನ ಫಜಾರಗಟ್ಟಿಗೋಡಿ ಓಡಿ
ಕೈಯೆ ಸಿಗ್ನಲು ಮಾಡಿ
ಒಬ್ಬರೊಬ್ಬರ್ನ ನೋಡಿ
ನಾವು! ನಿಲ್ತಿದ್ವಿ ಠೀಕು ಜೋಡಿ ಜೋಡಿ

ದಾರಿಯಲ್ಲಿ ಬರುತ್ತಿದ್ದ ಗೂಡ್ಸು ಗಾಡಿಗಳ ಸೀಟಿ ಶಬ್ಧವನ್ನೂ, ಕೈಯ ಸಿಗ್ನಲ್‌ನ್ನೂ ನೋಡಿ ಮಕ್ಕಳು ಒಬ್ಬರನ್ನೊಬ್ಬರ ಕೈಯನ್ನು ಹಿಡಿದು ಜೋಡಿಯಾಗಿ ನಿಲ್ಲುತ್ತಿದ್ದ ಸನ್ನಿವೇಶವನ್ನು ಕವಿ ಚಿತ್ರಿಸಿದ್ದಾನೆ.

ಮಕ್ಕಳು ಜೊತೆಯಾಗಿ ರಸ್ತೆಯ ಬದಿಯಲ್ಲಿ ನಿಲ್ಲುತ್ತಿದ್ದಾಗ ಹಳ್ಳದಲ್ಲಿ ನೀರು ಹರಿಯುತ್ತಿದ್ದ ದೃಶ್ಯ ವಿವರಿಸುತ್ತಾನೆ.

ತಗ್ಗಿನ್ಯಾಗ ಗಿಡದ ಗುಂಪು
ಹೊಂಡ್ಯದ ನೀರ ತಂಪು
ದೂರಿಂದ ಕಂಡರೂ ಸೊಂಪು

ಹಳ್ಳದ ಕಡೆಗೆ ನೀರು ಹರಿಯುತ್ತಿರುವುದನ್ನು ಮುಟ್ಟಿ ನೋಡಿದ ಕವಿಯ ಮನಸ್ಸಿಗೆ ತಂಪು ಎನಿಸುತ್ತಿತ್ತು. ಮಕ್ಕಳೂ ಹಳ್ಳದ ಕಡೆ ನಿಂತು ಸೊಂಪಾಗಿ ಬೆಳೆದಿರುವ ಗಿಡಮರಗಳನ್ನು ನೋಡುತ್ತಿದ್ದ ಸನ್ನಿವೇಶವನ್ನು ಚಿತ್ರಿಸಿದ್ದಾರೆ.

ಮಕ್ಕಳು ದಾರಿಯಲ್ಲಿ ನಡೆಯುವಾಗ ಭಜನೆಯ ಮೇಳದ ಧನಿಯನ್ನು ಆಲಿಸುತ್ತಾ ಭಕ್ತಿಯಿಂದ ದೇವರನ್ನು ಕಾಣುವ ತವಕದಲ್ಲಿರುವ ಬಾಲ್ಯದ ಅನುಭವವನ್ನು ವಿವರಿಸುತ್ತಾನೆ.

ಭಜನೀಯ ಮ್ಯಾಳದ ಧನಿ
ಅಲ್ಲಾ ದೂರಾ ಅಲ್ಲಾ ಸನಿ
ತುಳಕ್ಯಾಡತವ ದಿಕ್ಕು ದಿಕ್ಕು
ತಪ್ಪಿ ಉಳಿದ ಕೋಗಿಲಾ
ನಡುವೇನ್ಸ ಕೂಗ್ತದ
ಶ್ರಾವಣದ ಝುಡಿಯೊಳಗ ಸಿಕ್ಕು
ಹರಹರ ಮಹಾದೇವಾ
ಈ ಸಾಡತಾವ ಜೀವಾ
ಮಾನಸ ಸರೋವರ ಹೊಕ್ಕು

ಶ್ರಾವಣಮಾಸದ ಝುಡಿಮಳೆಯ ನಡುವೆಯೂ ಮಕ್ಕಳು ದೇವರನ್ನು ಕಾಣಲು ಉತ್ಸಾಹದಿಂದ ನಡೆಯುತ್ತಿದ್ದಾಗ ಕೋಗಿಲೆಯ ಇಂಪಾದ ಧ್ವನಿಯನ್ನು ಆಲಿಸುತ್ತಾ ಹರಹರ ಮಹಾದೇವ ಎಂದು ಮನಸಾರೆ ದೇವರನ್ನು ಸ್ಮರಿಸುತ್ತಾ ದೇವಾಲಯವನ್ನು ಪ್ರವೇಶಿಸುವುದನ್ನು ಮುಂದಿನ ಸಾಲುಗಳಲ್ಲಿ ಕಾಣುತ್ತೇವೆ.

ಗರ್ಭ ಗುಡಿಯೊಳಗ ಲಿಂಗ
ನಿದ್ದಿಯೊಳಗ್ಸ ನೋಡಿಧಾಂಗ
ಕಣ್ಣು ಮುಚ್ಚತಾವ ನಮೋ ಎಂದು
ಗವಿಯೊಳಗಿನ ದಾರಿ
ಹರದಾರಿ ಹರದಾರಿ
ಮಿಂಚಿತ್ತು ಚಂದ್ರಕ್ವಾರಿ ಒಮದು
ನಿಂತ್ಸ ಮೈಯಾಗಿ ಖಂಬ
ಸೋರ್ಯಾವ ಜಂಬಗಿಂಬ
ಹಿಡಿದಾನ ಕೈಯ ಶಿವನೆ ಬಂದು

ಕವಿ ಮತ್ತು ಮಕ್ಕಳು ಗರ್ಭಗುಡಿಯೊಳಗೆ ನುಗ್ಗಿ ಕಣ್ಣನ್ನು ಮುಚ್ಚಿ ಹರಾಹರ ಎಂದು ದೇವರಿಗೆ ಕೈಮುಗಿದ್ದು ಕಣ್ಣನು ಬಿಟ್ಟು ಲಿಂಗವನ್ನು ನೋಡಿದಾಗ ಶಿವನ ಲಿಂಗ ಕಣ್ಣಿಗೆ ಮಿಂಚು ಹೊಳೆದಂತೆ ಕಾಣಿಸುತ್ತಿತ್ತು ಎಂದು ಕವಿ ಶಿವನ ಲಿಂಗವನ್ನೂ, ಶಿವನ ಕೈಯಲ್ಲಿರುವ ತ್ರಿಶೂಲ ಚಂದ್ರಕ್ವಾರಿಯಂತೆ ಹೊಳೆಯುತ್ತಿತ್ತು ಎಂದು ಬಣ್ಣಿಸಿದ್ದಾನೆ. ದೇವರ ದರ್ಶನ ಪಡೆದ ನಂತರ ಕವಿಯು ಈ ಕೆಳಗಿನ ಕವನವನ್ನು ವರ್ಣಿಸಿರುವುದನ್ನು ಕಾಣಬಹುದಾಗಿದೆ.

ಎಚ್ಚರ್ಯದಾಗ ಇದು
ಹುಚ್ಚುಚ್ಚಾರ ಅನಿಸಿ
ಎಲ್ಲಾರ ಕೂಡ ಕೈ ಮುಗಿದು
ಬೆಂಡೂ ಬೆತ್ತಾಸ ಅಂತ
ತಿಂತ್ಯನ ನುರಿಸಿಕೊಂತ
ಹೋಗತಿದ್ವಿ ಜಾತ್ರಿಗೆ ಜಿಗಿದು

ಗರ್ಭಗುಡಿಯೊಳಗೆ ಹೋಗಿ ಶಿವನ ದರ್ಶನ ಪಡೆದ ನಂತರ ಮಕ್ಕಳು ದೇವಾಲಯದಿಂದ ಹೊರಬಂದು ಮತ್ತೆ ಕೈಮುಗಿದು ಜಾತ್ರೆಯ ಕಡೆ ತಿಂಡಿ ತಿನ್ನಲು ನಡೆಯುತ್ತಿರುವುದನ್ನು ಕವಿ ಬಿಂಬಿಸಿದ್ದಾನೆ.

ಕವಿಗೆ ಎಷ್ಟೋ ವರ್ಷಾಗಳಾದ ನಂತರ ಜಾತ್ರೆಯಲ್ಲಿ ತಿಂದ ತಿಂಡಿತಿನಿಸುಗಳನ್ನು ನೆನಪುಮಾಡಿಕೊಳ್ಳುತ್ತಾ ಜಾತ್ರೆಯಲ್ಲಿ ನಿಂತಿದ್ದ ಹುಡುಗಿಯನ್ನು ವರ್ಣಿಸುವ ಚಿತ್ರಣವನ್ನು ಈ ಕೆಳಗಿನ ಕವನಗಳಲ್ಲಿ ವಿವರಿಸುತ್ತಾನೆ.

ಶಾಲ್ಮಲಿ ಸಣ್ಣಬಾಲಿ
ಕಿವಿಯಲ್ಲಿ ತಾಳಿ–ವಾಲಿ
ಗರಿಗರಿ ಬನದಾಗ ಅಡಗಿ
ಗಂಗಾ ಹೊಳಿಯಾಗಿ
ಸಾಗರ ಬಿದ್ದು ಸಾಗರಕಾಗಿ
ಹೊರಟಾಳ ಗೋಕರ್ಣ ಕಡಿಗಿ
ಬೂರಲ ದೀಪಮಾಲಿ
ನಂದಿಸಿ ಸಜ್ಜಿಸಾಲಿ
ಗತ್ತಿನ ಸಪ್ಪಳಿಲ್ಲದ ನಡಿಗಿ

ವಯಸ್ಸಾದ ಕವಿಯು ಜಾತ್ರೆಯಲ್ಲಿ ಕಂಡಂತಹ ಹೆಣ್ಣುಮಗಳು ಧರಿಸಿದ ಉಡುಪನ್ನೂ ಹಾಗೂ ಕಿವಿಯಲ್ಲಿ ಧರಿಸಿದ್ದ ತಾಳಿ-ವಾಲಿಯನ್ನು ನೋಡಿದ ಕವಿ ಶಿವನ ಧರ್ಮಪತ್ನಿಯಾದ ಗಂಗೆಯೇ ಸಾಗರವಾಗಿ ಬೂರಲ ಮರದ ಸನಿಹದಲ್ಲಿ ಸಪ್ಪಳಮಾಡದೆ ಪ್ರಶಾಂತವಾಗಿ ಹರಿಯುತ್ತಿದ್ದಾಳೆ ಎಂದು ಕವಿ ಬಣ್ಣಿಸಿರುವುದನ್ನು ಕಾಣುತ್ತೇವೆ.

ಶ್ರಾವಣ ಸೋಮವಾರದ ದಿನ ಶಿವನ ಜಾಗರಣ ಮಾಡುವ ಜನರನ್ನು ವರ್ಣಿಸುವ ಕವನ ಇದಾಗಿದೆ.

ಆ ರಾತ್ರಿ ಈ ರಾತ್ರಿ
ಯಾತರದು ಐತಿ ಖಾತ್ರಿ
ಶಿವರಾತ್ರಿ ಬೆಳಕೆ ಬೆಳಬೆಳಗು
ಒಟ್ಟಿತ್ತು ಏನೋ ಹಾಸ
ತಟ್ಟಿತ್ತು ಶಿವಭಾಸ
ಕೈಲಾಸಾನೆ ಹೊರಗೂ ಒಳಗು
ಜೀವದ ಜಾಗರಣಿ
ಶ್ರಾವಣದ ಶರಣ ಸರಣಿ
ಓಂಕಾರ ಕಹಳೆಯ ಮೊಳಗು

ಶಿವರಾತ್ರಿಯ ದಿನ ಶಿವನ ದರ್ಶನವಾದ ನಂತರ ಜನರು ಜಾಗರಣೆಯಲ್ಲಿ ದೇವಾಲಯ ಒಳಗೂ, ಹೊರಗೂ ಬೆಳಕಿನ ನಡುವೆ ಇರುವುದನ್ನೂ, ಓಂಕಾರದ ಕಹಳೆಯ ಮೊಳಗೂ ಇಂದಿಗೂ ಉಳಿದಿದೆ ಎಂದು ನಿರೂಪಕ ಹೇಳಿದ್ದಾನೆ.

ಇಲ್ಲಿಂದ ಮುಂದೆ ಬಾಲ್ಯದಲ್ಲಿ ಕವಿಗಾದ ಅನುಭವ, ಅನಿಸಿಕೆಯನ್ನು ತನಗಾದ ಶಿವಭಾಸದ ಹಿಂದಿನ ನೆನಪನ್ನು ವಿವರಿಸುತ್ತಾನೆ.

ಭ್ಯಾವ್ಯಾ ಇದ್ದಾಂಗ ದೇವಾ
ಹೇಳಿದ್ರು ಹಿರಿಯರು
ಅಲ್ಲೇ! ಸುತ್ತಾಡತಾವ ನಮ್ಮ ಖ್ಯಾಲಾ
ಎನಿಸಿದರ ಏನೋ ಕನಸ
ಕಂಡ್ಹಾಂಗ ಅನಸ್ತ ದ
ಕಣ್ಣು! ಆಗ್ತಾವ ಹ್ಯಾಂಗೊ ತೇಲು ಮೇಲಾ

ನೆನಪಿನ ಓರಿಯೊಳಗ
ಮಿಣುಕ್ತಾವ ಎಣ್ಣೀ ದೀಪ
ಎಲ್ಲೇ! ಹೋದಾವೊ ಗೆಳೆಯಾ ಆಕಾಲ

ಕವಿಗೆ ಬಾಲ್ಯದಲ್ಲಿ ಕಂಡಂತಹ ಶಿವನ ದರ್ಶನ ಹಾಗೂ ಅಂದಿನ ಭಾವನೆಗಳು ಕವಿಗೆ ಮನಸ್ಸಿಗೆ ಇಂದು ಕನಸು ಕಂಡಂತೆ ತೋರುತ್ತಿದೆ. ದೇವರನ್ನು ಹೇಗೆ ಭಾವಿಸುತ್ತೇವೆಯೋ ಹಾಗೆ ಇಂದೂ ಸಹ ದೇವರು ಕಾಣಿಸುತ್ತಾನೆ, ಎನ್ನುವುದು ಕವಿಯ ಕಲ್ಪನೆಯಾಗಿದೆ. ಸಣ್ಣ ಸೋಮವಾರದ ದಿನ ಶಿವರಾತ್ರಿಯ ಶುಭದಿನವಾದ್ದರಿಂದ ಜನರು ಕಣ್ಣು ಮಿಟುಕಿಸದೆ ಎಣ್ಣೆ ದೀಪ ಸಣ್ಣಾಗಿ ಉರಿಯುವಂತೆ ಜನರು ಕಣ್ಣನ್ನು ಬಿಟ್ಟು ಶಿವಧ್ಯಾನವನ್ನು ಮಾಡುತ್ತಿರುವುದನ್ನು ಕವಿಯ ಊಹೆಯಾಗಿದೆ.

ಮತ್ತೆ ಶಿವರಾತ್ರಿಯ ದಿನ ಬರುತ್ತದೆ ಎಂಬ ನಂಬಿಕೆಯೂ ಈ ಕವನದಲ್ಲಿ ಕವಿಯ ಸತ್ಯಾರ್ಥವಾಗಿದೆ.

ಬಂತಣ್ಣ ಬಣ್ಣ ಸೋಮವಾರಾ
ಕಾಣಬೇಕಣ್ಣಾ ಸೋಮೇಶ್ವರಾ

ಶ್ರಾವಣ ಸೋಮವಾರದ ದಿನ ಮತ್ತು ಶಿವರಾತ್ರಿಯಂದು ಧಾರವಾಡದ ಸೋಮೇಶ್ವರನ ಗುಡಿಗೆ ಹೋಗಿ ಬರುವ ಆ ಸುಂದರ ದಿನಗಳು ಕವನದ ಆರಂಭದ ಸಾಲುಗಳೇ ಪುನರಾವರ್ತನೆಯಾಗಿರುವುದರೊಂದಿಗೆ ಈ ಕವನ ಮುಕ್ತಾಯವಾಗಿದೆ.

ಹೀಗೆ ಇನ್ನೂ ಹಲವಾರು ಶ್ರಾವಣ ಗೀತೆಗಳಾದ ಶ್ರಾವಣದ ವೈಭವ, ಚಿತ್ತಿ ಮಳೆಯ ಸಂಜೆ, ನೀರೆ, ಶ್ರಾವಣ, ಮತ್ತೆ ಶ್ರಾವಣ, ಮತ್ತೆ ಬಂತು ಶ್ರಾವಣ ಇನ್ನೂ ಮುಂತಾದ ಶ್ರಾವಣಮಾಸದ ಗೀತೆಗಳನ್ನು ಬರೆದು ಅಂಬಿಕಾತನಯದತ್ತರು 'ಶ್ರಾವಣಕವಿ' ಎಂದೇ ಪ್ರಖ್ಯಾತಿಯಾಗಿದ್ದಾರೆ.

ಪ್ರಕೃತಿ ಇತರೆ ಗೀತೆಗಳು: ಬೇಂದ್ರೆಯವರ ಪ್ರಕೃತಿ ಇತರೆ ಗೀತೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

'ಯುಗಾದಿ'[೧]ಯು ಋತುಚಕ್ರದ ಆದಿಬಿಂದು. ಇದು ವಸಂತ ಋತುವಿನ ಚೈತ್ರಮಾಸದಿಂದ ಪ್ರಾರಂಭವಾಗುತ್ತದೆ. ಮಾನವನು ತನ್ನ ಬುದ್ಧಿಶಕ್ತಿಯ ಆಧಾರದಿಂದ ಭೂಮಿ ಹಾಗೂ ಚಂದ್ರನ ಚಲನೆಯನ್ನು ಗುಣಿಸಿ ಯುಗಾದಿಯ ಆರಂಭವನ್ನು

---

೧. ಇದು ಯುಗಾದಿ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೨೨.

ನಿರ್ಧರಿಸುತ್ತಾರೆ. ಮಾನವನ ಹೊರತಾದ ನಿಸರ್ಗಕ್ಕೆ ಮಾನವನ ಬುದ್ಧಿಶಕ್ತಿಗಿಂತ ಬೇರೊಂದು ರೂಪದ ಬುದ್ಧಿಶಕ್ತಿ ಇದೆ. ಅದು ಯುಗಾದಿಯನ್ನು ಗುರುತಿಸುವ ಬಗೆಯೇ ಬೇರೆ ಅದು ಮಾನವನ ಪ್ರಜ್ಞೆಗೆ ನಿಲುಕದು.

ಅಂಬಿಕಾತನಯದತ್ತರು ತಮ್ಮ ಯುಗಾದಿ ಕವನದಲ್ಲಿ ಸೃಷ್ಟಿಕ್ರಮವು ಪುನಾರಾವರ್ತಿಸುವ ಬಗೆಯನ್ನು ಬಣ್ಣಿಸುತ್ತಿದ್ದಾರೆ. ಯುಗಾದಿಯೊಡನೆ ನಿಸರ್ಗವು ಹೊಸರೂಪ ತಾಳುವ ರೀತಿಯನ್ನು ವರ್ಣಿಸುತ್ತಾರೆ. ಅವರು ಬಣ್ಣಿಸುವ ಯುಗಾದಿಯನ್ನು 'ಪ್ರಕೃತಿಯ ಯುಗಾದಿ' ಎಂದು ಹೇಳಬಹುದು.

ಸೂರ್ಯ, ಭೂಮಿ ಹಾಗೂ ಚಂದ್ರರ ಸೃಷ್ಟಿಯಾದ ನಂತರ ಅನೇಕ ಕೋಟಿಯುಗಗಳು ಕಳೆದುಹೋಗಿವೆ. ಪ್ರತಿವರ್ಷದ ಹಾದಿಯಲ್ಲಿ ನಾವು ಯುಗಾದಿ ಎಂದು ಕರೆಯುವ ದಿನವು ಪುನರಾವರ್ತನೆಗೊಳ್ಳುತ್ತದೆ. ಪ್ರತಿಸಲವು ಈ ವರ್ಷಾರಂಭವು ನಿಸರ್ಗದಲ್ಲಿ ಹೊಸ ಹರ್ಷವನ್ನು ತರುತ್ತದೆ. ಅದನ್ನು ಬೇಂದ್ರೆ ಹೀಗೆ ಹೇಳಿದ್ದಾರೆ.

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷದ
ಹೊಸತು ಹೊಸತು ತರುತಿದೆ.

ವಸಂತ ಋತುವಿನ ಪ್ರಕೃತಿಯನ್ನು ಗಮನಿಸಿದಾಗ ಸಸ್ಯಸಂಕುಲದಲ್ಲೆಲ್ಲಾ ಹೊಸ ಹೊಸ ಚಿಗುರಿನಿಂದ ಬಣ್ಣಬಣ್ಣದ, ಬಗೆಬಗೆಯ ಸುವಾಸನೆಯ ಹೊಸ ಹೂವುಗಳಿಂದ ಶೋಭಿಸುತ್ತಿರುತ್ತದೆ. ಪ್ರಕೃತಿಯು ಹೊಸ ಉಲ್ಲಾಸದಿಂದ ತುಂಬುತ್ತದೆ. ನಿಸರ್ಗದಲ್ಲಿ ಹೊಸ ಸಂಭ್ರಮವಿರುತ್ತದೆ. ನಿಸರ್ಗದಲ್ಲಿಯ ಸಸ್ಯ ಸಂಕುಲವು ಹೊಸ ಹೂವನ್ನು ಬಿಡುವುದರೊಂದಿಗೆ ಸಂತಾನೋತ್ಪಾದಿಯನ್ನು ಪ್ರಾರಂಭಿಸುತ್ತವೆ. ಆದುದರಿಂದ ಯುಗಾದಿ ಹೊಸ ವರುಷಕ್ಕೆ ಹರುಷ!

ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಳಿ
ಮತ್ತೆ ಕೇಳಬರುತಿದೆ.
ಬೇವಿನ ಕಹಿಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆ ತರುತಿದೆ.

ಪರಾಗಸ್ಪರ್ಶಕ್ಕಾಗಿ ಭೃಂಗಗಳನ್ನು ಆಹ್ವಾನಿಸಲು ಹೊಂಗೆ ಹೂವುಗೊಂಚಲು ಹೂಗಳನ್ನು ಸುರಿಸುತ್ತದೆ. ದುಂಬಿಗಳ ಗುಂಗುಂಗಾನ ಈ ವರ್ಷವೂ ಪುನರಾವರ್ತಿಸುತ್ತಿದೆ. ಇಡೀ ವರುಷವೆಲ್ಲ ಕಹಿಯಾದ ಎಲೆ ಹಾಗೂ ಕಹಿಯಾದ ಕಾಯಿಗಳನ್ನು ಇಟ್ಟುಕೊಂಡ ಬೇವಿನ ಮರವು ಯುಗಾದಿಯಂದು ನಸುಗಂಪಿನ ಹೂವನ್ನು ಪಡೆದಿದೆ. ಜೀವಕಳೆ ಬಂದಿದೆ!

ವಸಂತ ಋತುವಿನ ಆದಿಯಲ್ಲಿ ಗಿಡ, ಮರ, ಬಳ್ಳಿಗಳು ಹೂವುಗಳಿಂದ ಕಂಗೊಳಿಸುವ ಕಾರಣವನ್ನು ಕವಿ ಹೀಗೆ ಹೇಳುತ್ತಾರೆ.

ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ

ಈ ಮೇಲಿನ ಮೂರು ಸಾಲುಗಳು ಕವಿಯ 'ಅಸಾಮಾನ್ಯ ಕಲ್ಪನೆಯಿಂದಾಗಿ ಹೊರಹೊಮ್ಮಿವೆ. ಇಲ್ಲಿ ಸೃಷ್ಟಿಕರ್ತನು ನಿಸರ್ಗವನ್ನು ಸೋಲಿಸಿಲ್ಲ. ನಿಸರ್ಗವು ತಾನಾಗಿಯೇ ಸೃಷ್ಟಿಕರ್ತನಿಗೆ ಸೋತಿದೆ. ಕಾಮದೇವನ ಬಾಣ ತಗುಲಿದೊಡನೆಯೇ ಮಾವಿನ ಮರವು ಪುಳಕಗೊಂಡಿದೆ. ಆ ಪುಳಕವು ಹೂವುಗಳಾಗಿ ಹೊರಹೊಮ್ಮಿದೆ.

ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ

ಮಾಮರವು ಇನ್ನೂ ಹಣ್ಣು ಬಿಟ್ಟಿಲ್ಲ. ಆದರೆ ಹಣ್ಣಿನ ಸುಗ್ಗಿ ಇನ್ನೇನು ಬಂದೇ ಬಿಟ್ಟಿತು ಎಂದು ಹಿಗ್ಗುತ್ತ ಗಿಳಿಗಳ ಸಾಲುಗಳು ಮಾಮರವನ್ನು ಆಶ್ರಯಿಸಿವೆ. ಗಿಳಿಗಳ ಈ ಸಾಲುಗಳು ಕವಿಗೆ ತೋರಣದಂತೆ ಕಾಣುತ್ತವೆ.

ಈ ರೀತಿಯಾಗಿ ನಿಸರ್ಗವೆಲ್ಲಾ ಹೊಸ ವರುಷದೊಡನೆ ಹೊಸ ಜನ್ಮತಾಳಿ ಸಂಭ್ರಮಿಸುತ್ತಿದೆ. ಹರ್ಷದ ಹೊಸ ನೆಲೆಯನ್ನು ಪಡೆಯುತ್ತದೆ. ಪ್ರತಿವರ್ಷದಲ್ಲೂ ಪ್ರಕೃತಿ ಹೊಸ ಬಾಲ್ಯ ಹಾಗೂ ಹೊಸ ಯೌವನವನ್ನು ಪಡೆಯುತ್ತದೆ. ಆದರೆ ಮಾನವನ ಸ್ಥಿತಿ ಹೇಗಿದೆ?

ವರುಷಕ್ಕೊಂದು ಹೊಸತು ಜನ್ಮ
ಹರುಷಕ್ಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ!
ಒಂದೆ ಒಂದು ಜನ್ಮದಲ್ಲಿ

ಒಂದೆ ಬಾಲ್ಯ ಒಂದೆ ಹರೆಯ
ನಮಗೆದಷ್ಟೇ ಏತಕೆ?

ಮಾನವ ಕುಲಕ್ಕೆ ಮಾತ್ರ ಒಂದು ಜನ್ಮದಲ್ಲಿ ಒಂದೇ ಬಾಲ್ಯ ಹಾಗೂ ಒಂದೇ ಯೌವ್ವನ! ನಮಗೂ ಸಹ ನಿದ್ದೆಯು ನಮ್ಮ ಹಿಂದಿನದನ್ನೂ ಕಳೆದೊಗೆದು ಎಚ್ಚರವಾದೊಡನೆ ಹೊಸ ಜೀವನವನ್ನು ಕೊಡುವ ಹಾಗಿದ್ದರೆ ಎಷ್ಟು ಚೆನ್ನಾಗಿತ್ತು.

ನಿದ್ದೆಗೊಮ್ಮೆ ನಿತ್ಯಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೊ?
ಎಲೆ ಸನತ್ಕುಮಾರದೇವ।
ಸಲೆ ಸಾಹಸಿ ಚಿರಂಜೀವ।
ನಿನಗೆ ಲೀಲೆ ಸೇರದೋ?

ಕವಿಯು ಸೃಷ್ಟಿಕರ್ತನನ್ನು ಪ್ರಶ್ನಿಸುತ್ತಾನೆ. ಜನ್ಮದಾತ ನೀನು ಚಿರಂಜೀವಿ, ನೀನು ಸಾಹಸಿ, ನಿನ್ನಂತಯೇ ಮಾನವರಿಗೂ ಸಹ ಇಂತಹ ವೈಭೋಗ ಕೊಡಬೇಕಾಗಿತ್ತು. ಕೊಡದಿರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದ್ದಾರೆ.

ರಾಗರತಿ: ಬೇಂದ್ರೆಯವರ ಜನಪ್ರಿಯ ಕವನವಾದ 'ರಾಗರತಿ'[೧]ಯಲ್ಲಿ ಸಂಧ್ಯಾಕಾಲದ ಪ್ರಕೃತಿ ಶೃಂಗಾರವನ್ನು ಹೆಣ್ಣೊಬ್ಬಳ ಭಾವವಿಕಾರದೊಡನೆ ಸಮೀಕರಿಸಲಾಗಿದೆ.

'ಮುಗಿಲ ಮಾರಿಗೆಽ ರಾಗರತಿಯ ನಂಜ ಏರಿತ್ತಽ
ಆಗ – ಸಂಜೆಯಾಗಿತ್ತ;
ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೋ ಬಿದ್ದಿತ್ತಽ
ಗಾಳಿಗೆ ಮೇಲಕ್ಕೆದ್ದಿತ್ತಽ

ಮುಳುಗುತ್ತಿರುವ ಸೂರ್ಯನ ಕಿರಣಗಳಿಂದ ಆಕಾಶದಲ್ಲೆಲ್ಲಾ ಗಾಢವಾದ ಕೆಂಪುಬಣ್ಣ ತಿರುಗಿದೆ. ಇದನ್ನು ಬೇಂದ್ರೆಯವರು ರಾಗರತಿ ಎಂದು ಬಣ್ಣಿಸಿದ್ದಾರೆ. 'ಮುಗಿಲ ಮಾರಿಗೆ' ಎಂದು ಹೇಳುವ ಮೂಲಕ ಈ ಕೆಂಪು ವರ್ಣವು ಬಾನಲ್ಲಿ ಹರಡಿದ ಪ್ರಕೃತಿ ಎನ್ನುವ ಹೆಣ್ಣಿನ ಮನದ ಬಯಕೆಯ ಬಣ್ಣವೆನ್ನುವುದನ್ನು ಬೇಂದ್ರೆಯವರು ಸೂಚ್ಯವಾಗಿ ಹೇಳುತ್ತಾರೆ. ಈ ರೀತಿಯಾಗಿ ಪ್ರಕೃತಿಯ ಮಾನುಷೀಕರಣವು ಇಲ್ಲಿದೆ.

---

೧. ರಾಗರತಿ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೦೪.

ಬೇಂದ್ರೆಯವರು 'ರಾಗರತಿಯ ನಂಜ ಏರಿತ್ತ' ಎಂದು ಏಕೆ ಹೇಳುತ್ತಿದ್ದಾರೆ? ಪ್ರಕೃತಿ ಸ್ತ್ರೀಯ ಮುಖಕ್ಕೆ ಹರಡಿದ ರತಿರಾಗವನ್ನು ನಂಜು ಎಂದು ಕರೆಯುವ ಮೂಲಕ ಅವರು ತಮ್ಮ ಆಕ್ಷೇಪಣೆಯನ್ನು ಸ್ಪಷ್ಟಪಡಿಸುತ್ತಾರೆ. ಅಪಾತ್ರವಾದಾಗ ಅದು ವಿಷದಂತೆ ಏರುತ್ತದೆ. ಅದರ ಪರಿಣಾಮವೂ ವಿಷದಂತೆಯೇ ಆಗಬಹುದು!

'ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೋ ಬಿದ್ದಿತ್ತ
ಗಾಳಿಗೆ ಮೇಲಕ್ಕೆದಿತ್ತ

ಮಂಜಿನ ಮುಸುಕು ಎಂದರೆ ತಿಳಿಯನ್ನು ಹದಗೆಡಿಸುವಂತಹ ಭಾವವಿಕಾರ. ಈ ವಿಕಾರವು ನೆಲದ ಅಂಚಿನಲ್ಲಿ ಅಂದರೆ ಮನಸ್ಸಿನ ತಳಭಾಗದಲ್ಲಿ ಮುದಗೊಂಡು ಮಲಗಿತ್ತು. ಆದರೆ ಇದನ್ನು ಅಲಗಾಡಿಸುವಂತಹ 'ಗಾಳಿ' ಬೀಸಿದ್ದರಿಂದ ಮಂಜಿನ ಮುಸುಕು, ಮನಸ್ಸಿನ ಮುಂಭಾಗಕ್ಕೋಸ್ಕರ ಸರಿದು ಬಂದಿತು. ಪ್ರಕೃತಿಯಲ್ಲಿ ಹೇಗೋ, ನಾಯಕಿಯ ಅಂತರಂಗದಲ್ಲಿಯೂ ಸಹ ಈ ಗಾಳಿಯು ಭಾವ ವಿಕಾರವನ್ನು ನಂಜಿನಂತೆ ಹಬ್ಬಿಸಿದೆ.

ಬಿದಿಗೆ ಚಂದ್ರ ನಾ ಚೋಗಚೀ – ನಗಿ – ಹೂ ಮೆಲ್ಲಗ ಮೂಡಿತ್ತ;
ಮ್ಯಾಲಕ ಬೆಳ್ಳಿನ ಕೂಡಿತ್ತ
ಇರುಳ ಹೆರಳಿನಾ ಅರಳ ಮಲ್ಲಿಗೀ ಜಾಳಿಗಿ ಹಂಗಿತ್ತ
ಸೂಸ್ಯಾವ ಚಿಕ್ಕಿ ಅತ್ತಿತ್ತ

ಸೂರ್ಯಾಸ್ತದ ನಂತರ ಈಗ ಚಂದ್ರೋದಯವಾಗುತ್ತಿದೆ. ಬಿದಿಗೆಯ ಚಂದ್ರ ಮೂಡುತ್ತಿದ್ದಾನೆ. ಸೂರ್ಯನ ಜೊತೆಜೊತೆಗೆ ಚಲಿಸುವ ಬೆಳ್ಳಿಚುಕ್ಕಿಯನ್ನು ಚಂದ್ರ ಕೂಡುತ್ತಿದ್ದಾನೆ. ಎಂದರೆ ಸೂರ್ಯ, ಚಂದ್ರರಿಬ್ಬರೂ ಪಶ್ಚಿಮ ದಿಕ್ಕಿನಲ್ಲಿಯೇ ಇದ್ದಾರೆ. ಆದುದರಿಂದ ಇದು ಅಮವಾಸ್ಯೆಯ ನಂತರದ ಶುಕ್ಲಪಕ್ಷದ ಬಿದಿಗೆ.

ಈ ಅವಧಿಯಲ್ಲಿ ಚಂದ್ರ ಇನ್ನೂ ಕ್ಷಿಣವಾಗಿಯೇ ಇರುತ್ತಾನೆ. ಆತನ ಬೆಳದಿಂಗಳು ಮಂದವಾಗಿರುತ್ತದೆ. ಹಾಗಾಗಿ ಆಗಸದಲ್ಲಿ ಅಲ್ಲಲ್ಲಿ ಚಿಕ್ಕೆಗಳು ಸೂಸಿವೆ. ಬೇಂದ್ರೆಯವರ ಕಣ್ಣಿನ ಈ ಚಿಕ್ಕೆಗಳು ಇರುಳೆಂಬ ನಾರಿ ತನ್ನ ಹೆರಳಿನಲ್ಲಿ ಧರಿಸಿದ ಅರಳು ಮಲ್ಲಿಗೆ ಹೂವುಗಳ ಜಾಳಿಗೆಯಂತೆ ಕಾಣುತ್ತವೆ. ಅತ್ಯಂತ ಸುಂದರವಾದ ಪ್ರಕೃತಿ ಚಿತ್ರಣವಿದ್ದು.

ಬೊಗಸಿಗಣ್ಣಿನಾ ಬಯಕೆಯ ಹೆಣ್ಣು ನೀರಿಗೆ ಹೋಗಿತ್ತ;
ತಿರುಗಿ ಮನೀಗೆ ಸಾಗಿತ್ತ;

ಕಾಮಿ ಬೆಕ್ಕಿನ್ಹಾಂಗ ಭಾಂವೀ ಹಾದಿ ಕಾಲಾಗ ಸುಳಿತಿತ್ತ,
ಎರಗಿ ಹಿಂದಕುಕುಳಿತಿತ್ತ.

ಬೇಂದ್ರೆಯವರು ಈ ಕವನವನ್ನು ಬರೆದ ಕಾಲದಲ್ಲಿ ನೀರಿಗಾಗಿ ಕೆರೆ ಅಥವಾ ಬಾವಿಗಳನ್ನು ಆಶ್ರಯಿಸಬೇಕಾಗಿತ್ತು. ಹೆಣ್ಣುಮಕ್ಕಳು ಮುಂಜಾನೆ ಹಾಗೂ ಸಂಜೆಗೆ ನೀರು ತರಲು ಹೋಗುತ್ತಿದ್ದಳು. ಅಂತಹ ಹೆಣ್ಣುಮಗಳೊಬ್ಬಳು ಸಂಜೆಯ ಸಮಯದಲ್ಲಿ ಬಾವಿಯಿಂದ ನೀರು ಸೇದಿಕೊಂಡು ತನ್ನ ಮನೆಗೆ ಹಿಂತಿರುಗುತ್ತಿದ್ದಾಳೆ. ಈ ಹೆಣ್ಣುಮಗಳು ಎಂಥವಳು? ಬಟ್ಟಲುಗಣ್ಣು ಎನ್ನುವುದು ಚೆಲುವಿನ ಲಕ್ಷಣವಾಗಿದೆ. ಈಕೆ ಬಟ್ಟಲುಕಂಗಳು, ಬೊಗಸೆಗಣ್ಣು ಹೊಂದಿದವಳು ಎಂದು ಬಣ್ಣಿಸುತ್ತಾರೆ. ಈ ಹೆಣ್ಣುಮಗಳು ನೀರು ತುಂಬಿಕೊಂಡ ಬಳಿಕ ಮನೆಗೆ ಮರುಳುತ್ತಿದ್ದರೂ ಸಹ ಅವಳ ಮನಸ್ಸು ಹಿಂದೆ ಬಿಟ್ಟ ಬಾವಿಯ ಕಡೆಯಲ್ಲಿಯೇ ಇದೆ. ಬಾವಿಯ ಹಾದಿ ಅವಳನ್ನು ಮತ್ತೆ ಮತ್ತೆ ಕರೆಯುತ್ತಿದೆ.

'ಕಾಮಿ ಬೆಕ್ಕಿನ್ಹಾಂಗ ಭಾಂವೀ ಹಾದಿ ಕಾಲಾಗ ಸುಳಿತಿತ್ತ' ಮೂಲಕ ಬೇಂದ್ರೆ ಇದನ್ನು ಸ್ಪಷ್ಟಪಡಿಸುತ್ತಾರೆ.

'ಮಳ್ಳಗಾಳಿ – ಸುಳಿ ಕಳ್ಳಕೈಲೆ ಸೆರಗನು ಹಿಡಿದಿತ್ತ,
ಮತಮತ ಬೆರಗಿಲೆ ಬಿಡತಿತ್ತ;
ಒಂದ ಮನದ ಗಿಣಿ ಹಿಂದ ನೆಳ್ಳಿಗೆ ಬರತಿತ್ತ,
ತನ್ನ ಮೈಮರ ಮರೆತಿತ್ತ

ನೀರು ತುಂಬಿಕೊಂಡು ಹೆಣ್ಣು ಮುಂದೆ ಸಾಗಿದ್ದರೆ, ಸರಸ ವರ್ತನೆಯು ಈ ರಸಿಕ ಗಣಿಕಾರ ಅವಳ ಬೆನ್ನಿ ಹಿಂದೆ ಅವಳ ನೆರಳಿನಂತೆ ಒಂದೇ ಮನಸ್ಸಿನಿಂದ ಅವಳನ್ನು ಹಿಂಬಾಲಿಸಿದ್ದಾನೆ. ತನ್ನನ್ನು ಮರೆತಿದ್ದಾನೆ. ಸಾಕುಗಿಳಿಯ ಸಾಕಿದ ವರ ಸುತ್ತಲೂ ಹಾರುವಂತೆ, ಇವನ ಮನವು ಅವಳ ಸುತ್ತಲೂ ಸುತ್ತುತ್ತಿದೆ. ಹಾಗೂ ಅವಳ ಧ್ಯಾನದಲ್ಲಿ ತನ್ನನ್ನ ಮರೆತಿದೆ.

ಬೇಂದ್ರೆಯವರು ತಮ್ಮ ಕವನದ ನಾಯಕಿಯ ಭಾವನೆಯನ್ನು ಬಣ್ಣಿಸುವುದರಲ್ಲಿ ಹಾಗೂ ಈ ಭಾವ ವಿಕಾರವನ್ನು ಪ್ರಕೃತಿಯ ರಂಗಿನೊಡನೆ ಸಮೀಕರಿಸುವುದರಲ್ಲಿ, ಅಕ್ಕರೆ ಹೊಂದಿರುವರೇ ಹೊರತು ವಾಸ್ತವದ ಅಭಿಸಾರದಲ್ಲಿ ಅಲ್ಲ. ಹೀಗೆ ರಾಗರತಿಯಲ್ಲಿ ನಂಜು ಏರಿತ್ತು ಎಂದು ಹೇಳುತ್ತಾರೆ. ಪ್ರೇಮಭಾವನೆಯ ಬೆಳದಿಂಗಳು ಇವರಲ್ಲಿ ಇನ್ನೂ ಮೂಡಿಲ್ಲ. ಈ ರೀತಿಯಾಗಿ ಬೇಂದ್ರೆಯವರು ಪ್ರಕೃತಿಯೊಡನೆ ಸಾಮರಸ್ಯವನ್ನೂ ಸಾಧಿಸಿದ್ದಾರೆ.

ಚಳಿಯಾಕೆ:[೧]

'ಚಳಿಯಾಕೆ' ಕವಿತೆಯು ಚಳಿಗಾಲ ವರ್ಣನೆಯಾಗಿದೆ. ಚಳಿಗಾಲವು ಪ್ರಾರಂಭವಾದಾಗ ಮಳೆಗಾಲದ ಕಾರ್ಮೋಡಗಳು ಕರಗಿ ಹೋಗಿರುತ್ತವೆ. ಅಲ್ಲೊಂದು ಇಲ್ಲೊಂದು ಚಳಿಯ ಮೋಡಗಳ ತುಣುಕುಗಲು ಕಾಣುತ್ತಿರುತ್ತವೆ. ಹಗಲು ಕಡಿಮೆಯಾಗುತ್ತಾ ರಾತ್ರಿ ದೀರ್ಘವಾಗುತತದೆ. ಮುಂಗಾರು ಪೈರಿನಲ್ಲಿ ತೆನೆಗಳು ಮೂಡಿರುತ್ತವೆ. ಬಾವಿಗಳು ತುಂಬಿಕೊಂಡಿರುತ್ತವೆ. ಇದು ಎಲ್ಲರಿಗೂ ಉಲ್ಲಾಸದ ಕಾಲವಾಗಿರುತ್ತದೆ. ಇಂತಹ ಪ್ರಕೃತಿಯ ಸೊಬಗನ್ನು ಬೇಂದ್ರೆಯವರು ವರ್ಣಿಸಿರುವುದು ಹೀಗೆ.

> ನೀಗೆ ಹುಣ್ಣಿವೆ ಮುಂದೆ
> ಸೋಗಿನ ಚಂದ್ರಮ
> ಸಾಗಿ ಬರುವೊಲ ಬರುವ ಚಳಿಯಾಕೆ
> ಹೊನ್ನ ಸೇವಂತಿಗೆಯ
> ಹೆರಳು ಬಂಗಾರದ
> ಬೆಳ್ಳಿ ಸೇವಂತಿಗೆಯ ಬಳಿಯಾಕೆ

ಬೇಂದ್ರೆಯವರ ಈ ಕವನ 'ಸೋಗಿನ ಚಂದ್ರಮ'ನಿಂದ ಪ್ರಾರಂಭವಾಗುತ್ತದೆ. ಏಕೆಂದರೆ ಇಡೀ ವಾತಾವರಣವೇ ಸೋಗಿನಿಂದ ತುಂಬಿದೆ. ಇದಕ್ಕೆಲ್ಲಾ ಪ್ರೇರಣೆ ನೀಡುವ ಚಂದ್ರನಂತೂ ಸೋಗಿನ ಪ್ರಮುಖ ಆಟಗಾರನಾಗಿದ್ದಾನೆ.

ಸೀಗೆ ಹುಣ್ಣಿಮೆಯಲ್ಲಿ ಪೂರ್ಣಚಂದ್ರನು ಒಮ್ಮೆ ಪ್ರಕಾಶಿಸುವುದು. ಒಮ್ಮೆ ಕಣ್ಮರೆಯಾಗುವುದು ನಡೆದಿರುತ್ತದೆ. ಇದೇ ಚಂದ್ರನ ಕಣ್ಣಾಮುಚ್ಚಾಲೆಯಾಟ ಅಂದರೆ ಸೋಗಿನಾಟ! ಬೇಂದ್ರೆಯವರ ಚಳಿಯಾಕೆಯೂ ಸಹ ಚಂದ್ರಮನ ಸೋಗಿನಾಟಕ್ಕೆ ತಕ್ಕ ಕಳ್ಳ ಹೆಜ್ಜೆ ಇಡುತ್ತ ಮೆಲ್ಲಮೆಲ್ಲನೆ ಎಲ್ಲವನ್ನೂ ಆವರಿಸುತ್ತಿದ್ದಾಳೆ. ಚಂದ್ರನನ್ನು ಹಾಗೂ ಬೆಳ್ಳಿಯನ್ನು ಒಟ್ಟಾರೆಯಾಗಿ ನಿರೂಪಿಸುವ ವರಕವಿಯ ಕುಶಲತೆಯನ್ನು ಇಲ್ಲಿ ಕಾಣಬಹುದು.

ಪ್ರಕೃತಿ ಚೆಲುವನ್ನು ಆಸ್ವಾದಿಸುತ್ತ ಕುಳಿತ ಬೇಂದ್ರೆಯವರು ಆ ಚೆಲುವನ್ನೆಲ್ಲಾ ತಮ್ಮ ಚಳಿಯಾಕೆಗೆ ತೊಡಿಸದೆ ಇರಲು ಸಾಧ್ಯವೇ? ವರಕವಿಯ ಕಣ್ಣಿಗೆ ಚಂದ್ರ ಹಾಗೂ

---

೧. ಚಳಿಯಾಕೆ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೭೭.

ತಾರೆಗಳು ತಮ್ಮ ಚಳಿಯಾಕೆಯ ಆ ಭೂಷಣಗಳಾಗಿ ಕಾಣುತ್ತವೆ. ಅಂತಲೇ ಇವಳು 'ಹೊನ್ನ ಸೇವಂತಿ'ಗೆ ಹಾಗೂ 'ಹೆರಳು ಬಂಗಾರ' ಎನ್ನುವ ಒಡವೆಗಳನ್ನು ಧರಿಸಿದ್ದಾಳೆ. ಹೆಣ್ಣುಮಕ್ಕಳು ಹೊನ್ನ ಸೇವಂತಿಗೆಯನ್ನು ತುರುಬಿನಲ್ಲಿ ಧರಿಸುತ್ತಾರೆ. ಹಾಗೂ ಅಲ್ಲಲಿ ಮಿನುಗುತ್ತಿರುವ ಚಿಕ್ಕೆಗಳೇ ಹೆರಳು ಬಂಗಾರ. ಕೆಲವೊಂಮೆ ಚಂದ್ರನ ಸುತ್ತಲೂ ಕಟ್ಟಬಹುದಾದ 'ಕೆರೆ'ಯೇ ಇವಳ ಬೆಳ್ಳಿಸೇವಂತಿಗೆಯ ಕೈಬಳೆ!

ಕವಿ ಚಳಿಯಾಕೆಯ ಆಭರಣಳನ್ನು ಹಾಗೂ ಉಡುಗೆಯ ವರ್ಣನೆಯನ್ನು ಎರಡನೆಯ ನುಡಿಯಲ್ಲಿಯೂ ಮುಂದುವರೆಸುತ್ತಾರೆ. ಈ ರೀತಿಯಾಗಿ ಚಳಿಯ ಮಾನುಷೀಕರಣ ಮಾಡುತ್ತ ಚಂದ್ರತಾರೆಗಳನ್ನು ಆಭರಣಗಳನ್ನಾಗಿಸಿ ಮಾಡುವುದರಿಂದ ಇವೆರಡನ್ನೂ ಒಟ್ಟಾಗಿ ವರ್ಣಿಸುವುದು ಸುಲಭವಾಗುತ್ತದೆ.

ಮುಗಿಲಲಲ್ಲಾಡುವ
ಬಾವಿಲಿ ಮಲ್ಲಿಗೆ
ಕಿವಿಗೊಪ್ಪು ಓಲೆಕೊಪ್ಪು ಚಳತುಂಬ
ಹೊಳೆ ಹೊಂಡದುಸಿರನ್ನ
ನಯವಾಗಿ ನೆಯ್ದಂಥ
ಮಂಜಿನ ಮೇಲ್ಸೆರಗು ಮೈತುಂಬ

ಚಳಿಯ ತುಂಡು ಮೊಂಡಗಳು ಕೆಳಗೆ ಚಲಿಸುತ್ತಿದ್ದರೆ ಚಂದ್ರ ಹಾಗೂ ಚಿಕ್ಕೆಗಳು ಆ ಮೋಡದ ಮೇಲ್ಭಾಗದಲ್ಲಿ ಕಾಣಿಸುತ್ತವೆ. ಇದರಿಂದಾಗಿ ಆಕಾಶವು ತಲೆಕೆಳಗಾಗಿ 'ಬಾವಿ'ಯಂತೆ ಕಾಣುವುದು! ಮೋಡಗಳ ಚಲನೆಯಿಂದಾಗಿ ಈ ಬಾವಿ ಅಲ್ಲಾಡಿದಂತೆ ಕಾಣುವುದು! ಮೋಡಗಳ ಚಲನೆಯಿಂದಾಗಿ ಈ ಬಾವಿ ಅಲ್ಲಾಡಿದಂತೆ, ತಟರುವುದು. ಈ ಅಲ್ಲಾಡುತ್ತಿರುವ ಬಾವಿಯಲ್ಲಿಯ ಮಲ್ಲಿಗೆ ಹೂವುಗಳನ್ನು ಅಂದರೆ ಚಿಕ್ಕಿಗಳನ್ನು ಧರಿಸಿದ್ದಾಳೆ ನಮ್ಮ ಚಳಿಯಾಕೆ! ಈ ಆಕಾಶ ಮಲ್ಲಿಗೆಗಳೆಲ್ಲ ಅವಳಿಗೆ ಓಲೆಕೊಪ್ಪು ಹಾಗೂ ಚಳಿ ತುಂಬ ಎನ್ನುವ ಕರ್ಣಭೂಷಣಗಳಾಗಿವೆ. ಇನ್ನೂ ಅವಳು ಮೈತುಂಬ ಹೊದ್ದುಕೊಂಡಂತಹ ಮೇಲ್ಸೆರಗು ಎಂತಹದ್ದು ತುಂಬಿ ತುಳುಕುತ್ತಿರುವ ಹೊಳೆ ಹಾಗೂ ಹೊಂಡಗಳ ನೀರು ಬಾಷ್ಪೀಭವನವಾಗುವುದನ್ನು ಬೇಂದ್ರೆಯವರು ಹೊಳೆಹೊಂಡಗಳ 'ಉಸಿರು' ಎಂದು ವರ್ಣಿಸಿದ್ದಾರೆ. ಚಳಿಯಾಕೆ ಕೊಟ್ಟ ಆಭರಣಗಳು ಆಕಾಶದಲ್ಲಿದ್ದರೆ, ಅವಲು ಉಟ್ಟ ಉಡುಪುಗಳು ಭೂಮಿಯ ಕೊಡುಗೆ. ಈ ರೀತಿಯಾಗಿ ಭೂಮಿ ಹಾಗೂ ಆಕಾಶವನ್ನೂ ವ್ಯಾಪಿಸಿದ್ದಾಳೆ.

ಹೊಂಗಡಲು ಹೊಯ್ದಾಡಿ
ದೊಲು ನೆಲ್ಲು ತೆಲೆದೊಗೆ
ಅದರಲ್ಲಿ ಬಾ ಸುಮ್ಮನೀಸಾಡಿ
ತೆನೆ ಹಾಲು ದಕ್ಕಲಿ
ಕಕ್ಕಿಸಬೇಡದನು
ನಿನ್ನ ನಂಜಿನ ಸೆರಗ ಬೀಸಾಡಿ

ಇಂತಹ ಮಂಜಿನ ಉಡುಗೆಯನ್ನು ಉಟ್ಟು ಚಳಿಯಾಕೆ ಬಿರುಸಾಗಿ ಬಂದರೆ, ಏನಾಗಬೇಡ? ಭತ್ತದ ಪೈರು ಬೆಳೆದು ನಿಂತಿರುವ ಕಾಲವಿದು. ಸಾಲು ಸಾಲಾಗಿ ಹಬ್ಬಿರುವ ಇದರ ತೆನೆಗಳು, ಗಾಳಿಗೆ ತಲೆದೂಗತ್ತಲಿವೆ. ಚಳಿಯಾಕೆ ತನ್ನ ನಂಜಿನ ಸೆರಗನ್ನು ಬಿಸಾಡಿದರೆ, ತೆನೆಹಾಲೆಲ್ಲಾ ಕಕ್ಕಿ ಹೋದೀತು. ಆದುದರಿಂದ ಈ ಹೊಂಗಡಲಿನಲ್ಲಿ ನಿಧಾನವಾಗಿ ಈಜಿ ಬಾ' ಎಂದು ಬೇಂದ್ರೆಯವರು ಚಳಿಯಾಕೆಯನ್ನು ಪ್ರಾರ್ಥಿಸಿಕೊಂಡಿದ್ದಾರೆ.

ಕಣ್ಣಿಗೆ ಕಾಣದೆ
ಮೈಮುಟ್ಟಿ ತುಟಿಮುಟ್ಟಿ
ಮಿಸುಕದೆ ಮುಸುಕಿಗೆ ಹೋಗುವಾಕೆ
ಅಡಿಗೊಮ್ಮೆ ನಡುನಡುಗಿ
ಇರುಳ ಬೆಳದಿಮಗಳಕೆ
ಬಿಳಿಮೋಡ ನಗುವಂತೆ ನಗುವಾಕೆ

ಈ ಚಳಿಯಾಕೆ ನಿಮ್ಮ ಕಣ್ಣಿಗೆ ಬೀಳದೆಯೇ ನಿಮ್ಮ ಮೈಮುಟ್ಟುತ್ತಾಳೆ. ಆಗ ನಿಮ್ಮ ಮೈ ರೋಮಾಂಚನವಾಗುತ್ತದೆ. ನಿಮ್ಮ ತುಟಿಗೆ ಅವಳು ಸೋಂಕಿದರೆ, ನಿಮ್ಮ ಬಾಯಿ ನಡುಗುವುದು! ತಾನು ಸ್ವಲ್ಪವೂ ಮಿಸುಕದೆ, ನಿಮಗೆ ತಿಳಿಯಲಾರದಂತೆ ನೀವು ಹೊತ್ತುಕೊಂಡ ಹೊದಿಕೆಯಲ್ಲಿ ಈ ಅದೃಶ್ಯವನಿತೆ ಸೇರಿಕೊಳ್ಳುತ್ತಾಳೆ! ನೀವು ಚಳಿಯಾಯಿತೆಂದು ನಡುಗುತ್ತ, ಕಾಲು ಮಡಚಿಕೊಮಡು ಮುದ್ದೆಯಾಗುತ್ತೀರಿ. ಆಗ ಈ ಚಳಿಯಾಕೆ ನಗುತ್ತಾಳೆ. ಹುಣ್ಣಿಮೆ ರಾತ್ರಿ ಅವಲ ಚೆಲುವು. ಬೆಂದ್ರೆಯವರ ಈ ವರ್ಣನೆ ಅತ್ಯದ್ಭುತವಾಗಿದೆ.

ಉಸುರುಸಿರಿಗೆ ಮರುಕ
ಹೆಜ್ಜೆಹೆಜ್ಜೆಗೆ ಬೆಡಗು
ಮೆಲ್ಲಗೆ ಮಂಗಯ್ಯ ಹಿಡಿವಾಕೆ

ಯಾವ ಜಾತಿಯ ಹೆಣ್ಣೊ
ಹಾವ ಭಾವವೆ ಭೇರಿ
ಅಪ್ಪಿದ ಅಪ್ಪಿಗೆ ಬಿಡದಾಕೆ

ಚಳಿಯಿಂದ ನಡುಗುತ್ತಿರುವ ನೀವು ವೇಗವಾಗಿ ಉಸಿರಾಡುವಾಗ ನಿಮ್ಮ ಮೇಲೆ ಕರುಣೆ ತೋರಿ ಹಿಂದೆಗೆಯುತ್ತಾಳೆ. ಮತ್ತೆ ಉಸಿರಿನಲ್ಲಿ ನಿಮ್ಮ ಸೇರಿರುತ್ತಾಳೆ. ಈ ರೀತಿ ಮುಂದೆ ಹಜ್ಜೆ ಇಡುತ್ತಾ ನಿಮ್ಮ ಮುಂಗೈಯನ್ನು ಹಿಡಿದುಕೊಳ್ಳುತ್ತಾಳೆ. ಬೇಂದ್ರೆಯವರು ಹೀಗೆ ನನ್ನನ್ನು ಬಿಗಿದಪ್ಪಿರುವ ಚಳಿಯಾಕೆ ಯಾವ ಜಾತಿಯೊಂದು ಉದ್ಗಾರತೆಗೆದಿದ್ದಾರೆ. ಇಲ್ಲಿ ಪ್ರಕೃತಿದತ್ತವಾದ ಚಳಿಯನ್ನು ಒಂದು ಹೆಣ್ಣಿನ ರೂಪದಲ್ಲಿ ವರ್ಣಿಸಿದ್ದಾರೆ. ಪ್ರಕೃತಿಯಲ್ಲಿ ಸಮರಸವಾಗುವ ಸುಖವನ್ನು ಈ ಕವನದ ಮೂಲಕ ತೋರಿಸಿದ್ದಾರೆ.

ವಸಂತಮುಖ:[೧]

ಸಂತ ಋತುವಿನ ಒಂದು ಉಷಃಕಾಲದಲ್ಲಿ ಕವಿ ಅನುಭವಿಸಿದ ಆನಂದವನ್ನು ವಸಂತಮುಖ ಕವನದಲ್ಲಿ ವರ್ಣಿಸಿದ್ದಾನೆ. ಕವಿ ಬೇಂದ್ರೆ ಸೂರ್ಯೋದಯದ ಸಮಯದಲ್ಲಿ ತಾವು ಅನುಭವಿಸಿದ ಆನಂದದ ಬಗೆಗೆ ಅನೇಕ ಕವನಗಳನ್ನು ಬರೆದಿದ್ದಾರೆ. ಸಾಮಾನ್ಯವಾಗಿ ಈ ಕವನದಲ್ಲಿ ಸೂರ್ಯೋದಯದ ಸಮಯದ ನಿಸರ್ಗದ ವರ್ಣನೆ ಪ್ರಧಾನವಾಗಿದೆ. ಈ ಕವನದಲ್ಲಿ ಕವಿಯು ಅಖಿಲ ವಿಶ್ವವೇ ಉಷಃಕಾಲದಲ್ಲಿ ಚೇತನಗೊಂಡು, ಆನಂದ ಪರವಶವಾದುದರ ನಿದರ್ಶನವಿದೆ.

ಉದಿಕ ದಿನ! ಮುದಿತ ವನ
ವಿಧ ವಿಧ ವಿಹಗಸ್ವನ
ಇದುವೆ ಜೀವ, ಇದು ಜೀವನ
ಪವನದಮತೆ ಪಾವನ

'ಉದಿತ ದಿನ' ಎಂದರೆ ಇದೀಗ ಬೆಳಕು ಬಂದಿದೆ. ಇದು ಉಷಃಕಾಲ. ಉಷಃಕಾಲದ ಆನಂದವು ಕೇವಲ ಮನುಷ್ಯನಷ್ಟೇ ಅನುಭವಿಸಬಹುದಾದ ಸುಖವಲ್ಲ. ಸುತ್ತಮುತ್ತಲಿರುವ ಪರಿಸರವೆಲ್ಲಾ ಸಂತೋಷದಿಂದ ಇದೆ. ಇದನ್ನು ನೋಡಿ ಉಷಃಕಾಲ ಮುದಗೊಂಡಿದೆ. ಆ ಆನಂದವು ಹಕ್ಕಿಗಳ ಚಿಲಿಪಿಲಿಯಲ್ಲಿ ಕೇಳಿಬರುತ್ತಿದೆ. ಇದು ಕಣ್ಣಿಗೆ ಕಾಣುವ ಸೌಂದರ್ಯವಷ್ಟೆ ಅಲ್ಲ. ಕಿವಿಗೆ ಬೀಳುವ ಸಂತೋಷವೂ ಹೌದು. ಕೇವಲ ಒಂದು ಹಕ್ಕಿಯ ಸ್ವರ ಇಲ್ಲಿ ಕೇಳಿಬರುತ್ತಿಲ್ಲ. ಅನೇಕ ವಿಧದ

---

೧. ವಸಂತಮುಖ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೧೯.

ಹಕ್ಕಿಗಳು ಇಲ್ಲಿ ಹಾಡುತ್ತಿವೆ. ನಿಸರ್ಗದಲ್ಲಿರುವ ಈ ಸಾಮರಸ್ಯವನ್ನೂ ಕಂಡ ಕವಿ 'ಇದುವೆ ಜೀವ' 'ಇದು ಜೀವನ' ಎಂದು ಉದ್ಗರಿಸುತ್ತಾನೆ. ಅಲ್ಲದೆ ಇಂತಹ ಸಾಮರಸ್ಯದ ಜೀವನವೇ ಪಾವನಗೊಮಡ ಜೀವನ ಎಂದು ಹಾಡಿದ್ದಾರೆ. ಹಾಗೆಯೇ

ಏನೋ ವಿಧ! ಏನೊ ಹದ
ಗಾಳಿಗೊಡೆದ ಬುದ್ಬುದ
ಬೆಳಕೆ ಬದುಕು ಎಂಬ ಮುದ
ಜೀವ ಹೊಮಮಿ ಚಿಮ್ಮಿದ

ಈ ಉಲ್ಲಾಸಮಯ ಸಂದರ್ಭವು ಕವಿಯಲ್ಲಿ ಯಾವ ಭಾವನೆ ಮೂಡಿಸುತ್ತಿದೆ? ಅದು ಕವಿಯ ಅನುಭವಕ್ಕೆ ಬರುತಿದೆಯೋ ಹೊರತು ಹೇಳಲಾಗುತ್ತಿಲ್ಲ. ಆದುದರಿಂದಲೇ ಕವಿ ಅದನ್ನು 'ಏನೋ ವಿದ'! ಎಂದು ಬಣ್ಣಿಸುತ್ತಾನೆ. ಆ ಭಾವನೆ ಏನೆಂದು ಹೇಳಲಾಗದಿದ್ದರೂ ಒಂದು ಭಾವ ಪಕ್ವತೆಯನ್ನು ಹುಟ್ಟಿಸಿದೆ. ಅದು ಕವಿಯ ಅನುಭವಕ್ಕೆ ಬರುತ್ತಿರುವ 'ಹದ'. ಗಾಳಿಗೊಡೆದ ನೀರುಗುಳ್ಳೆಯಾಗಿದೆ. ಪ್ರಕೃತಿ ಚೈತನ್ಯದ ಎದುರಿಗೆ ಮನುಷ್ಯ ತಾನೆಷ್ಟು ಅಲ್ಪ ಎಂದು ಅರಿಯುತ್ತಾನೆ. ಆ ಕ್ಷಣದಲ್ಲಿ ಅವನಿಗೆ ಯಾವುದು ಮುಖ್ಯ ಎನ್ನುವ ಸತ್ಯ ತಿಳಿಯುತ್ತದೆ. ಅದೇನೆಂದರೆ 'ಬೆಳಕೇ ಬದುಕು' ನಿಸರ್ಗದಲ್ಲಿರುವ ಗಿಡ, ಮರಗಳಿಗೆ ಬೆಳಕು ಬೇಕು, ಅಲ್ಲಿರುವ ಪಕ್ಷಿಗಳಿಗೆ ಬೆಳಕು ಬೇಕು, ಅವುಗಳಿಗೆ ಜೀವನವನ್ನು ಕೊಡುತ್ತದೆ. ಮನುಷ್ಯನಿಗೂ ಸಹ ಬೆಳಕು ಬೇಕು ಎಂಬ ಸಂತೊಷವನ್ನು ಕವಿ 'ಜೀವ ಹೊಮ್ಮಿ ಚಿಮ್ಮಿದ ಮುದ' ಎಂದು ಕರೆಯುತ್ತಾನೆ.

ನೂರು ಮರ! ನೂರು ಸ್ವರ
ಒಂದೊಂದು ಅತಿ ಮಧುರ
ಬಂಧವಿರದೆ ಬಂಧುರ
ಸ್ವಚ್ಛಂದ ಸುಂದರ

ಪ್ರಕೃತಿಯಲ್ಲಿರುವುದು ಸ್ವಚ್ಛಂದತೆ ಅಲ್ಲ. ಈ ವನರಾಶಿಯಲ್ಲಿ ನೂರಾರು ತರಹದ ಮರಗಳಿವೆ. ಅಲ್ಲಿರುವ ಹಕ್ಕಿಗಳು ನೂರಾರು ತರಹದ ಸ್ವರ ಹೊರಡಿಸುತ್ತಿವೆ. ಇಂತಹದೇ ಸ್ವರ ಹೊರಡಿಸಬೇಕೆನ್ನುವ ಕಟ್ಟುನಿಟ್ಟು ಅವುಗಳಿಗೂ ಇಲ್ಲ. ಇಂತಹ ಬಂಧನವು ಇರದ ಕಾರಣದಿಂದಲೇ ಇವುಗಳ ಹಾಡು ಉಲ್ಲಾಸದಾಯಕವಾಗಿದೆ. ಬದುಕಿನಲ್ಲಿ ವಿವಿಧ ಸ್ವರಗಳು ಬೇಕು. ಆದರೆ ಆ ಸ್ವರಗಳೆಲ್ಲಾ ಮಧುರವಾಗಿರಬೇಕು ಎಂಬುದನ್ನು ಕವಿಯು ಇಲ್ಲಿ ಅನುಭವಿಸಿದ ದರ್ಶನವಾಗಿದೆ. ಪ್ರಕೃತಿಯಲ್ಲಿ ಒಂದಾಗಿ

ಪ್ರಕೃತಿಯ ಉಲ್ಲಾಸವೇ ತನ್ನ ಉಲ್ಲಾಸವಾಗಿದ್ದನ್ನು ಕವಿ ಅನುಭವಿಸಿದ ಕಾವ್ಯವು ಇದಾಗಿದೆ.

ಈ ಕವನದಲ್ಲಿ ಉಷಃಕಾಲವು ನಿಸರ್ಗದಲ್ಲಿ ಮೂಡಿಸಿದ ಉಲ್ಲಾಸದ ಅನುಭವವಿದೆ. ಈ ಅನುಭವವು ಕವಿಯನ್ನು ಮೂಕನನ್ನಾಗಿಸಿದೆ("ಏನೋ ವಿಧ! ಏನೋ ಹದ") ಪ್ರಕೃತಿಯ ಆಗಾಧತೆಯ ಎದುರಿಗೆ ತಾನು ಅಲ್ಪ ಎನ್ನುವ ಸತ್ಯವನ್ನು ತಿಳಿಸುತ್ತದೆ. ಸ್ವಾತಂತ್ರಬೇಕು, ಅದರೊಡನೆಯೇ ಸಾಮರಸ್ಯವೂ ಬೇಕು ಎನ್ನುವ ದರ್ಶನವನ್ನೂ ಕವಿಯಲ್ಲಿ ಹುಟ್ಟಿಸುತ್ತದೆ ಎಂದು ತಿಳಿದುಬಂದಿದೆ.

'ಅನಂತಪ್ರಣಯ'[೧]

ಅನಂತಪ್ರಣಯವು ವಿಶ್ವವ್ಯಾಪಯುಳ್ಳ ತ್ರಿಕೋನ ಪ್ರೇಮದ ಕತೆ. ಸೂರ್ಯ ಹಾಗು ಚಂದ್ರರು ಮಿತ್ರು, ಚಂದರನಿಗೆ ಭೂಮಿಯಲ್ಲಿ ಆಕರ್ಷಣೆ. ಆದರೆ ಭೂಮಿ ಹಾಗೂ ಸೂರ್ಯ ಪರಸ್ಪರ ಪ್ರಣಯಿಗಳು. ಇದೊಂದು ಕೊನೆಯಿಲ್ಲದ ಪ್ರಣಯಕತೆ. ಅಂತೆಯೇ ಈ ಕವನಕ್ಕೆ 'ಅನಂತಪ್ರಣಯ' ಎನ್ನುವ ಶೀರ್ಷಿಕೆಯನ್ನು ಕೊಟ್ಟಿದ್ದಾರೆ.

ಉತ್ತರ ಧ್ರುವದಿಂ ದಕ್ಷಿಣ ಧ್ರುವಕ್ಕೂ
ಚುಂಬಕ ಗಾಳಿಯು ಬೀಸುತಿದೆ.
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಜಿಸಿ ನಗೆಯಲಿ ಮೀಸುತಿದೆ.

ಈ ಕವನದ ಮೊದಲೆರಡು ನುಡಿಯಲ್ಲಿಯೇ ಬೇಂದ್ರೆಯವರು ಭೂಮಿಯಲ್ಲಿ ತುಂಬಿರುವ ಪ್ರಣಯಭಾವದ ಗುರುತುಗಳನ್ನು ಸೂಚಿಸಿದ್ದಾರೆ.

ಭೂಮಿಯ ಉತ್ತರ ಧ್ರುವ ಹಾಗೂ ದಕ್ಷಿಣ ಧ್ರುವಗಳಲ್ಲಿ ಇವೆ ಎನ್ನುವುದು ಒಂದು ವೈಜ್ಞಾನಿಕ ಸತ್ಯ. ವಿರುದ್ಧ ಬಗೆಯ ಚುಂಬಕಗಳು ಪರಸ್ಪರ ಆಕರ್ಷಿಸುತ್ತವೆ ಎನ್ನುವುದು ಸಹ ವೈಜ್ಞಾನಿಕ ಸತ್ಯವೇ. ಆದರೆ ಈ ವಾಸ್ತವತೆ ಬೇಂದ್ರೆಯವರ ಕಲ್ಪನೆಯಲ್ಲಿ ತಾಳುವ ಸುಂದರ ರೂಪವೇ ಬೇರೆ.

---

೧. ಅನಂತಪ್ರಣಯ – ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೩೩.

ಭೂಮಿಯಲ್ಲಿರುವ ಪ್ರಣಯ ಭಾವವು ಜಾಗೃತವಾಗಿದ್ದಂತೆಯೇ ಇನ್ನೆರಡು ಚೈತನ್ಯರೂಪಿಗಳಾದ ಸೂರ್ಯ ಹಾಗೂ ಚಂದ್ರರಲ್ಲಿಯೂ ಸಹ ಗೆಳೆತನದ ಒಲುಮೆ ಇದೆ.

"ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಜಿಸಿ ನಗೆಯಲಿ ಮೀಸುತಿದೆ"

ಈ ಗೆಳೆಯರಲ್ಲಿ ಒಬ್ಬನು, ಅಂದರೆ ಚಂದ್ರನು ಭೂಮಿಯಲ್ಲಿ ಪ್ರಣಯಾ-ಸಕ್ತನಾಗಿದ್ದಾನೆ. ಭೂಮಿಗಾಗಿ ಅವನು ಹಂಬಲಿಸುವುದನ್ನು ಬೇಂದ್ರೆಯವರು ಎರಡನೇ ನುಡಿಯಲ್ಲಿ ಬಣ್ಣಿಸುತ್ತಾರೆ.

"ಭೂರಂಗಕೆ ಅಭಿಸಾರಕೆ ಕರೆಯುತ
ತಿಂಗಳು ತಿಂಗಳು ನವೆಯುತಿದೆ
ತುಂಬುತ ತುಳುಕುತ ತೀರುತ ತನ್ನೊಳು
ತಾನೇ ಸವಿಯನು ಸವಿಯುತಿದೆ"

ಚಂದ್ರನೇನೋ ಭೂಮಿಯನ್ನು ಪ್ರಣಯಕ್ರೀಡೆಗೆ ಕರೆಯುತ್ತಿದ್ದಾನೆ. ಆದರೆ ಭೂಮಿ ಅವನ ಯಾಚನೆಯನ್ನು ಒಪ್ಪಿಲ್ಲ. ಹೀಗಾಗಿ ಚಂದ್ರನು ಪ್ರತಿ ತಿಂಗಳೂ ಕ್ಷೀಣಿಸುತ್ತಿದ್ದಾನೆ. ಅವಳು ತನ್ನ ಭೇಟಿಗೆ ಒಪ್ಪಿಕೊಳ್ಳಬಹುದೆನ್ನುವ ಆಸೆಯಲ್ಲಿ ಮತ್ತೆ ಮತ್ತೆ ಮೈತುಂಬಿಕೊಳ್ಳುತ್ತಾನೆ. ಪೂರ್ಣಿಮೆಯಂದು ತನ್ನ ಪ್ರೇಮದ ಬೆಳದಿಂಗಳನ್ನು ಹೊರಸೂಸಿ ಭೂಮಿಯ ಮೇಲೆ ತುಳುಕಿಸುತ್ತಾನೆ. ಈ ಯಾಚನೆ ಹಾಗೂ ಯಾತನೆಯ ಸವಿಯನ್ನು ಚಂದ್ರನು ತನ್ನೊಳಗೆ ಸವಿಯುತ್ತಿದ್ದಾನೆ. ಆದರೆ ಇತ್ತ ಭೂಮಿ ಹಾಗೂ ಸೂರ್ಯರ ಪ್ರಣಯ ಅಬಾಧಿತವಾಗಿ ಸಾಗಿದೆ.

ಭೂವನ ಕುಸುಮಜಿಸಿ ಪುಲಕಿಸಿಮರಳಿಸಿ
ಕೋಟಿ ಕೋಟಿಸಲ ಹೊಸಯಿಸಿತು.
ಮಿತ್ರನ ಮೈತ್ರಿಯ ಒಸಗೆ ಮಸಗದಿದೆ
ಮರುಕದ ಧಾರೆಯ ಮಸೆಯಿಸಿತು

ಭೂಮಿಯ ಚಲನೆಯಿಂದಾಗಿ ಋತುಗಳು ಬದಲಾಗುತ್ತಿವೆ. ಪ್ರತಿ ವಸಂತಕ್ಕೂ ಭೂಮಿಯ ಮೇಲೆ ಹೂವುಗಳು ಮತ್ತೆ ಮತ್ತೆ ಅರಳುತ್ತಿವೆ. ಇವು ಎಷ್ಟು ಕೋಟಿ ವರ್ಷದಿಂದ ನಡೆದಿದೆಯೋ ಬಲ್ಲವರಾರು. ಬೇಂದ್ರೆಯವರ ಕಣ್ಣಿಗೆ ಕಾಣುವ ಬಗೆ ಬೇರೆ. ಸೂರ್ಯನ ಕಿರಣ ಸ್ಪರ್ಶದಿಂದ ಪುಲಕಿತಳಾದ

ಭೂಮಿ ಮರಳಿಮರಳಿ ಕುಸುಮಿಸುತ್ತಾಳೆ. ಕೋಟಿ ಕೋಟಿ ಸಲ ಅವಳು ಹೊಸತನ ಪಡೆಯುತ್ತಾಳೆ ಎಂದು ಬೇಂದ್ರೆ ಹೇಳುತ್ತಾರೆ.

ಭೂಮಿಯ ಪ್ರಣಯವೂ ನವಯೌವನದಿಂದಲೇ ತುಂಬಿದೆ. ಸೂರ್ಯನೂ ಸಹ ಅಷ್ಟೇ ಪ್ರೇಮದಿಂದ ತುಂಬಿಕೊಂಡಿದ್ದಾನೆ. ಆಕಾಶ-ದೇವತೆಗಳ ಈ ಪ್ರಣಯಕ್ಕೆ ಕವಿ ಆಕಾಶದಲ್ಲಿರುವ ನಕ್ಷತ್ರಪುಂಜಗಳನ್ನು ಸಾಕ್ಷಿಯಾಗಿ ಮಾಡುತ್ತಾರೆ ಕಣ್ಣುತೆರೆದುಕೊಂಡೆ. ಆದರೆ ಈ ತಾರಾಸಮೂಹವು ಗಗನದಲ್ಲಿ ಶೋಭಿಸುತ್ತಿರುವ ಹಾರದಂತೆ ಕಾಣುತ್ತದೆ ಎಂದು ಬೇಂದ್ರೆಯವರು ಕಲ್ಪಿಸಿದ್ದಾರೆ.

ಅಕ್ಷಿನಿ ಮೀಲನಮಾಡದೆ ನಕ್ಷ
ತ್ರಣ ಗಣ ಗಗನದಿ ಹಾರದಿದೆ
ಬಿದಿಗೆಯ ಬಿಂಬಾಧರನಲ್ಲಿ ಇಂದಿಗು
ಮಿಲನದ ಚಿಹ್ನವು ತೊರದಿದೆ

ಇತ್ತ ಚಂದ್ರನ ಗತಿ ಏನು? ಆತ ತನ್ನ ಹಂಬಲವನ್ನು ಜೀವಂತವಾಗಿ ಇಟ್ಟುಕೊಂಡ ಭಗ್ನಪ್ರಣಯಿ. ಅಂತೆಯೇ

"ಬಿದಿಗೆಯ ಬಿಂಬಾಧರನಲಿ ಇಂದಿಗೂ
ಮಿಲನದ ಚಿಹ್ನವು ತೋರದಿದೆ"

ಭೂಮಿ ಹಾಗೂ ಸೂರ್ಯರ ಸೇರಿಕೆ ನಿರಂತವಾಗಿದೆ. ಭೂಮಿಗಾಗಿ ಚಂದ್ರನ ಭೇಟಿ ನಿರಂತರವಾಗಿದೆ. ಇದು ನಿರಂತರವಾದ ಅನಂತಪ್ರಣಯ, ಬೇಂದ್ರೆಯವರ ಕಲ್ಪನಾ ಪ್ರತಿಭೆಯು ಸಮಗ್ರ ವಿಶ್ವವನ್ನೇ ಆವರಿಸಿಕೊಳ್ಳಬಲ್ಲದು ಎನ್ನುವುದಕ್ಕೆ ಈ ಕವಿತೆ ಸಾಕ್ಷಿಯಾಗಿದೆ.

ಮನುವಿನ ಮಕ್ಕಳು:[೧]

ಈ ಕವಿತೆಯಲ್ಲಿ ನಿಸರ್ಗ ಹಾಗೂ ಸಸ್ಯಸಂಕುಲದ ಸಾಮರಸ್ಯವಿದೆ.

ಗಾಳಿಯು ಸುಳಿಗಾಳಿ ಸೂಸುವುದು
ಬಿಮ್ಮನೆ ಬೀಸುವುದು

೧. ಮನುವಿನ ಮಕ್ಕಳು - ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೧೦೧.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಪ್ರಾಣತರಂಗಿಣಿ ತುಳುಕುವಳು
ದಡಗಳದುಡುಕುವಳು
ಹೂಗಂಪಿನ ಹುಡಿ ಮಿಸುಕುವುದು
ಗಮಗಮ ಮುಸುಕುವುದು

ಗಾಳಿ ಹಾಗೂ ನೀರು ಇವು ಸಕಲ ಜೀವಿಗಳಿಗೆ ಅವಶ್ಯಕವಾದಂತಹ ನಿಸರ್ಗದ ಮೂಲ ಚೈತನ್ಯಗಳು ಗಾಳಿ ಹಾಗೂ ನೀರು ಇಲ್ಲದೆ ಯಾವ ಜೀವಿಯೂ ಬದುಕಲಾರದು. ಈ ಮೊದಲ ನಾಲ್ಕು ಸಾಲುಗಳಲ್ಲಿ ಕವಿಯ ಈ ಚೈತನ್ಯದ ಸ್ವಭಾವವನ್ನು ಬಣ್ಣಿಸಿದ್ದಾನೆ.

ಗಾಳಿಯು ಒಮ್ಮೊಮ್ಮೆ ಮೆಲ್ಲಗೆ ಸುಳಿಗಾಳಿಯಾಗಿ ಸೂಸುತ್ತದೆ. ಮತ್ತೊಮ್ಮೆ ಬಿಮ್ಮನೆ ಬೀಸುತ್ತದೆ. ಈ ಎರಡೂ ಕ್ರಿಯೆಗಳು ಜೀವಿಗಳಿಗೆ ಉಲ್ಲಾಸ ನೀಡುವ ಕ್ರಿಯೆಗಳೇ ಆಗಿವೆ. ನೀರನ್ನು ಕವಿಯು ಪ್ರಾಣತರಂಗಿಣಿ ಎಂದು ಬಣ್ಣಿಸುತ್ತಾನೆ. ತರಂಗಿಣಿ ಎಂದರೆ ಅಲೆಗಳು ಇದ್ದಂತಹವಳು ಅರ್ಥಾತ್ ನದಿ. ಈ ತರಂಗಗಳು ಅಂದರೆ ತೆರೆಗಳು ಸಕಲಪ್ರಾಣಿಗಳಿಗೆ ಜೀವಾಧಾರವಾಗಿದೆ. ಆದುದರಿಂದ ನದಿಯು ಪ್ರಾಣತರಂಗಿಣಿ. ಈ ವಾತ್ಸಲ್ಯಮಯಿ ನದಿಯು ಸಕಲ ಜೀವಿಗಳಿಗೆ ತನ್ನ ಪೋಷಣೆಯನ್ನು ಧಾರಾಳವಾಗಿ ಹಂಚಲು ತುಳುಕುತ್ತಾ ಧಾವಿಸುತ್ತಾಳೆ. ಆ ಆತುರದಲ್ಲಿ ನದಿಯು ತನ್ನ ಮೀರಿ ಹರಿಯುತ್ತಾಳೆ. ತಾಯಿಗೆ ಮಾತ್ರ ಸಹಜವಾದ ಈ ಸಂಭ್ರಮವನ್ನು ಸೂಚಿಸಲು ಕವಿಯು ಇವಳಿಗೆ 'ದಡಗಳ ದುಡುಕುವಳು' ಎಂದು ಬಣ್ಣಿಸುತ್ತಾನೆ.

ನಿಸರ್ಗದ ಈ ಚೈತನ್ಯಗಳಿಂದ ಗಾಳಿ ಹಾಗೂ ನೀರನ್ನು ಹೀರಿಕೊಂಡು ಬೆಳೆಯುವ ಸಸ್ಯಗಳು ಸುತ್ತಲೆಲ್ಲಾ ಸುಗಂಧವನ್ನು ಪಸರಿಸುತ್ತವೆ. ಹೊಂಗಪಿನ ಹುಡಿ ಎಂದರೆ ಹೂವಿನ ಸುವಾಸನೆಯನ್ನು ಹೊತ್ತು ಕೊಂಡಂತಹ ಪರಾಗರೇಣುಗಳು ಎಲ್ಲೆಲ್ಲೂ ಹರಡಿಕೊಂಡು ವಾತಾವರಣವನ್ನು ಸುಗಂಧಮಯವನ್ನಾಗಿ ಮಾಡುತ್ತದೆ. ಗಾಳಿಯನ್ನು ವಾಯುದೇವ ಎಂದು ಕರೆಯುವ ವಾಡಿಕೆಯಿದೆ. ಆದುದರಿಂದ ಗಾಳಿ ಪುರುಷರೂಪಿ ನದಿಯು ಜಲದೇವಿ. ಅಂದರೆ ಸ್ತ್ರೀರೂಪಿಣಿ. ಇವರು ಜಗತ್ತನ್ನು ಪೋಷಿಸುವುದರಿಂದ ಜಗದ ತಂದೆ–ತಾಯಿ ಇದ್ದಂತೆ ಇವರ ಪೋಷಣೆಯನ್ನು ಪಡೆದ ಸಂಕುಲವು ಇವರ ಸಂತತಿ ಇದ್ದಂತೆ. ಆದುದರಿಂದ ಪ್ರಕೃತಿಯ ಚೈತನ್ಯಗಳಿಗೆ ಹಾಗೂ ಪ್ರಕೃತಿಯಲ್ಲಿನ ಸಸ್ಯಸಂಕುಲಕ್ಕೆ ಸಾಮರಸ್ಯವಿದೆ.

ಈ ಸಾಮರಸ್ಯವು ಪ್ರಾಣಿಸಂಕುಲದಲ್ಲಿ ಇಲ್ಲ ಎನ್ನುವುದನ್ನು ಬೇಂದ್ರೆಯವರು ಮುಂದಿನ ನುಡಿಯಲ್ಲಿ ಹೇಳುತ್ತಾರೆ.

ಬಾಳಿನ ಕೊಳಲುಲಿ ಕೇಳುವವರೆಗೂ
ಕೇಳಲು ಕಿವಿಯಿಲ್ಲ
ಬೆಳದಿಂಗಳು ಬಿಸಿಲಾಡಿದರೇನು
ನಾಲಿಗೆ ಸವಿಯಿಲ್ಲ
ಜಗವು ಕಲ್ಲಿಗೂ ಕಡೆಗಾಗಿರುವುದು
ಜೀವವು ಕವಿಯಲ್ಲ

ಬಾಳಿನ ಕೊಳಲು ಎಂದರೆ ಬದುಕಿನಲ್ಲಿಯ ಸಾಮರಸ್ಯ ಈ ಕೊಳಲ ಧ್ವನಿಯನ್ನು ಕೇಳುವ ಒಲವು ಇಲ್ಲದಿದ್ದಾಗ ಕವಿಯು ಇದ್ದರೂ ಇಲ್ಲದಂತೆ ಸಕಲ ಜೀವಿಗಳಿಗೆ ಸುಖವನ್ನು ನೀಡುವ ಬೆಳದಿಂಗಳು ನಿಸರ್ಗದ ಅಪ್ಯಾಯಮಾನತೆಗೆ ಒಂದು ಉದಾಹರಣೆ. ನಾಲಿಗೆಯು ಸಂವೇದನೆಯನ್ನು ಕಳೆದುಕೊಂಡಾಗ ಎಂತಹ ತೀವ್ರರುಚಿಯನ್ನು ಅದು ಅರಿಯಲಾರದು. ಬೆಳದಿಂಗಳೇ ಆಗಲಿ ಬಿಸಿಲೇ ಆಗಲಿ ಅದರಿಂದ ಏನೂ ವ್ಯತ್ಯಾಸವಾಗದು. ಕವಿ ಎಂದರೆ ಸಂವೇದನಾಶೀಲ ಜೀವಿ. 'ಜೀವಿಯು ಕವಿಯಲ್ಲ' ಅಂದರೆ ಅವನು ಸಂವೇದನಾಶೂನ್ಯನಾಗಿದ್ದಾನೆ ಎಂದರ್ಥ. ಕೊಳಲು ನಾದವನ್ನು ಕೇಳಲಾರದ, ಬೆಳದಿಂಗಳಲ್ಲಿ ಸುಖಿಸಲಾಗರದ ಇಂತಹ ಜೀವಿಯ ಪಾಲಿಗೆ ಈ ಜಗತ್ತು ನಿರ್ಜೀವವಾದ ಕಲ್ಲಿನಂತೆಯೇ ಸರಿ.

ಈ ಸಂವೇದನಾಶೂನ್ಯ ಪ್ರಾಣಿಸಂಕುಲದಲ್ಲಿ ಶ್ರೇಣಿಕೃತ ಶೋಷಣೆ ಇದೆ. ಗಿಡುಗವು ಪಾರಿವಾಳವನ್ನು ಬೇಟೆಯಾಡುತ್ತಿದೆ. ಹಸು ಸಿಂಹಕ್ಕೆ ಸಿಹಿತುತ್ತಾಗಿದೆ. ಹದ್ದಿನ ಭಾಗಾದಿ ಎಂದರೆ ಹಾವು. ಅದು ಹದ್ದಿನ ಊಟವಾಗಿದೆ.

ಪಾರಿವಾಳಗಳ ಮೈಜೋಡು
ಗಿಡುಗದ ಮುಖಕೀಡು
ಆವಿಗೆ ದಿನ ದಿನವೂ ಕುತ್ತು
ಸಿಂಹಕೆ ಸವಿತುತ್ತು
ಮಲಸಂಬಂಧದ ಭಾಗದಿ
ಹದ್ದಿಗೆ ಹಳೆದಾರಿ

ಇಲ್ಲಿ ಒಂದು ಸಂದೇಶವಿದೆ. ಬಲಿಷ್ಠ ಜೀವಿಯು ದುರ್ಬಲ ಜೀವಿಯನ್ನು ಬೇಟೆಯಾಡುವುದು ಪ್ರಾಣಿಸಂಕುಲದ ವ್ಯವಸ್ಥೆಯಾಗಿದೆ. ಅದೇ ಪ್ರಕಾರ ಮಾನವ

ಜಗತ್ತಿನಲ್ಲಿಯೂ ಸಹ ಶೋಷಣೆ ನಡೆದೇ ಇದೆ. ಬಲಿಷ್ಠರು ದುರ್ಬಲರನ್ನೂ ಶೋಷಿಸುವ ಸಾಮಾಜಿಕ ಶೋಷಣೆ ನಿರಂತರವಾಗಿದೆ ಎನ್ನುವ ಚಿಮತನೆ ಬೇಂದ್ರೆಯವರದ್ದಾಗಿದೆ ಎಂಬುದು ವ್ಯಕ್ತವಾಗಿದೆ.

ಶಿಬಿ ದಿಲೀಪ ಜೀಮೂತವಾಹನರು
ಮಣ್ಣನು ಮುಕ್ಕಿದರು
ಸ್ವರ್ಗದೊಳಿದ್ದೂ ಸಂಶಯ ಬಂದಿತು
ಕಣ್ಗಳ ತಿಕ್ಕಿದರು
ತಮ್ಮ ನಾಡಿನಲ್ಲಿ ನಡೆದಿಹ ಲೀಲೆಯ
ನೋಡುತ ಬಿಕ್ಕಿದರು

ಶಿಬಿ, ದಿಲೀಪ, ಜೀಮೂತವಾಹನರು ಐತಿಹಾಸಿಕ ವ್ಯಕ್ತಿಗಳಾಗಿದ್ದು ಶ್ರೇಣಿಕೃತ ಶೋಷಣೆಯ ವಿರುದ್ಧ ಹೋರಾಡಿದವರು. ಇವರು ಪ್ರಾಚೀನ ಭಾರತದ ಆದರ್ಶ ಪುರುಷರು. ಇವರ ಆದರ್ಶಗಳು ನಮ್ಮ ನಾಡಿನಲ್ಲಿ ಈಗ ಮಾಯಾವಾಗಿವೆ. 'ಮಣ್ಣನ್ನು ಮುಕ್ಕಿದರು' ಎಂದು ಹೇಳಿದಾಗ ಈ ಆದರ್ಶ ಪುರುಷರು ಮರಣಹೊಂದಿದರು ಎಂದು ಹೇಳುತ್ತಲೇ ಅವರ ಆದರ್ಶಗಳೂ ಸಹ ಮಣ್ಣು ಮುಕ್ಕಿದವು ಎಂದು ಕವಿಯು ತನ್ನ ನೋವನ್ನು ಸೂಚಿಸುತ್ತಾನೆ. ಸ್ವರ್ಗಸ್ಥರಾದ ಅವರು ತಮ್ಮ ನಾಡಿನ ದುರಾವಸ್ಥೆಯನ್ನು ನೋಡಿ ವ್ಯಥೆಯಿಂದ ಕವಿಹೇಳುತ್ತಾನೆ. ಈ ಶ್ರೇಣಿಕೃತ ಸಮಾಜದಲ್ಲಿ ಶೋಷಣೆ ಎಂಬುವುದು ಎಂದಿಗೂ ಕೊನೆಯಾಗುವುದಿಲ್ಲ ಎಂದು ಕವಿ ತನ್ನ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ.

ಕಣ್ಣರಳು[೧]

ಕಣ್ಣರಳು ಗೀತೆಯನ್ನು ಬೇಂದ್ರೆಯವರು ಬೀಸುವ ಕಲ್ಲಿನ ಹಾಡಿನಲ್ಲಿ ಬರೆದಿದ್ದಾರೆ. ಕವನ ಓದಿದ ತಕ್ಷಣ ಸುತ್ತಮುತ್ತಲಿನ ಪ್ರಕೃತಿಯೊಡನೆ ಪ್ರೀತಿಯಿಂದ ಬೆರೆತ ಕವಿಯ ಚಿತ್ರಣ ಮನಸ್ಸಿನಲ್ಲಿ ಮೂಡುತ್ತದೆ.

ಈ ಕವನ ಸರ್ವಜ್ಞನ ತ್ರಿಪದಿಯೊಂದರ ಸಾಲುಗಳೊಂದಿಗೆ ಪ್ರಾರಂಭವಾಗಿದೆ.

"ಕಲ್ಲರಳಿ ಹೂವಾಗಿ, ಎಲ್ಲರಿಗೂ ಬೇಕಾಗಿ
ಮಲ್ಲಿಕಾರ್ಜುನನ ಶಿಬಿರಕ್ಕೆ ಬೆಳಕಾಗಿ
ಬಲ್ಲವರು ಹೇಳಿದ ಸರ್ವಜ್ಞ॥

---

೧. ಕಣ್ಣರಳು. – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೫೯.

ಸರ್ವಜ್ಞನ ಈ ಜನಪ್ರಿಯ ತ್ರಿಪದಿಯ ಅರ್ಥ ಸುಣ್ಣದ ಕಲ್ಲು. ಈ ಸುಣ್ಣವು ನೀರಿನಲ್ಲಿ ಕಲಸಿದಾಗ ಹೂವಿನಂತೆ ಅರಳುತ್ತದೆ. ಈ ಸುಣ್ಣವನ್ನು ತಾಂಬೂಲದ ಜೊತೆಯೂ ಸವಿಯುತ್ತಾರೆ. ಗುಡಿಗೋಪುರಗಳಿಗೂ ಹಚ್ಚಲು ಬಳಸುತ್ತಾರೆ.

ಬೇಂದ್ರೆಯವರು ತಮ್ಮ ತ್ರಿಪದಿಯನ್ನು ಹೀಗೆ ಬರೆಯುತ್ತಾರೆ.

ಕಲ್ಲರಳಿ ಹೂವಾಗಿ। ಕೆಮ್ಮಣ್ಣು ಮನೆ ತೊಳಗಿ
ನಮ್ಮ ನಿಮ್ಮನ್ನ ಬರಮಾಡಿ। ಮನಮನ
ಕಮ್ಮಗಿರಿಸ್ಯಾವ, ಕಲ್ಲರಳಿ॥

ಬೇಂದ್ರೆಯವರು ಕೆಮ್ಮಣ್ಣು ಸುಣ್ಣ, ಮನೆಯನ್ನಷ್ಟೇ ಸ್ವಚ್ಛಗೊಳಿಸುವುದಿಲ್ಲ. ಅದು ಅತಿಥಿಗಳನ್ನು ಸ್ವಾಗತಿಸುತ್ತದೆ. ಬೇಂದ್ರೆಯವರು ಬರೀ ಮನೆ ಸ್ವಚ್ಛವಾಗಿದ್ದರೆ ಸಾಕೆ? ಆ ಸ್ವಚ್ಛತೆ ಮನಸ್ಸನ್ನೂ ತುಂಬಬೇಕು, ನಮ್ಮನ್ನೆಲ್ಲಾ ಸುಖವಾಗಿರಿಸಬೇಕು. ಇದು ಮೊದಲ ನುಡಿಯ ಆಶಯ.

"ಮಣ್ಣುರಳಿ ಹೂವಾಗಿ। ನೂಲ ಬಟ್ಟೆಯಾಗಿ
ಮೈಮೈಗೆ ಧಾರದಾಧಾರಾ। ಗುಡಿಗುಡಿಗೆ
ಹೂ ಬತ್ತಿ, ಹೊತ್ತಿ, ಮಣ್ಣರಳಿ॥"

ಮಣ್ಣಿನಲ್ಲಿ ಬಿತ್ತಿದ ಹತ್ತಿ ಬೀಜ ಹೂವಾಗಿ, ನೂಲಾಗಿ, ಜನರಿಗೆ ದಾರದ ಆಧಾರವಾಗಿ ಉಪಯುಕ್ತವಾದರೆ, ಗುಡಿಯಲ್ಲಿ ದೇವರಿಗೆ ಎಣ್ಣೆ ಹೂಬತ್ತಿಯಾಗುವುದು. ಮಣ್ಣು ಪಂಚಮಹಾಭೂತಗಳಲ್ಲಿ ಮೊದಲನೆಯದು.

"ನೀರರಳಿ ತಾವರಿ। ಮಿನಮಿನ ಮೀನಕ್ಕ
ಬೆಳಕುಂಡು ಬಾಳಿರೆನತಾವ। ಹಗಳಿರುಳು
ಬೆಳಕನುಣಸ್ಯಾವ ನೀರರಳಿ॥"

ಪಂಚಭೂತಗಳಲ್ಲಿ ಎರಡನೆಯದು ನೀರು. ನೀರು ಬೆಳ್ತಾವರೆಯಾಗಿ, ಮೀನುಗಳಿಗೆ ಬೆಳಕು ನೀಡುತ್ತದೆ. ಈ ಮಹಾಭೂತ ಅರಳಬೇಕಾದ ಪರಿಯನ್ನು ಕವಿ ಇಲ್ಲಿ ನೆನೆಯುತ್ತಾರೆ.

ತೇಜಸ್ಸು ಮಹಾಪಂಚಭೂತಗಳಲ್ಲಿ ಮೂರನೆಯದು. ಜಗತ್ತಿಗೆ ತೇಜಸ್ಸು ಸೂರ್ಯನಿಂದ.

"ದಿಕ್ಕರಳಿ ಬೆಳಕಾಗಿ। ನೆರಳರಳಿ ಇರುಳಾಗಿ
ನಿದ್ದಿ ಎಚ್ಚರಕು ತಿರುಳಾಗಿ। ಶ್ರೀ ಶೈಲಾ
ತಿರುಮಲೆಗೂ ಪಂಜು, ಬಾನರಳಿ॥"

ಬೇಂದ್ರೆಯವರ ಕಲ್ಪನೆಯಲ್ಲಿ ಸೂರ್ಯೋದಯ ಎಂದರೆ ದಿಕ್ಕು ಅರಳುವುದು ಎಂದು ಬಣ್ಣಿಸಿದ್ದಾರೆ. ಅದರಂತೆಯೇ ನೆರಳೇ ಅರಳಿ ಇರುಳಾಗುತ್ತದೆ. ಶ್ರೀಶೈಲದಲ್ಲಿರುವ ಶಿವ, ತಿರುಮಲೆಯ ವೆಂಕಟೇಶ, ಈ ಎರಡೂ ಬೆಟ್ಟಗಲಿಗೂ ಪಂಜಿನ ಬೆಳಕು ಸಿಗುವುದು ಬಾನು ಅರಳುವುದರಿಂದ ಅಂದರೆ ಚಂದ್ರ ಹಾಗೂ ತಾರೆಗಳ ಉದಯದಿಂದ. ಈ ರೀತಿಯಾಗಿ ತೇಜಸ್ಸು ಎನ್ನುವ ಮೂರನೇ ಮಹಾಭೂತದ ಜೊತೆಗೆ ನಾಲ್ಕನೆಯ ಮಹಾಭೂತವಾದ ಆಕಾಶವನ್ನೂ ಬಣ್ಣಿಸಿದ್ದಾರೆ.

ಗಾಳಿಗಾಳಿಗೂ ಮಥನ। ಆಗಾನ ಈತಾನ
ಮನವರಳಿ ಮರಳು ಆಗ್ಯಾವ। ತದ್ಧ್ಯಾನಾ
ಸದ್ಧ್ಯಾನ, ಮುಕ್ತಿ ಮನವರಳಿ॥

ಈ ನುಡಿಯಲ್ಲಿ ಐದನೇ ಮಹಾಭೂತದ ವಾಯುವಿನ ವರ್ಣನೆ ಇದೆ. ಶಬ್ಧ ಹುಟ್ಟುವುದು ವಾಯು ಅನ್ನುವ ಮಾಧ್ಯಮದಲ್ಲಿ ತಾನೇ? ಆದುದರಿಂದ ಗಾಳಿಯ ಮಂಥನದಿಂದ ಹುಟ್ಟಿದ ಆ ಗಾನದಿಂದ ಮನುಷ್ಯ ಅರಳಿ, ಮರುಳಾಗಿದೆ. ಇದು ಧ್ಯಾನದಲ್ಲಿ ಮನಸ್ಸನ್ನು ಮುಳುಗಿಸಿ, ಮುಕ್ತಿಯ ಕಡೆಗೆ ಕರೆದೊಯ್ಯುತ್ತದೆ.

ಈ ರೀತಿ ಪಂಚಭೂತಗಳಿಂದ ಜನ್ಮಪಡೆದ ಈ ಜೀವ ತಾನೂ ಸಹ ಉತ್ಸುಕವಾದ ವಿಧದಲ್ಲಿ ನಡೆಯುತ್ತದೆ. ಅಂದರೆ ಏಕಾಂಗಿಯಾಗಿ ಸಂಸಾರವನ್ನು ನಡೆಸುತ್ತಾ ತಾವು ಅರಳುವುದರಿಂದ ನಮ್ಮ ಗುಂಪು ಅರಳುತ್ತದೆ. ತೊಟ್ಟಿಲಲ್ಲಿದ್ದ ಕೂಸು ಅರಳುತ್ತದೆ.

"ಬೀಸಿದರ ಕಾಳರಳಿ। ಕಾಸಿದರ ಅನ್ನರಳಿ
ನುರುಸಿ ನುರಿಸಿದರ ಕವಳರಳಿ। ಎದಿಯರಳಿ
ಹಾಲು ತೊರೆದಾವ, ಮಗುವರಳಿ॥"

ಆಹಾರಕ್ಕಾಗಿ ಬೇಕಾದ ಕಾಳನ್ನು ಬೀಸಿದಾಗ ಅದು ಕೊರಗುವುದಿಲ್ಲ ಅರಳುತ್ತದೆ. ಕಾಸಿದ್ದಾಗ ಅನ್ನವಾಗುತ್ತದೆ. ಈ ಉತ್ಪಾದನೆ ಇರುವುದು ಕ್ರಮವಿಕಾಸವೇ ಹೊರತು ಹಿಂಸೆಯಲ್ಲ. ಹೀಗೆ ಅರಳಿದ ಕವಳವು ಮಗುವಿಗೆ ಹಾಲಾಗಿ ಬರುತ್ತದೆ. ಕೊನೆಯ ನುಡಿಯಲ್ಲಿ,

"ಶುದ್ಧಬ್ರಹ್ಮವು ಅರಳಿ। ಶಬಲ ಬ್ರಹ್ಮದ ಸರಣ
ಸರಿಗಮಪದನಿ ಅಂದಾವ, ಧನಿಯರಳಿ
ಅಂತರಂಗವೇ ಅರಳ್ಯಾವ ಅರಳರಳಿ॥"

ಈ ಕೊನೆಯ ನುಡಿಯನ್ನು, ಅರ್ಥವನ್ನು ಗಮನಿಸಿದರೆ ಮನುಷ್ಯನ ಸೂಕ್ಷ್ಮ ಶರೀರದಲ್ಲಿರುವುದು ಪಂಚಭೂತಗಳ ಶಕ್ತಿ ಎಂಬುದನ್ನು ಕವಿ ಬಣ್ಣಿಸಿದ್ದಾನೆ.

ಸಖೀಗೀತ:[೧]

ಸಖೀಗೀತ ಕವನದಲ್ಲಿ ಬೇಂದ್ರೆಯವರು ಪ್ರಕೃತಿ ವರ್ಣನೆಯನ್ನು ಮನೋಹರವಾಗಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ನಾಯಕ–ನಾಯಕಿಯರ ಪಾತ್ರಗಳು ನೇರವಾಗಿ ಇಲ್ಲದಿರುವುದರಿಂದ ಈ ಕವಿತೆಯನ್ನು "ಪ್ರಕೃತಿ ವರ್ಣನೆ" ಎಂದೇ ತಿಳಿಯಲಾಗಿದೆ.

ಕವಿ ಬೇಂದ್ರೆಯವರಿಗೆ ಆಗತಾನೆ ವಿವಾಹವಾಗಿದೆ. ಅವರ ಚಿಕ್ಕಪ್ಪ ಸಾಧನಕೇರಿಯಲ್ಲಿ ಒಂದು ಮನೆಯನ್ನು ಉಡುಗೊರೆಯಾಗಿ ನೀಡಿರುತ್ತಾರೆ. ಈ ಒಂದು ಸಂದರ್ಭವನ್ನು ಸಖೀಗೀತ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ.

"ಹೊಸಮನೆಯ ಹೊಸ ಸೃಷ್ಟಿ ಈ ಸಂಸಾರಕ್ಕೆ ತನ್ನ ಸಂಸ್ಕಾರ ಕೊಡುವುದು" ಆ ಸಂಸ್ಕಾರದ ಸ್ವರೂಪವನ್ನು ಪ್ರಕೃತಿ ವರ್ಣನೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಎಳ್ಳ ಅಮಾಸಿಗೆ ಎಳ್ಳಷ್ಟು, ಅವರೆಯ
ಕಾಳಷ್ಟು ಬೆಳೆದಿತ್ತು ಅವರಾತ್ರಿಗೆ
ಬಿಸಿಲಲ್ಲಿ, ಬೇಯಿಸುವ ಬೆಂಕಿಯು! ಬೇಗೆಯು
ಶಿವಶಿವ ಎನಿಸಿತ್ತು ಶಿವರಾತ್ರಿಗೆ

ಕವಿ ದ.ರಾ.ಬೇಂದ್ರೆಯವರು ಪ್ರಕೃತಿಯಲ್ಲಿ ಏರುತ್ತಿದ್ದ ಬಿಸಿಲಿನಿಂದ ವರ್ಷದ ಆರಂಭ ಪ್ರಾರಂಭವಾಗುತ್ತದೆ. ವರ್ಷದ ಆರಂಭದ ಋತು ಚಕ್ರದಲ್ಲಿ ಬೇಸಿಗೆ ಕಾಲ ಪ್ರಾರಂಭವಾಗುತ್ತಿದ್ದಂತೆಯೇ ಎಳ್ಳ ಅಮವಾಸೆ ದಿನ ಬರುತ್ತದೆ. ಆ ಎಳ್ಳ ಅಮವಾಸ್ಯೆಯಲ್ಲಿ ಬಿಸಿಲಿನ ಝಳ ಅಂದರೆ ತಾಪ ಹೆಚ್ಚಾಗುತ್ತದೆ. ಬಿಸಿಲು ಯಾವುದೇ ಜೀವಿಯ ದೇಹವನ್ನಷ್ಟೇ ಅಲ್ಲದೆ ಪ್ರಾಣವನ್ನೂ ಕೂಡ ನಿತ್ರಾಣ ಮಾಡುತ್ತದೆ ಎಂಬುದನ್ನು ದ.ರಾ.ಬೇಂದ್ರೆಯವರು ಬಣ್ಣನೆ ಮಾಡಿದ್ದಾರೆ. ಬೇಸಿಗೆ ಬಿಸಿಲಿನ ತಾಪ ತಡೆಯಲಾರದೆ ಯಾವುದೇ ಜೀವಿಗೂಸಹ ಮನಸ್ಸಿನ ಅಂತರಾಳದಲ್ಲಿ ಶಿವಾಶಿವ

೧. ಸಖೀಗೀತ – ಔದುಂಬರ ಗಾಥೆ, ಸಂಪುಟ. ೨, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೯೮–೧೦೩.

ಬೇಸಿಗೆಯ ಬೇಗೆಯನ್ನು ನೀಗಿಸು, ಎನ್ನುವುದು ಬೇಂದ್ರೆಯವರ ಅಂತರಾಳದ ಭಾವನಾತ್ಮಕ ಕವಿತೆಯಲ್ಲಿ ಚಿತ್ರಿಸಿದ್ದಾರೆ. ಬೇಂದ್ರೆಯವರ ಬಿಸಿಲಿನ ಝಳವನ್ನು ನೆನಪಿಸಿಕೊಂಡರೆ ಅವರ ಅನುಭವದಂತೆ ಸತ್ಯಾರ್ಥವಾಗಿ ಬೇಸಿಗೆ ಕಾಲ ನಿದರ್ಶನವಾಗಿದೆ. ಹಾಗೆಯೇ

ಕಾಮನ ಸುಟ್ಟಿತ್ತು ಬಾನೆದೆ ಮುಟ್ಟಿತ್ತು
ಸುರಿಬೆವರು ಹುಟ್ಟಿತ್ತು ಜನದೆದೆಗೆ
ಪಾನಕವೆಂದಿತು ಪ್ರಾಣ ನಿತ್ರಾಣಿಸಿ
ಸ್ನಾನಕೆ ಹಸಿದಿತ್ತು ಮೈಗೆಗೆ

ಬೇಂದ್ರೆಯವರ ಕವನದಲ್ಲಿ ಬಿಸಿಲಿನ ತಾಪದ ಬಗ್ಗೆ ಹೇಳುವುದಾದರೆ ಯಾವುದೇ ವ್ಯಕ್ತಿಗೆ ಕಾಮನಗಳೆಲ್ಲಾ ಸುಟ್ಟಂತಾಗಿ ಬಾನಿನೆಡೆಗೆ ಮುಖಮಾಡಿ ದೇವರೆ ಬಿಸಿಲಿನ ತಾಪವನ್ನು ಕಡಿಮೆಮಾಡು, ಜನರ ಮೈಯಲ್ಲಿ ಬೆವರು ಹೆಚ್ಚಾಗಿ ದೇಹವನ್ನು ತಣಿಸಲು ತಂಪಾದ ಪಾನಕ ಬೇಕು ಎನಿಸುತ್ತದೆ. ಬಿಸಿಲಿನ ಬೇಗೆಯನ್ನು ತಾಳಲಾರದೆ ಜನರು ನಿತ್ರಾಣರಾಗುತ್ತಾರೆ ಎನ್ನುವುದನ್ನು ಕವಿ ಬಿಂಬಿಸಿದ್ದಾರೆ.

ಬೇಸಿಗೆ ಕಾಲದಲ್ಲಿ ತಂಪಾಗಿ ಇರಲು ಜನರು ಬಯಸುತ್ತಾರೆ. ಆದರೆ ಬಿಸಿಲಿನ ಕಾಲವಾದ್ದರಿಂದ ಝಳವನ್ನು ಕಡಿಮೆ ಮಾಡಲು, ವಿಶ್ರಾಂತಿಗಾಗಿ ಯಾವು ಕೆಲಸವನ್ನು ಮಾಡಬೇಕೆಂದು ಈ ಕವನದಲ್ಲಿ ಅರಿಯೋಣ.

ಬೇಸಿಗೆಯಟ್ಟಲು ಬೀಸಣಿಗೆ ಬೀಸಾಡಿ
ಮರುಳಾಟದಲಿ ತೊಳಲುತಿರೆ
ಜೋಲ್ದವೆ ಇಳಿಸುತ ಅರನಿದ್ದೆ ಮರೆಯಲ್ಲಿ
ಹಗಲುಗನಸಿಗೆ ಜೀವ ಬಳಲುತಿರೆ

ಬೇಸಿಗೆಕಾಲದಲ್ಲಿ ಸೆಕೆಯನ್ನು ನಿವಾರಿಸಿಕೊಳ್ಳಲು ಜನರು ಬೀಸಣಿಗೆಯನ್ನು ಉಪಯೋಗಿಸುತ್ತಾರೆ. ಬೀಸಣಿಗೆಯಿಂದ ಬೀಸಿಕೊಳ್ಳುತ್ತಾ ನಿದ್ರೆ ಹೋದ ಜನರು ಸಂಪೂರ್ಣವಾಗಿ ನಿದ್ರೆ ಬಾರದೆ ಅರೆನಿದ್ರೆ ಮಾಡುತ್ತಾ ಕಣ್ಣುಮುಚ್ಚುತ್ತಾರೆ. ಹಾಗೆಯೇ ಹಗಲುಗನಸು ಕಾಣುವುದು ಕೂಡ ಪದ್ಯದ ಭಾವಾರ್ಥವಾಗಿದೆ.

ಬಿಸಿಲಿನ ತಾಪದಿಂದ ಜನರಿಗೆ ವಿಶ್ರಾಂತಿ ಸಿಗದೆ ತಂಪನ್ನು ಬಯಸುತ್ತಾರೆ.

ಮಣ್ಣೆದೆಯಲಿ ಝುರಿಸುವ ನೀರ ಸೆಲೆಯಂತೆ
ಮಾಂಸದ ತೊರೆಯುವ ಹಾಲಿನೊಲು
ಬಿಸಿಲೆದೆಯನು ಬಿರಿದು ಬಯಸಿದ ಸುಳಿಗಾಳಿ
ಬಳಬಳ ಮೈಬಳಸಿ ಸುತ್ತಾಡಿತು.

[illegible]

ಮಾನವನ ಸ್ಥಿತಿ ಹೇಗಿದೆ ಎಂಬುದಕ್ಕೆ ಬಾವಿ ಅಥವಾ ಹೊಳೆಯಲ್ಲಿ ಮರಳನ್ನು ತೆಗೆಯುತ್ತಾ ತೆಗೆಯುತ್ತಾ ಹೋದಂತೆ ನೀರು ಝುರಿದು ಬರುವಂತೆ ಬೇಸಿಗೆ ಕಾಲದಲ್ಲಿ ಮಾನವನ ದೇಹದಲ್ಲೂ ಕೂಡ ಬೆವರಿನ ಝುರಿ ಹರಿಯುತ್ತದೆ. ಬೇಸಿಗೆ ಕಾಲದಲ್ಲಿ ತಂಪಾದ ಗಾಳಿ ಬೇಕೆನಿಸುತ್ತದೆ. ಬೇಂದ್ರೆಯವರು ಮಾಂಸದ ಜೊತೆಯಲ್ಲಿ ಹಾಲು ಉತ್ಪತ್ತಿಯಾದರೂ ಕೂಡ ರಕ್ತದ ಜೊತೆ ಹಾಲು ಬೆರೆಯದೆ ಇರುವುದು. ಹಾಲು ಶ್ವೇತವರ್ಣದಲ್ಲಿ ಬರುವುದೂ ಕೂಡ ಬೇಸಿಗೆ ಕಾಲದಲ್ಲಿ ಸುಳಿಗಾಳಿ ಬೀಸಿ ದೇಹವನ್ನು ತಂಪು ಮಾಡುವಂತೆ ಎಂದು ವರ್ಣಿಸಿದ್ದಾರೆ.

ಗಾಳಿ ಸುಳಿದ ಮೇಲೆ ಮೈಗೆ ತಂಪೆನಿಸುತ್ತದೆ ಹಾಗೂ ನೆರಳು ಬೇಕೆನಿಸುತ್ತದೆ.

ಬೇವೇನು ಮಾವೇನು ನರಗಂಪ ನೆರಳಿಗೆ
ನಿದ್ರಾಂಗನೆ ಮನವೆಳೆಯುವಳು
ಚಂದನ ಗಂಧವ ಬೇಡಿತ್ತು ಕೊರಳೆದೆ
ನಂದನ ನೆನೆಸಿತ್ತು ಉಸಿರಾಟವು

ಈ ಮೇಲ್ಕಂಡ ಕವನವು ಬೇಸಿಗೆಯಲ್ಲಿ ತಂಪನ್ನೂ, ನೆರಳನ್ನೂ ಕೊಡಲು ಮಾವಿನ ಮರವಾದರೇನು? ಬೇವಿನ ಮರವಾದರೇನು? ನಮಗೆ ಬೇಕಾಗಿರುವುದು ನೆರಳು. ವಿಶ್ರಾಂತಿ ಪಡೆಯಲು ಗಂಧದ ಮರ ಬೇಕೆನಿಸುವುದಿಲ್ಲ. ಯಾವುದೇ ಮರವಾದರೂ ಸರಿ. ನಮಗೆ ಬೇಕಾಗಿರುವ ಒಳ್ಳೆಯ ಗಾಳಿ, ಹಾಗೂ ನೆರಳು ಎಂದು ಕವಿ ಬಣ್ಣಿಸಿದ್ದಾರೆ.

ಉಸಿರಾಟಕ್ಕೆ ಗಾಳಿ, ವಿಶ್ರಾಂತಿಗಾಗಿ ನೆರಳು ಸಿಕ್ಕಿದರೆ ಸಾಕು ಎನ್ನುವ ಕವಿಯ ಮುಂದಿನ ಕವನ

ಬಾಳದ ತಂಪಿನ ಕಪ್ಪುರ ಗಂಪಿನ
ನೀರೆ ಜೀವನವೀಗ ಎನಿಸುತಿದೇ

ಕವಿ ಬೇಂದ್ರೆಯವರು ಮರಗಳಿಂದ ನಮಗೆ ತಂಪು ಸಿಗುತ್ತದೆ. ತೆಂಗಿನ ಮರದಿಂದ ಸಿಗುವ ಎಳೆನೀರು ದೇಹಕ್ಕೆ, ಜೀವನಕ್ಕೆ ತಂಪು ಎಂದು ವರ್ಣಿಸಿದ್ದಾರೆ. ಹಾಗೆಯೇ ತಂಪು ಎಷ್ಟು ಮುಖ್ಯವೋ। ಹಾಗೆ ನೀರು ಕೂಡ ಜೀವನಾಧಾರವಾಗಿದೆ.

ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ।

ಹೀಗೆ ಹೇಳುತ್ತಾ

ಹೋಳಿ ಹುಣ್ಣಿವೆ ಬಿಸಿಲು ಕಾಮನ ಸುಡಲೆಂದು
ತೆರೆದಿದ್ದ ಉರಿಗಣ್ಣ ತೆರದಲಿರೆ
ಬೀಳುವೆಯೊಳಗಿಂದ ಬೆಳಕೆದ್ದು ಬಂದಂತೆ
ಬಾಳುವೆಯ ಸುಳಿಯೊಂದು ಸೀಳಿ ಬರೆ

ಈ ಮೇಲ್ಕಂಡ ಕವನದಿಂದ ಹೋಳಿ ಹುಣ್ಣಿಮೆ ನಂತರ ವೈಶಾಖದವರೆಗೂ ಕೂಡ ಬಿಸಿಲಿನ ಝಳ ಉರಿಯುತ್ತದೆ. ಆಕಾಶದಲ್ಲಿ ಮಿಂಚು ಕಾಣಿಸಿದಂತೆ, ಶಿವ ಮೂರನೇ ಕಣ್ಣನ್ನು ಬಿಟ್ಟಾಗ ಬೆಂಕಿಯು ಸುಳಿದಾಡಿದಮತೆ ಬಿಸಿಲಿನ ಝಳವಿರುತ್ತದೆ ಬಾಳುವೆಯ ಸುಳಿಯೊಂದು ಸೀಳಿ ಬರೆ ಎಂದು ಕವಿ ವರ್ಣಿಸಿದ್ದಾರೆ.

ಕವಿಯು ತನ್ನ ಮಡದಿಯ ಬಗ್ಗೆ ವರ್ಣಿಸುತ್ತಾ

ಸತಿಯರ ಹೃದಯಸ್ಥ ಸುಪ್ತರತಿಯು ತಾನು
ತಿಳಿದೆದ್ದನಂಗನಾಲಿಂಗಿಸಿರೆ
ಮತಿ ಮಥನದಿಂದಾದ ಮನ್ಮಥನ ವಿರುದ್ಧ
ಉಷೆಯ ಕನಸಿನ ಕೂಡತಿರೆ

ಬೇಂದ್ರೆಯವರು ಮಾನವರಿಗೆ, ಜೀವಿಗಳಿಗೆ, ಮರಗಿಡಗಳು, ಗಾಳಿ ನೀರು ಎಷ್ಟು ಆಶ್ರಯವೋ ಅಷ್ಟೇ ಸತಿಸುತರು ಕೂಡ ಜೀವನದಲ್ಲಿ ತಂಪೆರೆಯುವ ಗಾಳಿಮಳೆ ಮತ್ತು ಆಶ್ರಯನೀಡುವ ಮರವಿದ್ದಂತೆ ಎಂದು ವಿವರಿಸಿದ್ದಾರೆ.

ಮಾವೆಲ್ಲಾ ಕಾತಿತ್ತು ಮಲ್ಲಿಗೆ ಹೂತಿತ್ತು
ಕೋಗಿಲೆ ಕೂತಿತ್ತು ಕಾನದೊಲೆ
ಕಾವಿನ ಕಾಹುರಕೆ ಸುಗ್ಗಿಯ ನೇವುರವೊ
ಮೈ ಜುಮ್ಮು ಝುಮುಜುಮ ಎನ್ನುತ್ತಿರೆ

ಪ್ರಕೃತಿಯಲ್ಲಿ ಮಲ್ಲಿಗೆ ಪುಷ್ಪಬಿಟ್ಟು, ಮಾವು ಫಲಕೊಟ್ಟು, ಕೋಗಿಲೆ ಇಂಪಾಗಿ ಕೂಗುವುದರಿಂದ ಪ್ರಕೃತಿ ಸುಂದರವಾಗಿ ಕಾಣುತ್ತದೆ.

ದಿಕ್ಕುದಿಕ್ಕಿಗೆ ನುಗ್ಗಿ ಪಂಚಮದಿಂಚರ
ಮುತ್ತಿಟ್ಟು ಮರುಮರುಳಿ ಬರುತಲಿರೆ
ಮಲಮಲ ಎನ್ನುವ ಮಲ್ಲಿಗೆಯಂದದಿ

ಕೋಗಿಲೆಯ ಪಂಚಸ್ವರವು ದಿಕ್ಕುದಿಕ್ಕುಗಳಿಗೂ ಇಂಪಾದ ಧ್ವನಿಯನ್ನು ಮುಟ್ಟಿಸುವಂತೆ ಮಲ್ಲಿಗೆ ಹೂವಿನ ಸುವಾಸನೆಯೂ ಕೂಡ ಪ್ರಕ್ರತಿಯಲ್ಲಿ ಎಲ್ಲಾ ದಿಕ್ಕುಗಳಿಗೂ ಹರಡುತ್ತವೆ ಎಂದು ವರ್ಣಿಸಿದ್ದಾರೆ.

ಆಷಾಡದ ಮುಗಿಲು ಬೀಸಾಡಿ ಬಂದವು
ಈ ಸಾಡಿ ಬಂದಂಥ ಆನೆಗಳೇ
ರೋಷದ ತೋಷದ ಬೆಡಗು ಭಿನ್ನಾಣದ
ಬೀರುವ ಬಿಂಕದ ಮರೆಯುವೊಲೇ

ಎಚ್ಚೆತ್ತ ಕಾಮಗೆ ಪಚ್ಚೆಯ ಪಸದನ
ಕಾಣಿಕೆಗೊಡುವಂತೆ ನೆಲವೆಲ್ಲವೆ
ಹಚ್ಚ ಹಸುರಾಯಿತ್ತೊ ಹುಚ್ಚು ಹಸಿರಾಯಿತ್ತೊ
ಹುಚ್ಚು ಹಿಡಿಸಿತು ನೋಡೆ ಲೋಚನಕೆ

ಆಷಾಡಮಾಸದಲ್ಲಿ ಬೀಸುವ ಗಾಳಿ ಇಡೀ ಪ್ರಕೃತಿಯನ್ನೇ ತಂಪೆನಿಸುತ್ತದೆ. ನೀರಿನಲ್ಲಿ ಈಸಾಡಿ ಬಂದಂಥ ಆನೆಗಳಿಗೂ ರೋಷದ ತೋಷದ ಬೆಡಗು ಭಿನ್ನಾಣದಲ್ಲಿ ಮೆರೆಯುವಂತೆ ಈ ಮಾಸವು ತಂಪೆನಿಸುತ್ತದೆ ಎಂದು ಕವಿ ವರ್ಣಿಸಿದ್ದಾರೆ.

ಬಂದಿತು ಶ್ರಾವಣ ಹೃದಯ ವಿದ್ರಾವಣ
ಕಾನನ ಕಾವಣವಾಗುತಿರೆ
ಪಡುಗಾಳಿ ಹಾಡಿತು ಗಿಡಬಳ್ಳಿ ಆಡಿತು
ಹೊಲ-ಹುಲ್ಲು ನೋಡಿತು ಲೀಲೆಯೊಳೆ

ಕವಿಯು ಶ್ರಾವಣ ಮಾಸದ ವೇಳೆಗೆ ಕಾಡಿನಿಂದ ಬೀಸುವ ಗಾಳಿಯಿಂದ ಪ್ರತಿಯೊಂದು ಜೀವಿಯ ಹೃದಯ ನಡುಗಿಸುವಂತಹ ವಾತಾವರಣವನ್ನು ಪ್ರಕೃತಿ ಸೃಷ್ಟಿಸುತ್ತದೆ. ಈ ಶ್ರಾವಣಮಾಸದಲ್ಲಿ ಹೊಲದಲ್ಲಿನ ಫಸಲುಗಳು, ಗಿಡಮರಗಳು ಆನಂದವಾಗಿ ಬೆಳೆದು ಒಳ್ಳೆಯ ಗಾಳಿಯನ್ನು ಬಿಡುತ್ತವೆ ಎಂದು ವರ್ಣಿಸಿದ್ದಾರೆ.

ನಿರಕ್ಕಿ, ಬಾನಕ್ಕಿ, ಬೆಳ್ಳಕ್ಕಿ ಹಾಲಾಗಿ
ಸಾಲಾಗಿ ಮೇಲಾಗಿ ಹಾರುತಿರೆ
ಮೀನ್ಗಳು ಮೀಮಂಬುಲಿಗ ಮಿಂಚುಹುಳ ಮಿಂಚಿನ
ಬಳಗವೊ ಎಂಬಂತೆ ತೊಳತೊಳಗಿರೆ

ಶ್ರಾವಣ ಮಾಸದ ವೇಳೆಯಲ್ಲಿ ತಂಪಾದ ಗಾಳಿ ಬೀಸುವುದರಿಂದ ಎಲ್ಲಾ ಹಕ್ಕಿಗಳು ಸಾಲಾಗಿ ಹಾರಾಡುತ್ತವೆ. ಮೀನು, ಮೊಸಳೆ, ಮಿಂಚುಹುಳುಗಳ ಬಳಗವೂ ಕೂಡ ಪ್ರಕೃತಿಯಲ್ಲಿ ಸಂತೋಷವಾಗಿ ಜೀವಿಸಲು ಸಾಧ್ಯ ಎಂದು ವರ್ಣಿಸಿ ಮುಂದಿನ ಸಾಲುಗಳನ್ನು ತಿಳಿಸುತ್ತವೆ.

ಮೋಡದ ದುರ್ದಿನಕೆ ಮಾರ್ದನಿ ಬರಲಿಲ್ಲ
ಎದೆಯೆಲ್ಲ ಘನನೀಲ ವ್ಯಾಪಿಸಿರೆ
ಗುಡುಗಿಗೆ ನಡುಗದೆ ಅಡಗಿದ ದುಂದುಭಿ
ರವವೊಂದು ಒಳಗಿವಿ ಕೇಳುತಿರೆ
ಗಕ್ಕನೆ ನಿಲ್ಲಲು, ಹೌಹಾರಿ ಹಗಲಲ್ಲೆ
ಇರುಳಾಗಿ, ಧ್ವನಿಯೊಂದು ಏಳುತಿದೆ.

ಪ್ರಕ್ರತಿಯಲ್ಲಾಗುವ ಬದಲಾವಣೆಯಿಂದ ಆಕಾಶವೆಲ್ಲಾ ದಟ್ಟನೀಲಿಯಿಂದ ಕೂಡಿದ್ದು, ಬಾನಿನಲ್ಲಿ ರವಿಯು ಮೋಡದಲ್ಲಿ ಮರೆಯಾಗಿರುವನು. ಗುಡುಗಿನ ಶಬ್ಧಕ್ಕೆ ಹಗಲು ಇರುಳು ಎನ್ನದೆ ಪ್ರಕೃತಿ ಇರುವುದನ್ನು ಕವಿ ದತ್ತಾತ್ರೇಯರು ವರ್ಣಿಸಿದ್ದಾರೆ.

ಆಷಾಡಮಾಸ ಮುಗಿದು ಕಾರ್ತಿಕಮಾಸ ಪ್ರಾರಂಭವಾಗುತ್ತದೆ.

ವರ್ಷಾಕಾಲದ ಭಾಷೆಗೆ ಭಾಷ್ಯರೆ
ಬರೆದ ವಾರ್ತಿಕದಂತೆ ಕಾರ್ತಿಕವು
ತಿರುಳೆತ್ತಿ ಹುರುಳೆತ್ತಿ ತೆನೆತೆನೆ ತೋರುವದು
ಬೆಂಡಿಗು ಸವಿಯಿತ್ತು ನೆಲಹೊಲವು

ಕಾರ್ತಿಕಮಾಸದ ವೇಳೆಗೆ ಪ್ರಕೃತಿಯಲ್ಲಿನ ಫಸಲುಗಳು ಹಸುರಾಗಿ ತೆನೆಯನ್ನು ಹೊತ್ತು ನಿಂತಿರುವ ಬೆಳೆಗಳನ್ನು ಹೊಲಗಳಲ್ಲಿ ಕಾಣುತ್ತೇವೆ. ನೆಲ, ಹೊಲವು ತಂಪಾಗಿರುವಾಗ

ಬರ್ಚಿಗಾರರ ಬಲವೆ ಬೀಡಾರ ಬಿಟ್ಟಂತೆ
ಒಟ್ಟಿಲದಲಿ ಜೋಳದ ನೆಲವು
ಆಳೆತ್ತರವಾಗಿ ನಿಂತಿದೆ ಕಾಳಾಗಿ
ಬಯಲಿಗೆ ತಾನರಸನೆನ್ನುವೊಲು

ಪ್ರಕೃತಿಯಲ್ಲಿ ಮಳೆಗಾಲವು ರೈತರಿಗೆ ಕೊಟ್ಟಿರುವ ಮಾತು ಎನ್ನುವ ಹಾಗೆ ಹೊಲಗದ್ದೆಗಳಲ್ಲಿ ಜೋಳದ ದಂಟು ಅಂದರೆ ತೆನೆ ರಸತುಂಬಿ ನಿಂತಿವೆ. ಭತ್ತದ

ಪೈರುಗಳು ತೆನೆತುಂಬಿ ತೂಗುತ್ತಾ ಬೀಡು ಬಿಟ್ಟ ಸೈನಿಕರು ಈಟಿ ಹಿಡಿದು ನಿಂತಿರುವ ಹಾಗೆ ಹೊಲಗಳಲ್ಲಿ ಫಲ ಬೆಳೆದಿರುವುದನ್ನು ಕವಿ ಚಿತ್ರಿಸಿದ್ದಾರೆ.

ಕೃತ್ತಿಕೆಯ ಮಣಿಹಾರ ಕೊರಳಿಂದ ಬಿಡಿಸಲು
ಬಿಳಿಮುಗಿಲು ಬೆಡಗನ್ನೆ ಇರುಳುಟ್ಟಿಸಿತು
ಮೃಗಶಿರ ಮಂಚಕೆ ಚಂದಿರ ಬರುವಾಗ
ಚಂದ್ರಿಕೆಯ ವಾತ್ಸಲ್ಯ ತೊರೆಬಿಟ್ಟಿತ್ತು.

ಕವಿಯು ಚಂದ್ರನ ಬಗ್ಗೆ ವರ್ಣಿಸುತ್ತಾನೆ. ಚಂದ್ರ ಕೃತ್ತಿಕಾರಾಶಿಯಿಂದ ಮೃಗಶಿರಾ ರಾಶಿಗೆ ಬರುವ ಸಮಯ, ಕೃತ್ತಿಕಾರಾಶಿ ಚಂದ್ರನಿಗೆ ಕೊರಳ ಹಾರದ ಹಾಗಾದರೆ, ಮೃಗಶಿರ ರಾಶಿ ಚಂದ್ರನಿಗೆ ಮಂಚದ ಹಾಗಿತ್ತು. ರಾತ್ರಿಯ ವೇಳೆ ಆಕಾಶವು ಬಿಳಿ ಮೋಡಗಳಿಂದ ತುಂಬಿರುವುದು. ಚಂದ್ರನು ಮೃಗಶಿರದ ಮಂಚದಲ್ಲಿ ಚಂದ್ರಿಕೆಯ ವಾತ್ಸಲ್ಯದಿಂದ ಇರುವುದನ್ನು ಕಾಣಬಹುದು ಎಂದು ಚಿತ್ರಿಸುತ್ತಾ

ಲೋಕದ ಅನ್ನವು ಲೋಕದಂತೆಯೇ ತಾನು
ಹಂಪುಗಾಲದ ಬೆಳೆಯು ಹಾಲುಂಡಿತ್ತು
ಬಾಂದಳದ ಬೆಳ್ಳಿಗೆ ಭೂವಿಯ ಬಂಗಾರ
ಸಿಂಗಾರ ಮೊಗವೆತ್ತಿ ಮುದ್ದಿಟ್ಟಿತ್ತು

ಕವಿ ಬೇಂದ್ರೆಯವರು ಪ್ರಕೃತಿಯಲ್ಲಿನ ಪೈರುಗಳು ಹಾಲುದುಂಬಿ ಕಾಯಾಗಿ, ತೆನೆಯಾಗಿ ಭೂಮಿಯ ಬಾಂದಳದ ಬೆಳ್ಳಿಗೆ ಭೂಮಿಯ ಬಂಗಾರ ಸಿಂಗಾರ ಮೊಗವೆತ್ತಿ ನಿಂತಿದ್ದವು ಎಂದು ಪ್ರಕೃತಿಯಲ್ಲಿನ ಹೊಲಗದ್ದೆಗಳಲ್ಲಿ ಬೆಳೆದಿರುವ ಫಸಲನ್ನು ವರ್ಣಿಸಿದ್ದಾನೆ.

ಇದಾದ ಆನಂತರ

ಶಾರದ–ಶುಭಾಭ್ರ–ಶಾರದೆ ರಸದುಂಬೆ
ನಡೆಸಿದ ನವಿಲಿನ ನರ್ತನವೋ
ಕಾರ್ತಿಕ ಸ್ವಾಮಿಯು ತಾರಕನ ಗೆದ್ದಾಗ
ತಾರಗೆ ಹಚ್ಚಿದ ಕಾರ್ತಿಕವೋ

ಅನ್ನುವ ಹಾಗೆ ಪ್ರಕೃತಿ ಸೃಷ್ಟಿ. ಪ್ರಕೃತಿಯಲ್ಲಿ ನವಿಲು ಗರಿಗೆದರಿ ನರ್ತಿಸುವಾಗ ಪ್ರಕೃತಿಗೆ ಸೊಬಗು ಹೆಚ್ಚುತ್ತದೆ. ನವಿಲು ದೇವರ ವಾಹನವೂ ಆಗಿದೆ. ಕಾವ್ಯ ಸೃಷ್ಟಿಯೂ ಆಗಿದೆ, ಹೀಗಿರುವಾಗ

ಎಂಬಂತೆ ನೆಲಮುಗಿಲು ಕಾಲವಿದ್ದರು ಕೂಡ
ನಂಜು ಗಾಳಿಗೆ ಬೆದರಿ ಜನರಿಹರೇ

[illegible]

ಎಂದು ಕವಿ ಭೂಮಿ ಮತ್ತು ಆಕಾಶ ಇವೆರಡರ ಅಂತರ ದೂರವಿದ್ದರೂ ಕೂಡ ನಂಜು ಗಾಳಿಗೆ ಬೆದರೆ ಜನರಿಹರೇ ಎಂದು ವರ್ಣಿಸಿದ್ದಾರೆ.

ಹೊಸ್ತಿಲ ಹುಣ್ಣಿವೆಗೆ ಹೊಸ್ತಿಲ ನಡುಗಿತ್ತು
ಬನದ ಹುಣ್ಣಿವೆಗೆಲ್ಲಾ ಬನ ನಡುಗಿದೆ
ಮನೆ ನಡುಗಿ ಮನ ನಡುಗಿ 'ಏ ಹುಡುಗ, ಎಲೆ ಹುಡುಗಿ'
ಎನ್ನುವ ಸಲುಗೆಯ ಬೆಸುಗೆ ಬರೆ

ಹಿಂದಿನ ಕವನದಲ್ಲಿ ಕವಿ ನಂಜುಗಾಳಿಗೆ ಬೆದರಿ ಜನರಿಹರೇ ಎಂದು ವರ್ಣಿಸಿದ್ದಾನೆ. ಈ ಕವನದಲ್ಲಿ ಮಾಗಿಯ ಚಳಿಗಾಳಿಯಾಗುತ್ತದೆ. ಈ ಗಾಳಿಯಿಂದ ಜೀವ ಸಂಕುಲವೇ ನಡುಗಿದಂತೆ ಆಗುತ್ತದೆ. ಇಲ್ಲಿ ಬೇಂದ್ರೆಯವರು ಪ್ರಕೃತಿಗೂ ಜೀವಿಗಳಿಗೂ ಇರುವ ನಂಟು ಒಂದಕ್ಕೊಂದು ಸಲುಗೆಯ ಬೆಸುಗೆಯ ಬರೆಯಾಗಿದೆ ಎಂದು ಚಿತ್ರಿಸಿದ್ದಾರೆ.

ಮೈತಾಗಿ ಮನ ಬಾಗಿ, ಒಳಿತಾಗಿ, ಇಂಬಾಗಿ
ನಾವಾಗಿ, ಈ ಮಾಗಿಗೊಳಗಾಗಿರೆ
ಕೊಡುಕೊಳೆ ಎಂಬುದು ಇಮ್ಮುಖದಲಿ ಕೂಡ
ಒಮ್ಮುಖವೆಂಬಂತೆ ಆಗುತಿದೆ.

ಪ್ರಕೃತಿಯಲ್ಲಿ ಮೈತಾಗಿ, ಮನಬಾಗಿ, ಒಳಿತಾಗಿ, ಇಂಬಾಗಿ, ನಾವಾಗಿ ಈ ಮಾಗಿಯ ಕಾಲದಲ್ಲಿ ಹಾಗೂ ಎಲ್ಲಾ ಕಾಲದಲ್ಲೂ ಒಂದಾಗಿ ಇರುವುದನ್ನು ಕವಿ ಬೇಂದ್ರೆಯವರು ಬಣ್ಣಿಸಿದ್ದಾರೆ.

ಕಂಕ ವಿಶೃಂಖಲ ಬಿಂಕದ ಬೆನ್ನೇರಿ
ಬಾನೆಲ್ಲ ತಾನೊಂದೆ ಆಳುವೊಲೆ
ತೇಲುತಲೇರು ತಲೇರುತ ಸಾಗಿರೆ
ಏಕಾಕಿ ಸಾಕಾಗಿ ನೆನೆಪಾಗಿರೆ.

ಇಲ್ಲಿ ಕವಿಯು ಕಂಕ ವಿಶೃಂಖಲನು ಬಿಂಕದ ಬೆನ್ನೇರಿ ಆಕಾಶದಲ್ಲೆಲ್ಲಾ ತಾನೊಂದೆ ಎಂದರೆ ಉದ್ದನೆಯ ಕಾಲಿನ ಬಿಳಿಯ ಕೊಕ್ಕರೆಯು ಒಂಟಿಯಾಗಿ ಆಕಾಶದಲ್ಲಿ ಹಾಡುತ್ತಿರುವುದನು ಬಣ್ಣಿಸಿದ್ದಾನೆ.

ಕಿಂಖೀಲಿ ಲಿಲಿಲೀಲಿ ಉಲಿದುಲಿದು ನಲಿನಲಿದು
ಕೆಳದಿಯ ಕೆಳಬಯಸಿ ಕರೆಯುತಿದೆ

ಆಕಾಶ ಪುಷ್ಪವು ಅರಳಿತ್ತು ಹೊರಳಿತ್ತು
ತೆರಳಿದ ದಿಟ್ಟಿಯು ಒಂದು ಕಡೆ

ಕವಿ ಬೇಂದ್ರೆಯವರು ಆಕಾಶದಲ್ಲಿ ಹೂವಿನ ಹಾಗೆ ಚಂದ್ರ ನಗುತ್ತಿದ್ದ, ಕಿಂಖೀಲಿ ಲಿಲಿಲೀಲಿ ಉಲಿದುಲಿದು ನಲಿನಲಿದು ಕೆಳದಿಯ ಕೆಳ ಬಯಸಿ ಕರೆಯುತಿದೆ ತೆರಳಿದ ದಿಟ್ಟಿಯು ಒಂದು ಕಡೆ ಎಂದು ಹೇಳುತ್ತವೆ.

ಚಳಿಗಾಲವು ಮೈಮನ ನಡುಗಿಸುತ್ತದೆ ನಸುಕಿನಲ್ಲಿ ಎಂಬಂತೆ

ಕಾಲ್ಬಿದ್ದು ಕೈಹಿಡಿದು ಮುತ್ತಿಟ್ಟು ಮುಗಿಬಿದ್ದು
ಮೈ ಏರಿ ಮೈ ಹೊಕ್ಕು ಮಾಗಿ ಬರೆ
ಮೈ ಮೈ ಯಡರುವ ಮಾಗಿಯ ಮೈಮೆಯು
ಬೆಳಗು ಮುಸುಕಿನಲ್ಲು ಒಗ್ಗುತಿರೆ

ಮಕರ ಸಂಕ್ರಾಂತಿಗೆ ಮೈತುಂಬ ತುಟಿ ತುಂಬ
ಎದೆ ತುಂಬ ಕುಸುರೆಳ್ಳು ಮೂಡುತ್ತಿದೆ.

ಚಳಿಗಾಲದಲ್ಲಿ ಕಾಲ್ಬಿದ್ದು ಕೈಹಿಡಿದು ಮುತ್ತಿಟ್ಟು ಮುಗಿಬಿದ್ದು ಮೈಏರಿ ಮೈಹೊಕ್ಕು ಬೆಳಗು ಮುಸುಕಿನಲ್ಲು ಒಗ್ಗುತಿರೆ, ಮಕರ ಸಂಕ್ರಾಂತಿಯ ವೇಳೆಗೆ ಸುಗ್ಗಿಯ ಕಾಲವಾಗಿದ್ದು ಜನರಿಗೆ ಮೈ ತುಟಿ ಬಿರುಕು ಒಡೆಯದಿರಲೆಂದು ಕುಸುರೆಳ್ಳನ್ನು ತಂದು ಹಬ್ಬ ಆಚರಿಸುವುದುಂಟು.

ಕಾಮನ ಹುಣ್ಣಿವೆ ಹಣ್ಣಾಗಿ ಹರಿವಂತೆ
ತೊರೆಯಾಗಿ ನೆರಯಾಗಿ ಹೊಲಾಗಿರೆ
ಸೀಮೆಗೆ ಸೀಮೆಯ ಹುಚ್ಚು-ಬೆಳದಿಂಗಳದ
ಹಸದನದಲಿ ಅಚ್ಚ ಹಸನಾಗಿದೆ.

ಹುಣ್ಣಿಮೆ ದಿನದಂದು ಇಡೀ ದಿನವೆಲ್ಲಾ ಹಾಲ ನೊರೆಯಂತೆ ಬೆಳಕು ಹರಿಯುತ್ತದೆ. ರಾತ್ರಿಯ ವೇಳೆ ಆಕಾಶವನ್ನು ನೋಡಲು ಚಂದ್ರನು ಸೀಮೆಗೆ ಸೀಮೆಯ ಹುಚ್ಚು ಬೆಳದಿಂಗಳದ ಹಸನದಲ್ಲಿ ಸುಂದರವಾಗಿದೆ ಎಂದು ಕವಿಯು ಬಿಂಬಿಸಿದ್ದಾನೆ.

ಈ ಸಂದರ್ಭದಲ್ಲಿ ಚಂದ್ರ ಯಾರಿಗೆ ಬೆಳಕನ್ನು ಹರಿಸುತ್ತಾನೆ ಎಂಬುದನ್ನು ಈ ಕವನದಲ್ಲಿ ಬಿಂಬಿಸಿದ್ದಾರೆ.

ಬಡವ–ಬಲ್ಲಿದನೆಂಬ ಭೇದವದಿಲ್ಲವೆ
ಹಾದಿ–ಬೀದಿಗು ಸಂದಿಗೊಂದಿಯಾಳೆ
ಹಿಡಿಸದೆ ತುಂಬಿದೆ ತಗ್ಗಿಲ್ಲ ತೆವರಿಲ್ಲ
ಮಿಣುಕು ತಾರೆಗಳಲ್ಲಿ ತುಳುಕುತಿಹೆ

ಮೊದ್ದು ಮಾನವರೆಲ್ಲ ನಿದ್ದೆಯೊಳಿದ್ದಾಗ
ಸದ್ದಿಲ್ಲದೆ ಕದ್ದು ಮುದ್ದಿಡುವೆ
ಮುಗ್ಧ ಮಾತೆಯ ಹಾಗೆ, ಎದೆ ಹಾಲ ಎರೆಯುವೆ
ಚಂದ್ರಲೋಕದ ತಾಯಿ ಬೆಳದಿಂಗಳೇ!

ಕವಿಯು ಚಂದ್ರನನ್ನು ಯಾವ ಬೇದವು ಇಲ್ಲದೆ ಬಡವ ಬಲ್ಲಿದರಿಗೆಲ್ಲಾ ಬೆಳಕನ್ನು ನೀಡುವನು, ಚಂದ್ರನಿಂದ ಆಕಾಶದಲ್ಲಿರುವ ತಾರೆಗಳೆಲ್ಲಾ ಮಿಣುಕುತ್ತವೆ. ಎಲ್ಲಾ ಜೀವಿಗಳು ನಿದ್ರೆಯಲ್ಲಿರುವಾಗ, ಎಚ್ಚರವಾಗಿರುವಾಗ ಹಾಲಿನಂತಹ ಬೆಳಕನ್ನು ನೀಡುತ್ತಾನೆ. ಭೂಮಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ರೈತರಿಗೆ ಬೆಳಯನ್ನು ನೀಡುವ ಹಾಗೆ ಪ್ರಕೃತಿಯಲ್ಲಿ ಚಂದ್ರನು ಎಂದು ಕವಿ ಚಿತ್ರಿಸಿದ್ದಾನೆ.

ಭರತ ಇಳಿತದಲ್ಲಿ ತೊಟ್ಟಿಲಾಡಿಸುತಿರೆ
ಚಂದ್ರಕೆ ತಿಂಗಳು ತಿಂಗಳಕೆ
ಇರುಳ ಹಡಗಿನಲ್ಲಿ ಮರುಳು ಜೀವಗಳೆರಡು
ಧ್ರುವನಲ್ಲಿ ಕಣ್ಣಿಟ್ಟು ಸಾಗುತಿವೆ.

ಭರತ ಇಳಿತದಲಿ ತೊಟ್ಟಿಲಿನಲ್ಲಿ ಚಂದ್ರನು ತೂಗಾಡುವ ಹಾಗೆ, ಹಾಗೂ ರಾತ್ರಿಯ ವೇಳೆಯಲ್ಲಿ ಚಂದ್ರನು ಹಡಗಿನಲ್ಲಿ ಹೋಗಿ ಧ್ರುವಗಳನ್ನು ಸೇರುವ ಹಾಗೆ ಸಾಗುತ್ತಿವೆ ಎಂದು ಬೇಂದ್ರೆಯವರು ವಿವರಿಸಿದ್ದಾರೆ.

ಹಲಚಿಕ್ಕೆ ಚಂದ್ರಿಕಾ–ಜಲದಲ್ಲಿ ಮುಳಿಗಿವೆ
ಕೆಲಚಿಕ್ಕೆ ಹಾಯಾಗಿ ತೇಲುತಿವೆ
ಮಲಗಿದ್ದ ಕಣ್ಣೆಲ್ಲ ಒಮ್ಮೆಲೆ ಎಚ್ಚೆತ್ತು
ಕಣ್ಣಾರೆ ಕುಡಿದರು ತೀರದಿದೆ.

ಕವಿಯು ಬೆಳದಿಂಗಳನ್ನು ವರ್ಣಿಸುತ್ತಾ, ಬೆಳದಿಂಗಳು ಮತ್ತು ಆಕಾಶದಲ್ಲಿರುವ ನಕ್ಷತ್ರಗಳು ಜಲದಲ್ಲಿ ಕಾಣುವುದನ್ನು, ಮಲಗಿದ್ದು ಎದ್ದು ಜಲರಾಶಿಯನ್ನು ನೋಡಿದರೂ ಕೂಡ ಎಲ್ಲಾ ಆಕಾಶದ ಚಿತ್ರಣ ನೀರಿನಲ್ಲಿ ಕಾಣುವುದು.

ಅನುವಿರಲಿ ತಣಿವಿಗೆ ಎಂದೆಂದು ಕೌಮುದಿ
ಕಿಲುಬೇರದಿರಲೆಂದು ಕನವರಿಕೆ

ಎಂದು ಬೇಂದ್ರೆಯವರು ತಮ್ಮ ಸಖೀಗೀತ ಕವಿತೆಯಲ್ಲಿ ಪ್ರಕೃತಿಯನ್ನು ರೂಪಕವಾಗಿ ಬಳಸಿಕೊಂಡು ವರ್ಣಿಸಿರುವುದನ್ನು ಕಾಣಬಹುದಾಗಿದೆ.

'ಗಂಗಾವತರಣ'[೧] ಕವಿತೆಯು ಕವಿ ಬೇಂದ್ರೆಯವರು ಸ್ವರ್ಗದಲ್ಲಿರುವ ಗಂಗಾಮಾತೆಯನ್ನು ಧರೆಗೆ ಆಹ್ವಾನಿಸುವ ಪ್ರಾರ್ಥನೆಯಾಗಿದೆ. ಗಂಗೆ ಹುಟ್ಟಿದ್ದು ಹರಿಯ ಪಾದದಲ್ಲಿ ಆದರೆ ಗಂಗೆ ಎಂದೊಡನೆ ನಮಗೆ ನೆನಪಾಗುವುದು ಶಿವನ ಜಡೆಯಲ್ಲಿ ಬಂಧಿಯಾಗಿದ್ದಾಳೆಂದು ನಂತರ ಭಗೀರಥ ಋಷಿಯು ಶಿವನನ್ನು ಪ್ರಾರ್ಥಿಸಿ ಅವಳನ್ನು ಬಿಡುಗಡೆಗೊಳಿಸಿದನೆಂದು ತಿಳಿದುಬರುತ್ತದೆ. ಅಂತೆಯೇ ಪ್ರಕೃತಿ ಮಾತೆಯಾದ ಗಂಗೆಯನ್ನು ಬೇಂದ್ರೆಯವರು ಧರೆಗಿಳಿಯಲು ಭಕ್ತಿಯಿಂದ ಪ್ರಾರ್ಥಿಸುತ್ತಾರೆ.

ಇಳಿದು ಬಾ ತಾಯಿ
ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿಬಾ

ದೇವದೇವರನು ತಣಿಸಿ ಬಾ
ದಿಗ್ದಿಗಂತದಲ್ಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ

'ಸುರನದಿಯಾದ ನೀನು ದೇವತೆಗಳ ಬಾಯಾರಿಕೆಯನ್ನೂ ತಣಿಸಿ ಬಾ' ಎಂದು ಬೇಂದ್ರೆ ಗಂಗೆಯನ್ನು ಕೇಳಿಕೊಳ್ಳುತ್ತಾರೆ. ಸ್ವರ್ಗದಿಂದ ಕೆಳಗಿಳಿಯುತ್ತಿರುವ ಗಂಗೆ ಅಷ್ಟದಿಕ್ಕುಗಳಿಗೂ ಮಳೆಯ ರೂಪದಲ್ಲಿ ಸಕಲ ಪ್ರಕೃತಿಗೂ ನೀರುಣ್ಣಿಸುವುದು

೧. ಗಂಗಾವತರಣ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೧೯.

ಎಂದು ಹೇಳುತ್ತಾರೆ. ಅದನ್ನು ಅವರು 'ಚರಾಚರಗಳಿಗೆ ಉಣಿಸಿ ಬಾ' ಎಂದು ಬಣ್ಣಿಸಿದ್ದಾರೆ.

ಸಕಲ ಚರಾಚರಗಳನ್ನು ತಿಳಿದ ಈ ಕವಿಯು ಗಂಗೆಯ ದೈವಿಕತೆಯನ್ನೂ ತಿಳಿದಿದ್ದಾರೆ. ಅದಕ್ಕೆ ಇವರು ಧರೆಗಿಳಿಯುತ್ತಿರುವ ಗಂಗೆಯನ್ನು ಪೊಡಮಟ್ಟು ಅಂದರೆ ನಮಸ್ಕಾರದೊಂದಿಗೆ ಬರಮಾಡಿಕೊಳ್ಳುತ್ತಿದ್ದಾರೆ.

ನಿನಗೆ ಪೊಡಮಡುವೆ
ನಿನ್ನ ನುಡು ತೊಡುವೆ
ಏಕೆ ಎಡೆತಡೆವೆ
ಸುರಿದು ಬಾ

ಬೇಂದ್ರೆಯವರು ಗಂಗೆಯನ್ನು ಏಕೆ ಎಡೆ ತಡೆವೆ ನಮ್ಮ ಉದ್ದಾರಕ್ಕಾಗಿ ಇಳಿದು ಬಾ ತಾಯಿ ಸುರಿದು ಬಾ ಎಂದು ಬೇಡಿಕೊಳ್ಳುತ್ತಿದ್ದಾರೆ ಹಾಗೆಯೇ ಮುಂದೆ

ಸ್ವರ್ಗ ತೊರೆದು ಬಾ
ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ

ಗಂಗಾದೇವಿ ಸ್ವರ್ಗ ಲೋಕವನ್ನು ತೊರೆದ ಮೇಲೆ ಅವಳು ಬಯಲಲ್ಲಿ ಅಂದರೆ ಆಕಾಶದಲ್ಲಿ ಯಾವುದೇ ಘರ್ಷಣೆ ಇಲ್ಲದೆ ಜರೆದು ಭೂಮಿಯ ತಲುಪಿ ಹರಿದು ಬಾ ಎಂದು ಕರೆಯುತ್ತಿದ್ದಾರೆ.

ಇಲ್ಲಿಯವರೆಗೆ ಗಂಗಾದೇವಿಯನ್ನು ಪ್ರವಾಹರೂಪದಲ್ಲಿ ಆಹ್ವಾನಿಸಿದ ಕವಿ ಈಗ ಅಂತರ್‌ರೂಪವನ್ನು ನೋಡುತ್ತಿದ್ದಾನೆ. ಅವಳಿಂದಲೇ ನಮ್ಮೆಲ್ಲರ ಉದ್ದಾರವಾಗಬೇಕು ಎಂದು ಹೇಳಿ

ನನ್ನ ತಲೆಯೊಳಗೆ
ನನ್ನ ಬೆಂಬಳಿಗೆ
ನನ್ನ ಒಳಕೆಳಗೆ

ನುಗ್ಗಿ ಬಾ
ಕಣ್ಣ ಕಣ ತೊಳಿಸಿ
ಉಸಿರ ಎಳೆ ಎಳಸಿ
ನುಡಿಯ ಸಸಿ ಮೊಳಸಿ
ಹಿಗ್ಗಿ ಬಾ

ತಾಯಿ ಗಂಗಾದೇವಿ ನಿನ್ನ ಎದುರು ನಾನು ತಲೆಬಾಗಿ ನಿಂತಿದ್ದೇನೆ. ನನ್ನ ತಲೆಯೊಳಗೆ ಅಂದರೆ ನನ್ನ ಬುದ್ಧಿಯನ್ನು ಶುದ್ಧಿಗೊಳಿಸು ಬಾ, ನನ್ನ ಕಣ್ಣ ಕಣವನ್ನು ತೊಳೆ ಅಂದರೆ ನನ್ನ ನೋಟವನ್ನು ಸ್ವಚ್ಛಗೊಳಿಸು. ನನ್ನ ಉಸಿರು ಉಸಿರಿನಲ್ಲಿ ನಿನ್ನ ನುಡಿಯನು ಭಜಿಸುವೆನು ಸುರಗಂಗೆಯೇ ಹಿಗ್ಗಿ ಬಾ ಅಂದರೆ ಆನಂದದಿಂದ ಬಾ ಎಂದು ಪ್ರಾರ್ಥಿಸಿದ್ದಾರೆ.

ಎದೆಯ ನೆಲೆಯಲ್ಲಿ ನೆಲಸಿ ಬಾ
ಜೀವ ಜಲದಲ್ಲಿ ಚಲಿಸಿ ಬಾ
ಮೂಲ ಹೊದಲ್ಲಿ ನೆಲಸಿ ಬಾ
ಇಳಿದು ಬಾ ತಾಯಿ
ಇಳಿದು ಬಾ

ಇಲ್ಲಿ ಎದೆಯ ನೆಲೆ ಎನ್ನುವುದು ಕವಿಯ ವೈಯಕ್ತಿಕ ಆಕಾಂಕ್ಷೆಯಾಗಿದೆ. ಜೀವ ಜಲದಲ್ಲಿ ಚಳಿಸು ಬಾ ಎನ್ನುತ್ತಾ ಕವಿ ಮೂಲ ಹೊಲ ಎಂದು ಹೇಳಿದ್ದಾನೆ. ಮೂಲ ಹೊಲ ಎಂದರೆ ಭೂಮಿ ತಾಯಿ ಬರಡಾಗಿದ್ದಾಳೆ ಅವಳಲ್ಲಿ ನೆಲೆಯೂರು ಬಾ ಎಂದು ಕರೆಯುತ್ತಾರೆ. ಇದು ಅವರ ಮೂಲ ಆಕಾಂಕ್ಷೆಯನ್ನು ಸೂಚಿಸುತ್ತದೆ.

ಕಂಚು ಮಿಂಚಾಗಿ ತೆರಳಿ ಬಾ
ನೀರು ನೀರಾಗಿ ಉಳಿಸಿ ಬಾ
ಮತ್ತೆ ಹೊಡೆ ಮರಳಿ ಹೊರಳಿ ಬಾ

ಕಂಚು ಮಿಂಚಾಗಿ ಎಂದರೆ ಮಿಂಚಿನ ಪ್ರಕಾರವಾಗಿಯೂ ನೀನು ಸಹಾ ಬೇಗ ಬಾ ಎನ್ನುವ ಮೂಲಕ ಭೂಮಿಯ ಮೇಲಿನ ಚರಾಚರಗಳನ್ನು ತಣಿಸು ಬಾ ಎಂದ ಕವಿ ಗಂಗೆಯಲ್ಲಿ ಪ್ರಾರ್ಥಿಸುತ್ತಿದ್ದಾರೆ.

ದಯೆಯಿರದ ದೀನ
ಹರೆಯಳಿದ ಹೀನ
ನೀರಿರದ ಮೀನ
ಕರೆ ಕರೆವ ಬಾ
ಇಳಿದು ಬಾ ತಾಯಿ
ಇಳಿದು ಬಾ

ಈ ಕವನವನ್ನು ರಚನೆ ಮಾಡುವ ಸಮಯದಲ್ಲಿ ಬೇಂದ್ರೆಯವರು ಮಧ್ಯಮ ವಯಸ್ಕರಾಗಿದ್ದಿರಬಹುದು ಅದಕ್ಕೆ ಅವರು ಹರೆಯಳಿದಹೀನ ಎಂದು ತಮ್ಮನ್ನು ಬಣ್ಣಿಸಿದ್ದಾರೆ. ಇದು ಅಂದಿನ ಭಾರತೀಯರ ಸ್ಥಿತಿಯನ್ನು ಸಹ ವ್ಯಕ್ತಪಡಿಸುತ್ತದೆ.

ಕುರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳಿಸುಳಿದು ಬಾ

ಹೀಗೆ ಸಲುಹುವ ಜೀವಿಗಳ ಪೋಷಣೆ ಮಾಡುವಲ್ಲಿ ಗಂಗೆ ವಹಿಸುವ ಮೂರು ಹಂತಗಳನ್ನು ಬೇಂದ್ರೆ ಸೂಚಿಸಿದ್ದಾರೆ. ಹಾಗೆಯೇ ಸುಳಿಸುಳಿದು ಬಾ ಅಂದರೆ ದುರ ಹೋಗದೆ ನಮ್ಮ ಸುತ್ತ ಸುತ್ತುತ್ತಲೇ ಇರು ಎಂದು ಬೇಡಿಕೊಳ್ಳುತ್ತಾರೆ. ಹೀಗೆ ಮುಂದಿನ ಸಾಲುಗಳಲ್ಲಿ ಗಂಗೆಯನ್ನು ಬಣ್ಣಿಸುತ್ತಾರೆ.

ಶಿವ ಶುಭ್ರ ಕರಣೆ
ಅತಿಕಿಂಚಿದರುಣೆ
ವಾತ್ಸಲ್ಯವರಣೆ
ಇಳಿ ಇಳಿದು ಬಾ
ಇಳಿದು ಬಾ ತಾಯಿ
ಇಳಿದು ಬಾ.

ಗಂಗಾದೇವಿ ಆ ಭಗವಂತನಾದ ಶಿವನನ್ನು ಶುಭ್ರ ಮಾಡುವ ಕರುಣಾ ಭಾವದವಳು ಇವಳು ಜೀವಿಗಳ ಉದ್ಧಾರದಲ್ಲಿ ತಾರತಮ್ಯವಿಲ್ಲದೆ ಸದಾ ಮಗ್ನರಾಗಿರುವವಳು.

ಕೊಳೆಯ ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ಹೀಗೆ ಮಾಡದಿರು, ಅಲ್ಲಿ ಬಾ

ತನ್ನಲ್ಲಿಯೇ ಆಗಲಿ, ತನ್ನ ನಾಡಿನಲ್ಲಿಯೇ ಆಗಲಿ ಕೊಳೆಯನ್ನು ತೊಳೆಯುವವರು ಯಾರೂ ಇಲ್ಲ. ಭೌತಿಕ ಕೊಳೆಯೇ ಆಗಲಿ, ಅಜ್ಞಾನದ ಕೊಳೆಯೇ ಆಗಲಿ ಇವೆಲ್ಲಾವನ್ನು ತೊಳೆಯಲು ಗಂಗಾದೇವಿಯಿಂದ ಮಾತ್ರ ಸಾಧ್ಯ. ಈ ಇತರೆ ಶಕ್ತಿಗಳೆಲ್ಲಾ ಹೊಲ್ಲ ಅಂದರೆ ಮಲೀನಗೊಂಡ ಶಕ್ತಿಗಳು. ಆದ್ದರಿಂದ ನಿನ್ನ ಕರ್ತವ್ಯವನ್ನು ನೀನು ಮಾಡದಿರುವುದು ತಕ್ಕದಲ್ಲ ಎಂದು ನಾಡಿನ ಉದ್ಧಾರಕ್ಕಾಗಿ ಪ್ರಾರ್ಥಿಸುತ್ತಾರೆ.

ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೆ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ

ನಮ್ಮ ನಾಡಿ ನಾಡಿಯಲ್ಲಿ ನಿನ್ನ ತುತ್ತನ್ನು ನೀಡು, ನಮ್ಮ ನಾಡನ್ನೆಲ್ಲ ಸುತ್ತಿ ನೀರುಣಿಸು ಹಾಗೂ ಸತ್ತ ಜನರನ್ನು ಮೇಲೆತ್ತು, ನಿನ್ನ ಕರುಣೆಯಿಂದ ಈ ನಾಡು ಮತ್ತೆ ಹಸಿರು ಹಸಿರಾಗಲಿ, ಜನರಲ್ಲಿ ಮತ್ತೆ ಜೀವ ತುಂಬಲಿ ಎಂದು ಬೇಂದ್ರೆಯವರು ಗಂಗಾದೇವಿಯನ್ನು ಪ್ರಾರ್ಥಿಸುತ್ತಾರೆ.

ಹೀಗೆ ಅವಳು ಹರಿದಲ್ಲೆಲ್ಲಾ ಚರಾಚರಗಳು ಹೊಸವಾಗುತ್ತವೆ, ಹಸಿರಾಗುತ್ತವೆ, ಜೀವಕ್ಕಂಟಿಕೊಂಡ ಕಲ್ಮಶಗಳೆಲ್ಲ ತೊಳೆದು ಹೋಗಿ ಹೊಸ ಬೆಳಕು ಮೂಡುತ್ತದೆ. ಆದ್ದರಿಂದ ತಾಯಿ ಮೈತುಂಬಿಕೊಂಡು ಬಾ ಎಂದು ಬೇಂದ್ರೆ ಪ್ರಾರ್ಥಿಸುತ್ತಾರೆ.

ಹರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಮೈ ತಳೆದು ಬಾ
ಕೈ ತೊಳೆದು ಬಾ

ಇಳೆ ಗಿಳಿದು ಬಾ ತಾಯೀ

ಇಳಿದು ಬಾ ತಾಯಿ

ಇಳಿದು ಬಾ

ಶಂಭು- ಶಿವ-ಹರನ ಚಿತ್ತೆ ಬಾ

ದತ್ತ ನರಹರಿಯ ಮುತ್ತೆ ಬಾ

ಅಂಬಿಕಾತನಯನತ್ತೆ ಬಾ

ಇಳಿದು ಬಾ ತಾಯಿ

ಇಳಿದು ಬಾ.

ಇಲ್ಲಿ ಬೇಂದ್ರೆಯವರು ಗಂಗಾದೇವಿಯನ್ನು ಶಿವನಚಿತ್ತೆ ಎಂದು ಕರೆಯುತ್ತಾರೆ. ಹಾಗೆಯೇ ಗಂಗಾದೇವಿಯು ದತ್ತ ನರಹರಿಗೆ ಮುತ್ತಜ್ಜಿಯಾಗಬೇಕು. ಇಂತಹ ಗಂಗಾದೇವಿಯು ಅಂಬಿಕಾತನಯನತ್ತ ಬರಲಿ ಎಂಬುದು ಕವಿಯ ಪ್ರಾರ್ಥನೆ. ಇದು ನಮ್ಮ ನಾಡಿನ ಕರೆ ನಮ್ಮ ನಾಡು ಸಮೃದ್ಧಿಯಾಗಬೇಕು ಪರಿಸರವೆಲ್ಲಾ ಹಸಿರಿನಿಂದ ಕಂಗೊಳಿಸಬೇಕು ಎಂಬುದು ಕವಿಯ ಆಶಯವಾಗಿದೆ.

ಭೂಮಿತಾಯಿ:[೧] ಬೇಂದ್ರೆಯವರಿಗೆ ಭೂಮಿಯ ಮೇಲೆ ತಾಯ್ತನದ ನಂಬಿಕೆ ಆದ್ದರಿಂದಲೇ ಅವರು 'ಭೂಮಿತಾಯಿ'ಯನ್ನು ಕುರಿತು ಹೀಗೆ ಹೇಳಿದ್ದಾರೆ.

ಮೈ ತುಂಬ ಬಾಯಿ ನೀನು

ತುಟಿಮುದ್ದು ನನ್ನ ಪಾಲು

ಎದೆಯಾಳ ಮೊಲೆಯು ನೀನು

ಮೈ ತುಂಬ ನನಗೆ ಹಾಲು

ಕಂಡಲ್ಲಿ ನಿನ್ನ ಮುಖವು

ಕಣ್ತುಂಬ ನಿನ್ನ ಸುಖವು

ನೆಲದುದ್ದ ತೊಡೆಯು ನಿನಗೆ

ಮನವಾರೆ ನಿದ್ದೆ ನನಗೆ

೧. ಭೂಮಿತಾಯಿ - ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೨೫.

ಮಗನ ಸ್ಥಾನದಲ್ಲಿ ನಿಂತ ಕವಿ ತಾಯಿಯನ್ನು ಕುರಿತು ಕಂಡಲ್ಲಿ ನಿನ್ನ ಮುಖ ಕಣ್ತುಂಬ ನನಗೆ ಸುಖವು ಎಂಬ ಮಾತುಗಳ ಮೂಲಕ ತಾನು ಭೂಮಿಯ ಮುಖವನ್ನು ನೋಡಿದೊಡನೆಯೇ ತನಗೆ ಆಗುವ ಸುಖವನ್ನು ಬಣ್ಣಿಸಿದ್ದಾರೆ.

ನೀ ತಿರುಗುತ್ತಿದ್ದರೇನು
ನೀ ನಿಲ್ಲದಡೆಯ ಇಲ್ಲ
ನಾ ತಪ್ಪಿ ನಡೆದರೇನು
ನೆಲೆ ಬೇರೆ ಕಾಲಿಗೆಲ್ಲಿ

ಇದು ಭೂಮಿ ತನ್ನ ಕಕ್ಷೆಯ ಸುತ್ತ ತಿರುಗುತ್ತಿದೆ. ಅದು ನಿರಂತರವಾಗಿದೆ. ಇದರಿಂದ ಹಗಲು ರಾತ್ರಿಗಳಾಗುತ್ತಿದೆ. ನೀನು ಬಾನಗಲ ತೊಟ್ಟಿಲಲ್ಲಿ ನೀ ತೂಗುತಿರಲು ನನ್ನ ಕಟ್ಟಿರುವ ಚಿಕ್ಕ ಚೆಟ್ಟು ನಾಮರೆಯುವುದುಂಟೆ ಎಂದು ಕವಿ ಬಣ್ಣಿಸುತ್ತಿದ್ದಾನೆ ತಾಯಿ ಮಗುವಿನ ಸಂಬಂಧವನ್ನು ವಿಶ್ಲೇಷಿಸತೊಡಗಿದ್ದಾರೆ.

ಬಾನಗಲ ತೊಟ್ಟಿಲಲ್ಲಿ
ನೀ ತೂಗುತಿರಲು ನನ್ನ
ಕಟ್ಟಿನ ಚಿಕ್ಕೆ ಚಟ್ಟು
ನಾ ಮರೆವುದೆಂತು ನಿನ್ನ?
ಕಣ್ಮುಚ್ಚಿ ತೆರೆಯುತಿರುವೆ
ಈ ಆಟ ಮುಗಿವುದೆಂದು?
ನಿದ್ದೆಯನು ಮೀರಿ ನಿಂದು
ಮಕ್ಕಳನು ಎಂದು ಕರೆವೆ?

ತಾಯಿ ನೀನು ಸುತ್ತುವುದರ ಮೂಲಕ ತನ್ನ ಮಕ್ಕಳ ಒಳ್ಳೆಯದನ್ನು ಬಯಸುವೆ ಆದರೆ ಕತ್ತಲೆ ಎಂಬುದು ಅಂಧಕಾರ. ಇದರಿಂದ ನಮಗೆ ಎಂದು ಮುಕ್ತಿ ದೊರಕಿಸುವೆ ಈ ಅರೆಮಟ್ಟಿನಿಂದ ಸುಖವಿಲ್ಲ ಎಂಬ ನಿಲುವಿಗೆ ಬಂದು ತಲುಪುತ್ತಾರೆ.

ಓ ತಾಯಿ ನೆಲವೆ ನಿಲವೆ
ತಮ್ ಬೆಳಕು ಹೊಮ್ಮಲಿನ್ನು
ನಮ್ ಮೈಯು ಬೆಳಕುದುರುವೆ

[illegible]

[illegible]

[illegible]

[illegible]

[illegible]

[illegible]

ನೀ ನಾಗ ನಲಿವೆ ಗೆಲುವೆ
ಯಾ ಬಣ್ಣವಿದ್ದರೇನು
ಯಾಕಣ್ಣ ಅದರ ಮಾತು?
ಬೆಳಕಾಗಲೆಮ್ಮ ಬದುಕು
ಬಂದೀತು ಜೀವ ಹೂತು

ಹೀಗೆ ಭೂಮಿ ತಾಯಿ ನಿನ್ನ ಅಂತರಾಳದಿಂದ ಹೊರ ಹೊಮ್ಮುವ ಬೆಳಿಕಿನಿಂದಲೇ ನಮ್ಮ ಬಾಳು ಹಸನಾಗಲು ಸಾಧ್ಯ. ಬೇರೆ ಯಾರಿಂದಲೂ ನಮ್ಮ ಬಾಳು ಹಸನಾಗುವುದಿಲ್ಲ. ಅದರಿಂದಲೇ ನಮ್ಮ ಪ್ರಗತಿ ಸಾಧ್ಯ ಎಂಬ ನಂಬಿಕೆ ಕವಿಯದು.

ಯಾರ ಪಾಡು ತೋಡಿಯೇನು?
ಈ ಹಾಡು ಬೇಕು ನಮಗೆ
ಅರಿವಾಗಿ ಹೀಗೆ ನಗಲು
ಬಾಳುದ್ದ ಒಂದ ಹಗಳ

ಭೂಮಿತಾಯಿ ನಿನ್ನ ಮಹಿಮೆಯಿಂದ ನಮ್ಮ ಬದುಕು ಹಸನಾಯಿತು ಎಂದು ಕವಿ ಬಣ್ಣಿಸಿದ್ದಾರೆ.

ಬಿಡಿಮುತ್ತು:[೧] ಬಿಡಿಮುತ್ತು ಕವನದಲ್ಲಿ ಬೇಂದ್ರೆಯವರು ಪೃಥ್ವಿ ಎಂದರೆ ಅದು ಬರೆ ಜಡವಸ್ತುವಲ್ಲ. ಪ್ರಕೃತಿಯ ಪ್ರತಿಯೊಂದು ಜೀವಿಗೂ, ವಸ್ತುವಿಗೂ ಜೀವನೀಡಿ ಸಲಹುವ ಮಹಾತಾಯಿಯಾಗಿ ಕಾಣುತ್ತಾಳೆ. ಈ ಭೂಮಿ ತಾಯಿಯನ್ನು ತಮ್ಮ ಬಿಡಿಮುತ್ತು ಕವಿತೆಯೇ ವರ್ಣಿಸಿರುವುದು ಹೀಗೆ–

ಮಣ್ಣೆಂದು ಜರೆಯುವದು!
ಏನು ಮಣ್ಣೋ ಕಾಣೆ?
ಮಣ್ಣ ಬೆಳೆ, ಮಣ್ಣ ಕಳೆ, ಮಣ್ಣ ಗಂಪು
ಒಡೆಯ ಬಿಟ್ಟರು
ಒಡಲು ಬಿಡದು ಮಣ್ಣಿನ ನೆರೆಯ
ಬೂದಿಯಾದರು ಬದುಕು
ಮಣ್ಣೆ ತಂಪು.

---

೧. ಬಿಡಿಮುತ್ತು – ಔದುಂಬರ ಗಾಥೆ, ಸಂಪುಟ. ೩, ವಿನ್ಯಾಸ ದ.ರಾ.ಬೇಂದ್ರೆಯವರ ಜೀವನ ಮಹಾಕಾವ್ಯ, ಪುಟ ೩೦೭.

ಬಾಣಗಂಗೆಯ ಮರುಕ
ಮೃತ್ ಪಿಂಡ ತೊಳೆಯುತಿದೆ
ಮಾಟ ಮಮತೆಗೆ ತೊರೆವ
ಬಾಳ ಚಿಲುಮೆ.
ಶ್ರೀನಿವಾಸನು ಕೂಡ
ತಿರುಮಲೆಗೆ ನೆಲೆನಿಂತ
ಮಣ್ಣಲ್ಲ ಈ ಭೂಮಿ ದೇವನೊಲುಮೆ.

ಹೀಗೆ ಭೂಮಿ ತಾಯಿಯನ್ನು ಬಣ್ಣಿಸುತ್ತಾ ಕವಿ ತಿರುಪತಿಯಲ್ಲಿ ನೆಲೆ ನಿಂತಿರುವ ಶ್ರೀನಿವಾಸನ ನೆಲೆ ಇದು ಈ ಭೂಮಿ ದೇವನೊಲುಮೆ ಎಂದು ಬಣ್ಣಿಸಿದ್ದಾರೆ.

"ಭೂಮಿತಾಯಿ ಬೇಂದ್ರೆಯವರ ವ್ಯಕ್ತಿತ್ವದ ಮೂಲ ಪ್ರೇರಣೆಗಳಲ್ಲಿ ಒಂದು ಎಂಬುದನ್ನು ಈಗಾಗಲೇ ಕನ್ನಡ ವಿಮರ್ಶೆ ಗುರುತಿಸಿದೆ. ಈ ಭೂಮಿ ತಾಯಿತತ್ವ ಎಂಬುದು ಒಟ್ಟಾರೆಯಾಗಿ ತಾಯಿ ತತ್ವದ ಒಂದು ಮುಖ. ಅನೇಕ ರೂಪಗಳಲ್ಲಿ, ವಿಧಗಳಲ್ಲಿ ತಾಯತ್ವ ಬೇಂದ್ರೆಯವರ ಸೃಜನಶೀಲ ವ್ಯಕ್ತಿತ್ವವನ್ನು ಕ್ರಿಯಾಶೀಲವನ್ನಾಗಿ ಮಾಡಿದೆ. ಈ ತಾಯತ್ವದ ಮುಖ್ಯ ನೆಲೆಗಳೆಂದರೆ ತುಂಬು ಪ್ರೀತಿ ಮತ್ತು ರಕ್ಷಕತೆ."[೧]

ಓ ತಾಯಿ ಮಾಯಿ:[೨] ಕವಿ ಬೇಂದ್ರೆಯವರು ಭೂಮಿತಾಯಿ ಹಾಗೂ ತಮ್ಮ ಹೆತ್ತತಾಯಿ ಅಂಬಿಕೆ ಇವರಿಬ್ಬರ ಅನುಭವವನ್ನು ಕವಿತೆಗೆ ತಂದು ತನ್ಮಯತೆಯಿಂದ ವರ್ಣಿಸಿದ್ದಾರೆ. ಅವರ ಓ ತಾಯಿ- ಮಾಯಿ ಕವಿತೆಯ ಕೊನೆಯ ಸಾಲುಗಳಲ್ಲಿ ಈ ದರ್ಶನವನ್ನು ಕಾಣಬಹುದು.

ಓ ತಾಯಿ ಬಂದೆ
ಮಾಮಾಯಿ ಅಂದೆ, ಈ ಬಾಯಿ ತುಂಬು ಒಂದೇ
ಮಕರಂದ ಪಾನದಾ ಝುರೀ
ತೆರಿ ತೆರೀ ನಿನ್ನ ತಾವರೀ

---

೧. ಡಿ.ಆರ್.ನಾಗರಾಜ – ಶಕ್ತಿ ಶಾರದೆಯ ಮೇಳ, ಪು. ೩೧.
೨. ಓ ತಾಯಿ ಮಾಯಿ – ಔದುಂಬರ ಗಾಥೆ, ಸಂಪುಟ. ೧, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೫೮೧.

ಬಂದ್ವದ ತುಂಬಿಯಾ ಮರೀ

ಅಂಬಿಕಾತನಯನ ನುಡೀ ನುಡಿತಾವ ತೇರೀ ತೇರಿ ಎಂದೇ

ಓ ತಾಯಿ ಮಾಯಿ ಶಿವಜಾಯಿ ಕಾಯಿ ಈ ಬಾಯಿ ತುಂಬು ಒಂದೇ

ನಮ್ಮನ್ನು ಹೆತ್ತು ಹೊತ್ತು ಸಲುಹಿದ ತಾಯಿ ಹಾಗೂ ಈ ಭೂಮಿತಾಯಿ ಇಬ್ಬರೂ ಒಂದೇ ಎಂಬುದು ಕವಿಯ ನಿಲುವು.

ಮೊದಲಗಿತ್ತಿ:[೧] ಬೇಂದ್ರೆಯವರು 'ಮೊದಲಗಿತ್ತಿ' ಕವಿತೆಯಲ್ಲಿ ಭೂಮಿ ತಾಯಿಯ ಶಕ್ತಿಯ ಚಿತ್ರಣವನ್ನು ನೀಡಿದ್ದಾರೆ. ಈ ಭೂಮಿಯನ್ನು ಮೊದಲಗಿತ್ತಿ ಎಂದು ಕರೆದು ಶೋಷಣೆ ಕಾರಣವಾದವರನ್ನು ಮಟ್ಟಹಾಕುವ ಶಕ್ತಿ ಈ ಭೂಮಿ ತಾಯಿಗೆ ಇದೆ ಎಂದು ನಂಬುತ್ತಾರೆ.

ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ।
ಮೊದಲಗಿತ್ತಿಯಂತೆ ಮೆರೆಯುತಿಹೆ॥
ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನ್ನೂ ಮಡಿಲಾಗ ಮಡಗಿಸಿದೆ
ಹದಿನಾರು ರಾಜರು ತಲೆಕೆಳಗಾದರು
ಆದರು ತಲೆಯೆತ್ತಿ ನಿಂತಿರುವೆ
ನಿನ್ನ ತೇಜದ ಮುಂದೆ ರಾಜ ತೇಜವು ಕೂಸು
ಮೊದಲಗಿತ್ತಿಯು ನೀನು ಮೆರೆಯುತಿಹೆ.

ಈ ಸಾಲುಗಳಲ್ಲಿ ಕ್ರೂರ ಜನರು ಹಾಗೂ ಎಂತಹ ಬಲಿಷ್ಠರೂ ಕೂಡ ಬದುಕಿಲ್ಲ. ಮೆರೆದು ನಿನ್ನಲ್ಲಿ ಮಣ್ಣಿಗೆ ಹೋಗಿದ್ದಾರೆ. ಎಂತಹ ಶಕ್ತಿ ರಾಜಾದಿ ರಾಜರುಗಳು ಮಣ್ಣಲ್ಲಿ ಸೇರಿಹೋಗಿದ್ದಾರೆ. ನಿನ್ನ ತೇಜದ ಮುಂದೆ ರಾಜ ತೇಜವೂ ಕೂಸು ಎಂದು ಬಣ್ಣಿಸಿದ್ದಾರೆ.

ಒಕ್ಕುಡಿತೆ ಅರಮುಕ್ಕು ಎನುತೆನುತೆ ಹಲಕೆಲವು
ಪಾನಿಪತ್ತುಗಳನ್ನು ಮುಕ್ಕಳಿಸುವೆ।

---

೧. ಮೊದಲಗಿತ್ತಿ - ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೨೧೯.

ಕೊಡಲಿ ರಾಮನು ಎರೆದ ಕೆನ್ನೀರ ಜಳಕಕ್ಕೆ
ಕೂದಲು ನೆನೆಯಲಿಲ್ಲೆನುತಿಹೆ

ಅವತಾರಕ್ಕೊಂದೊಂದು ಅಭಿಷೇಕ ಮಾಡಿದರು
ಎಣ್ಣೆ ಮಜ್ಜನ ಬೇರೆ ಬೇಕೆನುವೆ
ನೆತ್ತರ ಮೀಯಿಸುವ ಕೆಂಚರ ಕೈಯಿಳಿಸಿ
ಮೊದಲಗಿತ್ತಿಯೆ ನೀನು ಮೆರೆಯುತಿಹೆ

ದರ್ಪ ಮತ್ತು ಅಧಿಕಾರದ ಬೆಂಬಲದಿಂದ ಮೆರೆದ ಜನಗಳನ್ನು ಭೂಮಿತಾಯಿ ಹಿಂಸೆಯಿಂದಲೇ ನಾಶ ಮಾಡಿದ್ದಾಳೆ. ಭೂಮಿಯ ಮೇಲೆ ಅತ್ಯಾಚಾರ ಅನಾಚಾರ ಮಾಡಿದವರನ್ನು ಶಿಕ್ಷಿಸಲು ದೇವರು ಕೂಡ ನೆತ್ತರ ಕೋಡಿಯನ್ನು ಹರಿಸಬೇಕಾಗಿದೆ ಎನ್ನುತ್ತಾರೆ.

ಆದರೆ ಈ ನೆತ್ತರ ಹಾಗೂ ಜಗಳ ಹಿಂಸೆಯ ಇತಿಹಾಸವನ್ನು ಕೊನೆಗಾಣಿಸಿ ಭೂಮಿಯ ಹೃದಯದಲ್ಲಿ ಹಿಂಸೆ ಹಿಂಗಿ ಹೋಗಿ, ಆಕೆ ಮಕ್ಕಳನ್ನು ಲಾಲಿಸಿ ಪಾಲಿಸುವ ತಾಯಿಯಾಗಲಿ ಎಂದು ಆಶಿಸುತ್ತಾರೆ.

ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ
ಹೂ ಮುಡಿಸಿಕೊಂಡೆಂದು ನೀ ನಲಿವೆ?
ಬಸುರು ತುಂಬಲು ಹಸಿರುಡುಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ?
ಮುನ್ನಿಲ್ಲ ಇನ್ನಾರೆ ಮಕ್ಕಳದಿನವೆಂದು
ಮೂಡಿತು ಹೇಳವ್ವ ಬಿನ್ನವಿಸುವೆ
ಎಂದು ಮಂಗಲ ನಿನ್ನ ದೇವಗರ್ಭಕೆ? – ಇನ್ನೂ?
ಮೊದಲಗಿತ್ತಿಯೆಂದು ಮರೆಯುತಿಹೆ

ಈ ಕವನದ ಕೊನೆಯ ಸಾಲುಗಳಲ್ಲಿ ಸೀಮಂತದ ಸೂಚನೆಗಳಿವೆ. ಇದನ್ನು ವಿಮರ್ಶಕ ಕುರ್ತಕೋಟಿ ಹೀಗೆ ಹೇಳಿದ್ದಾರೆ. "ಕುಪ್ಪಸ ತೊಡಿಸುವುದು, ಹೂ ಮುಡಿಸುವುದು, ಹಸಿರುಡುಗೆಯನ್ನು ತೊಡಿಸುವುದು ಇತ್ಯಾದಿ ತೃಪ್ತಿಯ ಪರಿಣತಿಯ ಪ್ರತೀಕಗಳಾಗಿವೆ. ಭೂಮಿಯ ಮೇಲೆ ಮಕ್ಕಳ ರಾಜ್ಯವಾಗಬೇಕಾದರೆ

ಮೊದಲು ಮನುಷ್ಯ ಮತ್ತು ಭೂಮಿಯ ಸಂಬಂಧ ನಿಜವಾದ ಅರ್ಥದಲ್ಲಿ ತಾಯಿ ಮಗುವಿನ ಸಂಬಂಧವಾಗಬೇಕು"[೧] ಎಂದು ಸೂಕ್ತವಾಗಿ ವಿಶ್ಲೇಷಿಸಿದ್ದಾರೆ.

ಭೂಮಿತಾಯಿಯನ್ನು ಕುರಿತಂತೆ ಬೇಂದ್ರೆಯವರ 'ವಸುಧಾ', 'ಸೌಭಾಗ್ಯದರ್ಶನ', 'ಇಳೆ' ಎಂದರೆ ಬರಿ ಮಣ್ಣಲ್ಲ ಇನ್ನೂ ಮುಂತಾದ ಕವನಗಳಲ್ಲಿ ಅವರ ಚಿಂತನಾಲಹರಿಯನ್ನು ಕಾಣಬಹುದಾಗಿದೆ.

ಮಹಾನುಭಾವರು:[೨] ಕವಿ ಬೇಂದ್ರೆಯವರು ಋತುಮಾನಗಳಿಗೆ ಸ್ಪಂದಿಸಿ ತಮ್ಮ 'ಮಹಾನುಭಾವರು' ಕವಿತೆಯಲ್ಲಿ ಬೇಸಿಗೆಕಾಲ, ಚಳಿಗಾಲ, ಮಳೆಗಾಲವನ್ನು ಹೀಗೆ ಬಣ್ಣಿಸಿದ್ದಾರೆ.

ಈ ಮಹಾನುಭಾವರೂ! ಮೂವರೂ! ಈವರೂ
ಹಿಮ್ಮಡಿ ಜಡಿಯುವರೂ! ಮೂಗಡಿಯವರೂ
ಮೂವರೂ! ಕಾವರೂ

ಈ ಮಹಾನುಭಾವರು ಮೂರು ಜನರೂ ಕಾಲಿನ ತನಕ ತಲೆಗೂದಲನ್ನು ಬಿಟ್ಟುಕೊಂಡು ಮೂರು ದಿಕ್ಕಿನಿಂದ ಬಂದವರು. ಈ ಮೂವರೂ ಕಾವರೂ ಎಂದರೆ ಮೂರು ಲೋಕವನ್ನು ರಕ್ಷಿಸಲು ಇರುವವರು ಎಂದು ಕವಿ ಬಣ್ಣಿಸಿದ್ದಾರೆ. ಮುಂದಿನ ಸಾಲುಗಳಲ್ಲಿ

ಬಿಸಿಯವರೂ।ಹಸಿಯವರೂ।ಚಳಚಳೀ
ಚಿಳಿಚಿಳಿ।ನಡುಗುವರೂ
ಮರಾ ಗಿಡಾ।
ಉಡುಗುವರು।ಚಿಗುರುವರು।ನಿಗುರುವರು।
ಹನ್ನೆರಡೂ ಕಾಲಾ। ಸುತ್ತುವರು।ಬಿತ್ತುವರು

ಹೀಗೆ ಬಿಸಿಯವರೂ ಎಂದರೆ ಬೇಸಿಗೆ ಕಾಲ, ಹಸಿಯವರೂ ಎಂದರೆ ಮಳೆಗಾಲ, ಚಳಿ ಚಳೀ ಎಂದರೆ ಚಳಿಗಾಲ ಈ ಮೂರು ವರ್ಷದ ಹನ್ನೆರಡು ತಿಂಗಳುಗಳ ಕಾಲ ಸುತ್ತಮರು ಎಂದರೆ ಕಾಲಚಕ್ರವನ್ನು ಕವಿ ಕಲ್ಪನೆಗೆ ತಂದಿದ್ದಾರೆ.

---

೧. ಡಿ.ಆರ್.ನಾಗರಾಜ, ಶಕ್ತಿ ಶಾರದೆಯ ಮೇಳ, ಪುಟ. ೫೮.
೨. ಮಹಾನುಭಾವರು – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೨೧೫.

ಒಬ್ಬರೂ। ಬೆಳಕು, ಸೂಸೀ।ಎತ್ತೂ।ಮುತ್ತೂವರೂ।

ಒಬ್ಬರು । ಮೈಗೆ ಸಿಕ್ಕರೂ। ಕೈಗೆ ಕಣ್ಣೆ ಸಿಗರು।ಆಪೊಗರು

ಒಬ್ಬರೂ ಹತ್ತಿದ್ದೂ। ಹತ್ತಿರಿದ್ದೂ। ಒಬ್ಬರನ್ನೊಬ್ಬರು ತಬ್ಬರೂ।

ಒಬ್ಬರು ಬೆಳಕಸೂಸಿ ಎಂದರೆ ಬೇಸಿಗೆ ಕಾಲದ ಸೂರ್ಯನ ಉದಯ ಮತ್ತು ಉದಾಯಾಸ್ತಮಾನದ ವರ್ಣನೆಯಾಗಿದೆ. ಹಾಗೆಯೇ ಮಳೆ ಮತ್ತು ಚಳಿಯ ವರ್ಣನೆಯನ್ನು ಹಾಗೂ ಅವುಗಳ ಗುಣಗಳನ್ನು ಕವಿ ಕಣ್ಣಿಗೆ ಕಟ್ಟಿಕೊಡುವುದರ ಮೂಲಕ ವರ್ಣಿಸಿದ್ದಾರೆ.

ಬೈರಾಗಿಯ ಹಾಡು[೧]: ಬೇಂದ್ರೆಯವರು ಕವಿತೆಯಲ್ಲಿ ಮನುಕುಲದ ಅಂತರಾಳದ ಧ್ವನಿ ಇದು. ಇದನ್ನು ಎಲ್ಲಾರೂ ಒಪ್ಪಿ ಆಚರಣೆಗೆ ತರಬೇಕು ಎಂದು ಹೀಗೆ ಹೇಳಿದ್ದಾರೆ.

ಇಕೋ ನೆಲ–ಅಕೋ ಜಲ
ಅದರ ಮೇಲೆ ಮರದ ಫಲ
ಮನದೊಳಿದೆ ಪಡೆದ ಛಲ
ಬೆಳವಗೆ ನೆಲವೆಲ್ಲ ಹೊಲ

ಭೂವಿ, ಜಲ, ಫಲ ಇವುಗಳಾವುವೂ ಸಹ ತಮಗೋಸ್ಕರವಾಗಿ ಇಲ್ಲ. ಇವೆಲ್ಲಾ ಪರರ ಉಪಕಾರಕ್ಕಾಗಿ ಇವೆ. ಇವೂ ಸಹ ಬೈರಾಗಿಯಂತೆ ವಿರಕ್ತ, ನಿರ್ಲಿಪ್ತ ಗುಣಗಳನ್ನು ಹೊಂದಿವೆ. ಹಾಗೆಯೇ ಮಾನವರಾದ ನೀವೂ ಸಹ ಪರರಿಗಾಗಿ ಬದುಕಿ ಎನ್ನುತ್ತಾ ಮಾನವನಿಗೆ ಆಸೆ ಮತ್ತು ಛಲ ಅವನನ್ನು ಕಾಡುವ ಗುಣಗಳು. ಇದರಿಂದ ಹೊರ ಬಾ ಎಂದು ಕವಿ ಕರೆನೀಡುತ್ತಿದ್ದಾರೆ ಹಾಗೆಯೇ

ಜಲಧಿವರೆಗು ಒಂದೆ ಕುಲ
ಅನ್ನವೆ ಧರ್ಮದ ಮೂಲ
ಪ್ರೀತಿಯೇ ಮೋಕ್ಷಕ್ಕೆ ಬಲ
ಇದೇ ಶೀಲ ಸರ್ವಕಾಲ॥ ಇಕೋ ನೆಲ.. . .

ಮಾನವನರೆಲ್ಲರೂ ಒಂದೇ ಕುಲದವರು. ಅನ್ನವೇ ಮಾನವನ ಜೀವನಾಧಾರದ ಮೂಲ ಎಂದು ಪರಿಪಾಲಿಸಿ ಪ್ರೀತಿಯ ಮೋಕ್ಷ ಹಾಗೂ

---

೧. ಬೈರಾಗಿಯ ಹಾಡು – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೫.

ನಡತೆಯ ಮಾರ್ಪಾಡು ಪ್ರಕೃತಿಯ ಉದಯದ ಚಿಹ್ನೆಗಳಾಗಿವೆ. ಹೀಗೆ ಪ್ರಕೃತಿಯ ಸಂಪನ್ಮೂಲಗಳಾದ ಭೂಮಿ, ಜಲ, ಫಲದ ಪರೋಕಪಕಾರೀ ತತ್ತ್ವವನ್ನು ತಿಳಿದು ಬಾಳಿ ಎಂದು ಕರೆನೀಡಿದ್ದಾರೆ.

'ಮಳೆ'[೧] ಕವನದಲ್ಲಿ ಬೇಂದ್ರೆಯವರು ಪ್ರಕೃತಿಯ ಬಗ್ಗೆ ವರ್ಣಿಸಿದ್ದಾರೆ. ಮಳೆ ಬರುವಂತಹ ವೇಳೆಯಲ್ಲಿ ಯಾರೂ ಕೂಡ ಮನೆಯ ಒಳಗೆ ಇರದೆ ಪ್ರಾಣಿ ಪಕ್ಷಿಗಳಂತೆ ನಾವೂ ಕೂಡ ಭೂಮಿಯಲ್ಲಿ ಮಳೆಯ ಜೊತೆ ಆನಂದಿಸೋಣ ಎನ್ನುವುದು ಕವಿಯ ವರ್ಣನೆಯಾಗಿದೆ.

ಮಳೆ ಬರುವ ಕಾಲಕ್ಕೆ
ಒಳಗ್ಯಾಕ ಕೂತೇವೂ
ಇಳೆಯೊಡನೆ ಜಳಕ ಮಾಡೋಣ
ನಾವೂನು, ಮೋಡಗಳ ಆಟ ನೋಡೋಣ

ದ.ರಾ.ಬೇಂದ್ರೆಯವರು ಪ್ರಕೃತಿಯಲ್ಲಿ ಆಗುವ ಬದಲಾವಣೆಗೆ ತಕ್ಕಂತೆ ಪ್ರಾಣಿಗಳು ಹೊಂದಿಕೊಳ್ಳುತ್ತವೆ. ಹಾಗೆಯೇ ಮಳೆಗಾಲದಲ್ಲಿ ಪ್ರಾಣಿಪಕ್ಷಿಗಳು ಹಾಗು ನಾವೂ ಕೂಡ ಗೂಡಿನಲ್ಲಿಯಾಗಲೀ, ಮನೆಯಲ್ಲೇ ಆಗಲಿ ಕೂರದೆ, ನಾವು ಮಳೆಯ ಜೊತೆಯಲ್ಲಿ ನೆನೆದು ಆನಂದಿಸೋಣ, ಮೋಡಗಳ ಜೊತೆ ನಾವು ಆಟ ಆಡೋಣ ಎಂದು ಈ ಕವನದಲ್ಲಿ ಬಣ್ಣಿಸಿದ್ದಾರೆ.

ಮಳೆ ಬರುವ ವೇಳೆಗೆ ಗುಡುಗು ಮಿಂಚು ಕಾಣಿಸುತ್ತದೆ. ಆ ವೇಳೆಯಲ್ಲಿ

ಮರಿಗುಡುಗು ಕಲೆವಾಗ
ಮಳೆಗಾಗಿ ಸೆಳೆವಾಗ
ಮರಗಿಡಗಳನ್ನು ಎಳೆವಾಗ
ನಾವ್ಯಾಕ, ಮನೆಯಲ್ಲಿ ಅವಿತು ಕೂತೇವೊ

ಗುಡುಗು ಬಂದಾಗ, ಗಾಳಿ ಬೀಸಿದಾಗ, ಜೋರುಗಾಳಿಗೆ ಪ್ರಕೃತಿಯಲ್ಲಿನ ಗಿಡಮರಗಳೆಲ್ಲಾ ನಲಿದಾಡುವಾಗ ನಾವುಗಳೇಕೆ ಮನೆಯ ಒಳಗೆ ಅವಿತು ಕೂರಬೇಕು ನಾವು ಕೂಡ ಹೊರಗೆ ಬಂದು ನಲಿಯೋಣ ಎಂದು ವರ್ಣಿಸಿದ್ದಾರೆ.

---

೧. ಮಳೆ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೨೩೬.

[illegible]

ಆಕಾಶದಲ್ಲಿ ಹಗ್ಗದಂತಹ, ಕಡ್ಡಿಯಂತಹ ಬೆಳಕು ಬರುವುದನ್ನು ಕವಿ ಹೀಗೆ ವರ್ಣಿಸಿದ್ದಾರೆ.

ಕೊಲ್ಮಿಂಚು ಇಣುಕಿಣುಕಿ
ಕಣ್ಣುಣಿಸಿ ಕೆಣಕೆಣಕಿ
ಬಾ ಗೆಣೆಯ ಹೊರಗೆ ಎನುವಾಗ
ಒಳಸೇರಿ ಹರೆ ಮೀರಿದ್ದಾಂಗ ಕುಳಿತೇವೂ

ಆಕಾಶದಲ್ಲಿ ಮಿಂಚು ಕಾಣಿಸಿ, ಸೆಕೆಂಡಿನಲ್ಲಿ ಮಾಯವಾಗುವುದು. ಅಂದರೆ ಕಣ್ಣುಬಿಟ್ಟು ಕಣ್ಣು ಮುಚ್ಚುವಷ್ಟರಲ್ಲಿ ಮಾಯವಾಗುವ ಮಿಂಚು ಕಣ್ಣನ್ನು ಮಿಟುಕಿಸುವಂತಹ ಸುಂದರ ಸೊಬಗನ್ನು ಸವಿಯದೆ ಮನೆಯ ಒಳಗೆ ಏಕೆ ಕೂರುವಿರಿ, ಬಾ ಗೆಳೆಯ ಮಳೆಯ ಸೊಬಗನ್ನು ಸವಿಯುವ ಎಂದು ವರ್ಣಿಸುತ್ತಾ ಇರುವುದು ಬೆಂದ್ರೆಯವರ ಆಶಯವಾಗಿದೆ.

"ಚಳಿ ಇರಲಿ ಮಳೆ ಬರಲಿ"[೧] ದತ್ತಾತ್ರೆಯ ರಾಮಚಂದ್ರ ಬೇಂದ್ರೆಯವರು ನಿಸರ್ಗ ವರ್ಣನೆಯ ಕವಿ. ಇವರು 'ಚಳಿ ಇರಲಿ ಮಳೆ ಬರಲಿ' ಎಂಬ ತಮ್ಮ ಕವನದಲ್ಲಿ ಋತುಮಾನಕ್ಕೆ ಹೊಂದಿಕೊಂಡು ನಾವು ಕುಣಿದು ನಲಿಯುವಾ ಎಂದು ಮಳೆಗಾಲದ ಚಿತ್ರಣವನ್ನು ಈ ಕವಿತೆಯಲ್ಲಿ ವರ್ಣಿಸಿದ್ದಾರೆ.

ಚಳಿ ಇರಲಿ ಮಳೆ ಬರಲಿ
ಮಂಜು ಸುರಿಯುತಲಿರಲಿ
ಬಿಸಿಲು ಕುದಿಸುತಲಿರಲಿ
ಮುಮ್ಮುಖದ ಋತುಮಾನ ಹೇಗು ಇರಲಿsss
ನಗುತ ಒಲಿವೆವು ನಾವು
ನಗುತ ಒಲಿಸುವೆವುsss

ಪ್ರಕೃತಿಯಲ್ಲಿ ಮಂಜು ಸುರಿಯುತ್ತಿರಲಿ, ಚಳಿ, ಮಳೆ, ಗಾಳಿಯೇ ಇರಲಿ, ಬಿಸಿಲಾಗಿರಲಿ ನಾವು ಋತುಮಾನಕ್ಕೆ ಹೊಂದಿಕೊಂಡು ನಗುತ ನಲಿಯುವಾ ನಗುತಾ ನಗುತಾ ಬದುಕುವ ಎಂಬುದು ಕವಿಯ ಆಶಯವಾಗಿದೆ.

---

೧. ಚಳಿ ಇರಲಿ ಮಳೆ ಬರಲಿ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೫.

ಏನೇ ಕಷ್ಟ ಬಂದರೂ ನಾವು ಪ್ರಕೃತಿಯ ಜೊತೆ ಜೊತೆಯಲ್ಲಿಯೇ ಆನಂದಿಸೋಣ.

ಏನೇ ಕಷ್ಟವು ಬರಲಿ; ಎಂಥ ನಷ್ಟನೇ ಇರಲಿ
ಇಷ್ಟವು ಅನಿಷ್ಟವೂ ಕೂಡಿ ಬರಲಿ
ದುಮ್ಮಾನ ಕಳೆವಂತೆ ಸುಮ್ಮಾನ ಹೊಳೆವಂತೆ
ಹಾಡಿ ನಲಿವೆವು ನಾವು
ಹಾಡಿ ನಲಿಸುವೆವುsss

ದ.ರಾ.ಬೇಂದ್ರೆಯವರು ಪ್ರಕೃತಿಗೆ ಹೊಂದಿಕೊಂಡು ಬದುಕಬೇಕು, ಏನೇ ಕಷ್ಟಬಂದರೂ ದೃತಿಗೆಡಬಾರದು, ಸುಖದುಃಖವನ್ನು ಅನುಭವಿಸುತ್ತಾ ಆಡಿ ನಲಿದು, ಇತರರನ್ನು ನಲಿಸೋಣ ಎಂಬುದು ಕವಿಯ ಆಶಯ.

ಬೇಂದ್ರೆಯವರ ಸಮಗ್ರ ಕಾವ್ಯದ ಹಾಗೂ ಅವರ ಬದುಕಿನದರ್ಶನದ ನಿಲುವಿಗೆ ಉತ್ತಮ ಉದಾಹರಣೆ ಎಂದರೆ ಅವರ 'ನಾದಲೀಲೆ'[೧] ಕವಿತೆ.

ಈ ಗೀತೆಯಲ್ಲಿ ಹಾಡು ಹೇಳುತ್ತಿರುವ ವ್ಯಕ್ತಿ ಒಬ್ಬ ಗಂಡಸು. ಆತ ನಿಸರ್ಗದಲ್ಲಿಯ ಅರುಣೋದಯ ಸಮಯದ ಮೂರು ದೃಶ್ಯಗಳನ್ನು ಮೂರು ನುಡಿಗಳಲ್ಲಿ ಬಣ್ಣಿಸಿ ಆತನ ನಲ್ಲೆಗೆ ಹೇಳಿದ್ದಾನೆ. ಅಂತಿಮ ಸಾಲಿನಲ್ಲಿ ಅವನ ಕೊಡಿಗೆಯೂ ಸಹ ಇದೆ.

ಕೋಲು ಸಖೀ, ಚಂದ್ರಮುಖೀ, ಕೋಲೆ ನಾದಲೀಲೆ।ಪಲ್ಲವಿ।
ಮುಂಜಾವದ ಎಲರ ಮೂಸಿ ನೋಡುತಿರುವೆ ನಲ್ಲೆ
ತರಳ ಎರಳೆ, ಚಿಗರೆ, ಚಿಗರೆ ಹೂವು ಹೂವು ಹುಲ್ಲೆ
ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ
ಅತ್ತಣಿಂದ ಬೇಟೆಗಾರ ಬರುವ ನಾನು ಒಲ್ಲೆ
ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ
ಕೋಳು ಸಖೀ. . . . . .

ಮುಂಜಾವಿನ ಹೊತ್ತಿನಲ್ಲಿ ಆಹ್ಲಾದಕರವಾದ ತಣ್ಣನೆಯ ಗಾಳಿಯು ಬೀಸುತ್ತಿರುತ್ತದೆ. ಕಾಡಿನ ಮುಗ್ಧ ಪ್ರಾಣಿಗಳಿಂದ ಚಿಗರೆಗಳು ಈ ಎಲ್ಲರನ್ನು

೧. ನಾದಲೀಲೆ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೫.

ಅಂದರೆ ಗಾಳಿಯನ್ನು ಮೂಸಿ ನೋಡುತ್ತಾ ಬದುಕಿನ ಆನಂದವನ್ನು ಸವಿಯುತ್ತವೆ. ಕವಿಯ ಸಾದು ಹಾಗೂ ಸುಂದರ ಪ್ರಾಣಿಗಳಾದ ಚಿಗರೆಗಳನ್ನಷ್ಟೆ ವರ್ಣಿಸುತ್ತಾನೆ. ತರಳ ಎರಳ ಎಂದರೆ ಪುಟ್ಟ ಚಿಗರೆ ಮರಿ, ಚಿಗುರ ಚಿಗರೆ ಹೂ ಹುಲ್ಲೆ ಇವೆಲ್ಲವೂ ಸಹ ಪ್ರಕೃತಿಯ ಸೃಷ್ಟಿಯನ್ನು ಬಯಸುತ್ತವೆ. ಬೆಳೆಯುವುದನ್ನು ಬಯಸುತ್ತವೆ. ಪ್ರಕೃತಿಯ ಹಂಬಲವನ್ನು ಈ ಎಳೆಯವಯಸ್ಸಿನ ಸಂಕೇತಗಳು ಹೇಳುತ್ತವೆ. ಈ ಸಾತ್ವಿಕ ಪ್ರಾಣಿಗಳ ಕಣ್ಣುಗಳ ಮುಂದೆ ಇರುವುದು ಕಂಗೊಳಿಸುವ ಕೆಂಪು ಅಂದರೆ ಅರುಣೋದಯ ಸೂರ್ಯೋದಯಕ್ಕಿಂತ ಮೊದಲು ಬಾನು ಕೆಂಪಾಗಿ ಕಾಣುವ ದೃಶ್ಯ ಇದು ಬದುಕಿನ ಉತ್ಸಾಹ ತುಂಬುವ ನೋಟ. ಆ ಮಂಜಿನ ಪರದೆಯ ಹಿಂದೆ ಅಡಗಿರುವವನು ಬೇಟೆಗಾರ ಅಂದರೆ ಮೃತ್ಯು. ಇದರ ಅರಿವಿಲ್ಲದೆ ಈ ಮುಗ್ಧ ಪ್ರಾಣಿಗಳು ಜೀವ ಸ್ನೇಹಿಯಾದ ಮುಂಜಾವಿನ ಗಾಳಿಯನ್ನು ಸವಿಯುತ್ತ ಆನಂದದಿಂದಿವೆ ಎಂದು ಕವಿ ಆನಂದದಿಂದ ಬಣ್ಣಿಸಿದ್ದಾರೆ.

> ಬೀರುತಿರುವ ಪ್ರಾಣವಾಯು ಹೀರುತಿಹವೆ ನೀರೆ
> ಕರೆವ ಕರುವು, ಕುಣಿವ ಮಣಕ. ತೊರೆವ ಗೋಗಭೀರೆ
> ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ
> ಕಾಣೆ ಕೊಳಲಿನವನ ಎನುವೆ, ಎಲ್ಲು ಇಹನು ಬಾರೆ
> ಬೀರುತಿರುವ ಪ್ರಾಣಿವಾಯು ಹೀರುತಿಹವೆ ನೀರೆ
> ಕೋಲು ಸಖೀ.......

ಎರಡನೇಯ ನುಡಿಯಲ್ಲಿಯೂ ಸಹ ಎಳೆಯ ಮುಗ್ಧ ಪ್ರಾಣಿಗಳ ಸಂಕೇತಗಳಿವೆ ನಾಡಿನಲ್ಲಿ ನೆಲೆಸಿದ ಗೋವುಗಳು, ಕರೆವ ಕರು, ಕುಣಿವ ಮಣಿಕ ಇವು ಸಂತಾನವನ್ನು ಬೆಳೆಸುವ ಉತ್ಸಾಹದಲ್ಲಿರುವ ಎಳೆ ಜೀವಿಗಳು. ಮುಂಜಾವಿನಲ್ಲಿ ಎಲ್ಲೆಲ್ಲೂ ಬೀಸುವ ಪ್ರಾಣವಾಯುವನ್ನು ಈ ದನ ಕರುಗಳ ಸಮೂಹವೂ ಸಹ ಹೀರುತ್ತದೆ. ಇವುಗಳಿಗೂ ಸಹ ಅರುಣೋದಯದ ಕೆಂಪು ಕಾಣುತ್ತಿದೆಯೇ ಹೊರತು ತಮ್ಮ ಹಿಂದೆ ಇರುವ ಮಂಜು ಕಾಣುತ್ತಿಲ್ಲ. ಈ ಗೋವುಗಳನ್ನು ರಕ್ಷಿಸಬೇಕಾದ, ಕೊಳಲು ಹಿಡಿದ ಗೋಪಾಲನು ಕವಿಯ ಕಣ್ಣಿಗೆ ಕಾಣುತ್ತಿಲ್ಲ, ಆದರೆ ಆತನು ಎಲ್ಲೆಲ್ಲೂ ಇರುವನು ಎಂದು ಕವಿಯ ಹೇಳಿಕೆ. ಹೀಗೆ ಕವಿಯು ಭಗವಂತನ ಇರುವಿಕೆಯ ಬಗ್ಗೆ ತಿಳಿಸುತ್ತಾನೆ ಹಾಗೆಯೇ ಮೂರನೇ ನುಡಿಯಲ್ಲಿ

ಬೆಳ್ಳಿ ಚುಕ್ಕೆ ಚಿಕ್ಕೆಯಾಗಿ ಮುಳುಗಿತಲ್ಲೆ; ಬಾಲೆ
ಮುಕುಲ, ಅಲರು, ಮಲರು, ಪಸರ ಕಂಡು ಕಣ್ಣು ಸೋಲೆ
ಕಂಗೊಳಿಸುವ ಕೆಂಪು ಮುಂದೆ ಕಂಗೆಡಿಸುವ ಮಂಜು ಹಿಂದೆ
ಕಾದಲನೆಡೆ ಬೇಡ ಬಹಳು ಕಾದಲೆ ಹೂಮಾಲೆ
ಬೆಳ್ಳಿ ಚುಕ್ಕೆ ಚಿಕ್ಕೆಯಾಗಿ ಮುಳುಗಿತಲ್ಲೆ ಬಾಲೆ
ಕೋಲು ಸಖೀ. . . . . . .

ಈ ನುಡಿಯಲ್ಲಿ ಸಂಸ್ಕೃತಿಯ ಮುಂದಿನ ಮೆಟ್ಟಿಲಾದ ಮಾನವನ ವಿಚಾರವಿದೆ. ಮಾನವರು ಪ್ರಾಣಿಗಳಿಗಿಂತಲೂ ಹೆಚ್ಚಿನ ಪ್ರಜ್ಞೆಯುಳ್ಳವರು. ವಿಕಾಸದ ಕಾಲಮಾನದಲ್ಲಿ ಹೇಳುವುದಾದರೆ ಪ್ರಾಣಿಗಳು ಅರುಣೋದಯ ಕಾಲವಾದರೆ, ಅರುಣೋದಯದ ನಂತರದ ಸೂರ್ಯೋದಯದ ಕಾಲದವರು ಮಾನವರುಅದನ್ನು ತೋರಿಸಲೆಂದು ಕವಿ ಬೆಳ್ಳಿ ಚುಕ್ಕೆಯು ಈಗ ಚಿಕ್ಕೆಯಾಗಿ ಮುಳುಗಿದೆ ಎಂದು ಹೇಳುತ್ತಾರೆ. ಆದರೇನು ಮಾನವರೂ ಸಹ ಪ್ರಕೃತಿಯ ಕೂಸುಗಳೇ ಬದುಕಿನ ಮುಂದುವರಿಕೆಯು ಪ್ರಕೃತಿಯ ಅಪೇಕ್ಷೆಯಾಗಿದೆ. ಆದುದರಿಂದಲೇ ಇಲ್ಲಿ ಕಾದಲೆಯು ಅಂದರೆ ಪ್ರಿಯತಮೆಯು ತನ್ನ ಕಾದಲನಿಗೆ ಬೇಡಲು ಬರುತ್ತಿದ್ದಾಳೆ. ಅವಳು ಬೇಡುತ್ತಿರುವುದು ಪ್ರಣಯವನ್ನು ಪ್ರಣಯದ ಸಂಕೇತವಾದ ಹೂಮಾಲೆಯೇ ಅವಳಾಗಿದ್ದಾಳೆ. ಆದರೆ ಈ ಮಾನವನಿಗೂ ಸಹ ಕಣ್ಣು ಮುಂದಿನ ಕೆಂಪು ಕಾಣುತ್ತಿದೆಯೇ ಹೊರತು ಅದರ ಹಿಂದಿನ ಮಂಜು ಕಾಣುತ್ತಿಲ್ಲ. ಇಲ್ಲಿ ಕೆಂಪು ಬಣ್ಣವು ಜೀವನದ ಸಂಕೇತವಾಗಿ ಉತ್ಸಾಹದ ಸಂಕೇತವಾಗಿ ಬಂದಿವೆ. ಮಂಜು ನಮ್ಮ ಅರಿವಿಗೆ ಕಾಣದ ಮೃತ್ಯುವಿನ ಸಂಕೇತವಾಗಿದೆ. ಹೀಗೆ ಕೊನೆಯ ನುಡಿಯಲಿ

ಬೇಟೆಯಲ್ಲ; ಆಟವೆಲ್ಲ: ಬೇಟದ ಬಗೆ ನಾರಿ
ಮುಗಿಲ ಬಾಯ ಗಾಳಿಕೊಳು ಬೆಳಕಹಾಡ ಬೀರಿ
ಕಂಗೋಳಿಸುವ ಕೆಂಪು ಇರಲಿ, ಕಂಗೆಡಿಸುವ ಮಂಜು ಬರಲಿ
ಕಳೆಯಲಿಲ್ಲೆ ಕತ್ತಲಂಥ ಕತ್ತಲವೇ ಜಾರಿ
ಬೇಟೆಯಲ್ಲ; ಆಟವೆಲ್ಲ; ಬೇಟದ ಬಗೆ, ನಾರಿ,
ಕೋಲು ಸಖೀ . . . . . .

ಇಲ್ಲಿ ವಿಶ್ವಾತ್ಮನ ಆಟವೆನ್ನುವ ದರ್ಶನವಿದೆ. ಆದುದರಿಂದ ಇದು ಬೇಟೆಯಲ್ಲ ಇದೆಲ್ಲಾ ಅವನ ಆಟ, ಇದು ಬೇಟೆ, ಅಂದರೆ ಪ್ರಣಯದ ಒಂದು ರೀತಿ ಎಂದು

ಕವಿ ಹೇಳುತ್ತಾರೆ. ಈ ಪ್ರಣಯವು ಪ್ರಕೃತಿ ಹಾಗೂ ವಿಶ್ವಾತ್ಮನಾದ ಪುರುಷ ಇಬರಿಬ್ಬರ ನಡುವಿನ ಸಂಬಂಧ. ಈ ಪುರುಷ ಸ್ವರೂಪವನ್ನು ಕವಿಯು ಮುಗಿಲ ಬಾಯ ಗಾಳಿಗೊಳಲು ಬೆಳಕ ಹಾಡ ಬೀರಿ ಎನ್ನುವ ಒಂದು ಅದ್ಭುತ ರೂಪಕವನ್ನು ಬಳಸಿದ್ದಾನೆ.

ಅವಿಶ್ವಾತ್ಮಕನಿಗೆ ಮುಗಿಲೇ ಬಾಯಿ ಗಾಳಿಯೇ ಅವನ ಕೊಳಲು ಹಾಗೂ ಬೆಳಕೇ ಆತನ ಹಾಡು. ಮುಗಿಲು, ಗಾಳಿ ಹಾಗೂ ಬೆಳಕು ಇವು ಪಂಚ ಮಹಾ ಭೂತಗಳಾದ ಭೂಮಿ, ಗಾಳಿ, ಬೆಂಕಿ, ನೀರು, ಆಕಾಶ ಇವುಗಳಲ್ಲಿ ಮೂರು ಮಹಾಭೂತಗಳು ಅಂದರೆ ಆಕಾಶ, ಗಾಳಿ, ಬೆಂಕಿ ಇವುಗಳ ಸಂಕೇತವಾಗಿದೆ ಎನ್ನುವುದನ್ನು ಗಮನಿಸಬಹುದಾಗಿದೆ. ಹೀಗೆ ನಾದಲೀಲೆಯಲ್ಲಿ ಬಣ್ಣಿಸಿದ್ದಾರೆ.

ಚಿಗರಿ ಗಂಗಳ ಚಲುವಿ[೧]: ಬೇಂದ್ರೆಯವರು ತಮ್ಮ ಕವನದಲ್ಲಿ ಭೂಮಿತಾಯಿ-ಯನ್ನು 'ಚಿಗರಿಗಂಗಳ ಚಿಲುವಿ' ಎಂದು ಕರೆದಿದ್ದಾರೆ. ಚಿಗರಿಯ ಕಣ್ಣುಗಳು ಸೌಂದರ್ಯಕ್ಕೆ ಹೆಸರಾದಂತಹವು. ಆದರೆ ಈ ಕವನದಲ್ಲಿ ಭೂಮಿತಾಯಿ ಸುಂದರ ಕಣ್ಣುಗಳಿಗಾಗಿ ಚಿಗರಿಗಂಗಳ ಚಲುವೆಗಿಂತಲೂ ಅವಳು ಇಲ್ಲಿ ಹೆದರಿದ ಜಿಂಕೆ. ಹೆದರಿದ ಜಿಂಕೆ ನೋಡುವವರಿಗೆ ಎದ್ದು ಕಾಣುವ ಸಂಗತಿ ಎಂದರೆ ಜಿಂಕೆಯ ಕಣ್ಣುಗಳು ಅತ್ತಿತ್ತ ಚಂಚಲವಾಗಿ ಚಲಿಸುವ ಬೆದರಿದ ಕಣ್ಣುಗಳು, ಈ ಕವನದ ಸಾಲುಗಳು ಹೀಗಿವೆ.

ಹೂಳಿಹಳ್ಳ ತೊರೆದಾವೋ
ಗೆಣಿಹಕ್ಕಿ ಬೆರೆದಾವೋ
ಆಗದವರ ಹೊಟ್ಟೆ ಉರದಾವೋ
ಗೆಣೆಯಾ ಉರದಾವ
ಅಂಥವರ ದಿಟ್ಟ ಮನಿಮುರದಾವ
ಅದನ ತಾ ಕಂಡು ಕೊರಗ್ಯಾಲೊ
ಮರುಗ್ಯಾಲೋ
ಸೊರಗ್ಯಾಲೋ
ಹೂ ಕಾಯಿ ಹಣ್ಣು ತುಂಬಿದ ಬನದ್ಯಾಗ॥ ಚಿಗುರಿಗಂಗಳ.....

ಈ ನುಡಿಯು ಪ್ರಾರಂಭವಾಗುವುದು ಸಮೃದ್ಧ ನಿಸರ್ಗದ ವರ್ಣನೆ-ಯೊಂದಿಗೆ. ಪ್ರಕೃತಿ ಸಂಪನ್ಮೂಲಗಳಿಂದ ಹಾಗೂ ಜೀವರಾಶಿಯ ಬೆಳವಣಿಗೆಗೆ ಅವಶ್ಯಕವಿರುವ ಹೊಳೆಹಳ್ಳಗಳು ತೊರೆಯುತ್ತವೆ. ಅಂದರೆ ತುಂಬಿದ ತೊರೆ

೧. ಚಿಗರಿಗಂಗಳ ಚಲುವಿ – ಔದುಂಬರ ಗಾಥೆ, ಸಂಪುಟ. ೪, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೧೨.

ಸಮೃದ್ಧವಾಗಿ ಹರಿಯುತ್ತದೆ. ಈ ಸಂಪನ್ಮೂಲಗಳನ್ನು ಭೋಗಿಸುವ ಜೀವರಾಶಿ-ಯಾದ ಹಕ್ಕಿಗಳು ಒಂದಕ್ಕೊಂದು ಬೆರೆತಿವೆ. ಇದೆಲ್ಲಾ ಮನಸ್ಸನ್ನು ಆನಂದ-ಪಡಿಸುವ ನೋಟವಾಗಿದೆ. ಆದರೆ ಈ ಸಾಮರಸ್ಯದ ಪರಿಸ್ಥಿತಿಗೆ ಈ ಭಂಗ ಬಂದಿದೆ.

ಆಗದವರ ಹೊಟ್ಟೆ ಉರದಾವೋ
ಗೆಣೆಯಾ ಊರದಾವs
ಅಂಥವರ ದಿಟ್ಟೆ ಮನಿಮುರದಾವ;

ನಿಸರ್ಗದ ಈ ಸಾಮರಸ್ಯವನ್ನು ಸಡಿಸಲಾರದ ಜೀವಿ ಇಲ್ಲೊಂದಿದೆ. ಅದು ಮಾನವ ಜೀವಿ ಮಾನವನ ಹೊರತಾಗಿ ಉಳಿದೆಲ್ಲ ಪಶು-ಪಕ್ಷಿಗಳನ್ನು ಆಧಿವರ್ಗ ಜೀವಿಗಳೆನ್ನಬಹುದು. ಈ ಅಮಾಯಕ ಜೀವಿಗಳು ನಿಸರ್ಗದೊಡನೆ ಒಂದಾಗಿ ಬಾಳುತ್ತಿವೆ. ಆದರೆ ಮಾನವ ಎನ್ನುವ ಈ ಜೀವಿ ದುರಾಸೆ ಬಹಳ. ಪ್ರಕೃತಿಯ ಸಂಪತ್ತನ್ನೆಲ್ಲಾ ತಾನೇ ಭೋಗಿಸುವ ಸ್ವಾರ್ಥ ಈ ಜೀವಿಗೆ ಬೇರೆ ಜೀವಿಗಳ ಸೌಮ್ಯವನ್ನು ಕಂಡರೆ ಸಹಿಸಲಾಗುವುದಿಲ್ಲ. ಇವನಿಗೆ ಉಳಿದ ಜೀವಿಗಳ ಮೇಲೆ ಹೊಟ್ಟೆಕಿಚ್ಚು ಇಷ್ಟೇ ಅಲ್ಲ ಇಂಥವರ ಕೆಟ್ಟ ದೃಷ್ಟಿಯಿಂದಾಗಿ 'ಮನಿಮುರುದಾವ' ಇಲ್ಲಿಯವರೆಗೆ ಒಂದು ಕ್ರಮದಿಂದ ನಡೆಯುತ್ತಿದ್ದ ಎಲ್ಲಾ ಜೀವಿಗಳಿಗೆ ನೆಲೆಯಾದ ನಿಸರ್ಗದ ಆಶ್ರಯ ಈ ಭಗ್ನವಾಗುತ್ತಿದೆ. ಆದರೆ ಭೂಮಿತಾಯಿ ನಿಸ್ಸಹಾಯಕಳು ತನ್ನ ಒಡಲೆಲ್ಲ ಹೂವು, ಕಾಯಿ, ಹಾಗೂ ಹಣ್ಣುಗಳಿಂದ ತುಂಬಿದೆ. ಅದನ್ನೆಲ್ಲಾ ದುರಾಸೆಯಿಂದ ದೋಚುವವರನ್ನು ಅವಳು ತಡೆಯಲಾಗದೆ ಕೊರಗುತ್ತಿದ್ದಾಳೆ, ಮರುಗುತ್ತಿದ್ದಾಳೆ ಹಾಗೂ ಈ ಶೋಷಣೆಯಿಂದ ಸೊರಗುತ್ತಿದ್ದಾಳೆ. ಆದುದರಿಂದ ಬೆದರಿ ಓಡಲು ಯತ್ನಿಸುವ ಹರಿಣಿಯಂತೆ ಬೆದರಿ ನಿಂತಿದ್ದಾಳೆ. ಯಾವ ಗಳಿಗೆಯಲ್ಲಿ ಯಾರು ಆಕ್ರಮಣ ಮಾಡುತ್ತಾರೋ ಎಂದು ಬೆದರಿ ನಿಂತಿದ್ದಾಳೆ. ಸ್ಥೈರ್ಯ ಹಾಗೂ ಧೈರ್ಯವನ್ನು ಕಳೆದುಕೊಂಡ ಹರಿಣಿ ಇವಳು ಹಾಗೆಯೇ ಎರಡನೆಯ ನುಡಿಯಲ್ಲಿ ಆಕ್ರಮಣ ಚಿತ್ರವಿದೆ.

ಬ್ಯಾಟಿ ನಾಯೊಂದರ್ಯಾವೋ
ಹಸುಜೀವ ಬೆದರ್ಯಾವೋ
ಗಳಗಳನೆ ಗಡದೇಲಿ ಉದರ್ಯಾವೋ
ಗೆಣೆಯಾ ಉದರ್ಯಾವs
ದಿನ್ನಿ ಮಡ್ಡಿ ಗುಡ್ಡ ಅದರ್ಯಾವ;

ಅದನ ತಾ ಕಂಡು ನೊಂದ್ಯಾಳೋ

ಬೆಂದ್ಯಾಳೋ

ಅಂದ್ಯಾಳೋ

ಇದು ಎಂಥ ಜೀವನ ಬ್ಯಾಟಿ ಹಾಡೇ ಹಗಲ॥ ಚಿಗರಿಗಂಗಳ....

ಬೇಂದ್ರೆ ಈ ನುಡಿಯಲ್ಲಿ ಪಳಗಿಸಿದ ಬೇಟೆಯ ನಾಯಿಗಳ ಸಂಕೇತವನ್ನು ಬಳಸುತ್ತಿದ್ದಾನೆ. ಮಾನವನ ನಾಗರಿಕತೆಯಲ್ಲಿ ಜರುಗಿದ ಆಕ್ರಮಣಕಾರಿ ಚಿತ್ರವಿಲ್ಲಿದೆ. ಈ ಬೇಟೆಗೆ ಹಸುಜೀವ ಬೆದರ್ಯಾವೋ ಹಸು ಅಂದರೆ ಸಾಧು ಪ್ರಾಣಿಗಳು.

ಭಾರತ ದೇಶವನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು. ಪ್ರಾಚೀನ ಕಾಲದಿಂದಲೂ ಈ ದೇಶದ ಮೇಲೆ ಆಕ್ರಮಣಗಳು ನಡೆಯುತ್ತಲೇ ಇವೆ. ಸುಸಂಸ್ಕೃತರಾದ ಹಾಗೂ ಆ ಕಾರಣದಿಂದಲೇ ದುರ್ಬಲರಾದ ಇಲ್ಲಿಯ ಜನರು ಆಕ್ರಮಣಕಾರರಿಂದ ಅತ್ಯಾಚಾರಕ್ಕೆ ಒಳಗಾಗುತ್ತಲೇ ಬಂದಿದ್ದಾರೆ. ಈ ಆಕ್ರಮಣಕಾರರಿಂದ ಪ್ರಕೃತಿಯೂ ಸಹ ಕಂಪಿಸಿದೆ. ಗಿಡದ ಎಲೆಗಳು ಗಳಗಳನೆ ಉದರಿವೆ. ಅಷ್ಟೇ ಏಕೆ? ನಿರ್ಜೀವ ವಸ್ತುವಾದ ದಿನ್ನಿ, ಮಡ್ಡಿ, ಗುಡ್ಡ, ಸಹ ನಡುಗಿವೆ. ವಸುಂಧರೆಗೆ ಪ್ರತಿ ಜೀವಿಯೂ, ಸಸ್ಯವೇ ಇರಲಿ ಅಥವಾ ಚಿಕ್ಕ ಪ್ರಾಣಿಯೇ ಇರಲಿ, ತನ್ನ ಮಗುವೆ. ಹಾಗಾಗಿ ಇಲ್ಲಿ ನಡೆಯುತ್ತಿರುವ 'ಜೀವದ ಬೇಟೆ'ಯನ್ನು ಕಂಡು ಅವಳು ಶೋಕಿಸುತ್ತಿದ್ದಾಳೆ. ಮಾನವನ ಕ್ರಾಂತಿ ಹೆಚ್ಚಾಗಿದೆ. ಇದೀಗ ಆತ ರಾಜ್ಯವನ್ನು ಕಟ್ಟಿಕೊಂಡಿದ್ದಾನೆ. ಪರ ರಾಜ್ಯಗಳನ್ನು ಆಕ್ರಮಿಸಿ ಚಕ್ರವರ್ತಿಯಾಗುತ್ತಿದ್ದಾನೆ. ಆದರ ನಾಗರೀಕತೆಯ ಈ ಆಟದಲ್ಲಿ ಸ್ವತಃ ಮಾನವನೇ ಬಲಿಯಾಗುತ್ತಿದ್ದಾನೆ.

ಆಳುಗಳ ಹೋರಾಟ

ಆಳುವವರಿಗೆ ಆಟ

ಗಾಳಕ್ಕೆ ಸಿಕ್ಕ ಮೀನದ ಗೋಳಾಟ

ಗೆಣೆಯಾ ಗೋಳಾಟೋ

ಗೆದ್ದವರ ಇದ್ದವರ ಹಾರಾಟ

ಅರೆಸತ್ತ ಜೀವಾ ಕೊಳೆತ್ಯಾವೋ

ಹುಳತ್ಯಾವೋ

ಅಳತ್ಯಾವೋ

ಹಸುಗೂಸು ತಿರುಗಿ ಹೊಟ್ಯಾಗ ಹುಗಿದ್ವಾಂಗ॥ ಚಿಗರಿಗಂಗಳ

ಈ ಹೋರಾಟದಲ್ಲಿ ಗೆದ್ದವರು ಹಾಗೂ ಬದುಕಿದ್ದವರು ಸತ್ತವರ ಮೇಲೆ ಬಾವುಟ ಹಾರಿಸುತ್ತಾರೆ. ಸೋತು ಬದುಕುಳಿದವರ ಪಾಡು ನಾಯಿಪಾಡು. ಅವರು ಅರೆ ಸತ್ತಂತೆ ಬದುಕಿದ್ದಾರೆ. ಅವರ ಬದುಕು ಕೊಳೆಟು ಹೋಗುತ್ತಿದೆ. ಹುಳುತು ಹೋಗುತ್ತದೆ, ಅಳುವುದೊಂದೇ ಅವರಿಗೆ ಉಳಿದ ಬದುಕು. ಇದನ್ನು ಕಂಡ ಭೂಮಿತಾಯಿಗೆ ಹೇಗೆ ಅನಿಸುತ್ತದೆ?

ತನ್ನ ತಾ ಸುತ್ತ್ಯಾಳೋ

ಹೊತ್ತಿನ ಬೆನ್ಹತ್ತ್ಯಾಳೊ

ತಿಂಗಳನ ಬಗಲಾಗೆತ್ತ್ಯಾಳೊ

ಗೆಣೆಯಾ ಎತ್ತ್ಯಾಳೊ

ಉಕ್ಕುಕ್ಕುವ ದುಃಖ ಒಳಗೊತ್ತಾಳೊ

ನಿಂತ ನೆಲವೆಂದ ಕಡಿಲ್ಯಾಕೊ

ಬಡಿಲ್ಯಾಕೊ

ಒಡಿಲ್ಯಾಕೊ

ಒಡೆವ್ಯಲ್ಲೋ ಮಗನೇ ಉಸಿರಿದ್ದೊಡಲಂತ್ಯಾಳೊ ॥ಚಿಗರಿಗಂಗಳ॥

ಇಲ್ಲಿ ಭೂಮಿಯು ತನ್ನ ಅಕ್ಷದ ಸುತ್ತಲೂ ತಿರುಗುವ ವಾಸ್ತವವನ್ನೂ ಹೇಳುತ್ತಿದೆ. ಅದರಂತೆ ಹೊತ್ತಿನ ಬೆನ್ಹತ್ತ್ಯಾಳೊ' ಎನ್ನುವ ಸಾಲು ಅವಳು ತನ್ನ ದುಃಖಗಳನ್ನು ನಿವಾರಿಸಲು ಕಾಲವನ್ನು ಕಾಯುತ್ತಿದ್ದಾಳೆ ಎನ್ನುವ ಅರ್ಥ ಜೊತೆಗೆ ಸೂರ್ಯನ ಸುತ್ತಲೂ ತಿರುಗುವ ಭೂಮಿಯನ್ನು ಸಹ ಸೂಚಿಸುತ್ತದೆ. ಇಲ್ಲಿ ಪ್ರಕೃತಿಯ ಒಳನೋಟ ಅದ್ಭುತವಾಗಿದೆ. ಅಂದರಂತೆಯೇ ಚಂದ್ರನು ಭೂಮಿಯ ಸುತ್ತಲೂ ತಿರುಗುತ್ತಿರುವ ವಾಸ್ತವವನ್ನೂ ಒಳಗೊಂಡಿದೆ.

ಇಂತಹ ಭೂಮಿತಾಯಿ ತನ್ನ ದುಃಖವನ್ನು ತನ್ನೊಳಗೆ ಒತ್ತಿ ಹಿಡಿದುಕೊಂಡು ಮಾನವರಿಗೆ ಅಂಗಲಾಚುತ್ತಿದ್ದಾಳೆ. ನನ್ನನ್ನು ನಿರ್ಜೀವ ನೆಲವೆಂದು ತಿಳಿದು ಕಡಿಯಬೇಡ, ನಾನು ಕೇವಲ ಬಡವೆ ಅಲ್ಲ ನಾನು ಉಸಿರಾಡುವ ಒಡಲು, ಯಾಕೆಂದರೆ ನನ್ನ ಉಸಿರಿನಿಂದಲೇ ಬದುಕುತ್ತಿವೆ ನನ್ನಲ್ಲಿಯ ಕೋಟಿ ಕೋಟಿ ಜೀವಿಗಳು ಎಂದು ಕವಿ ಭೂಮಿತಾಯಿಯ ಮೇಲೆ

ಮಾನವನು ಕ್ರೌರ್ಯವನ್ನು ಎಸಗುತ್ತಿರುವುದನ್ನು ನಿಲ್ಲಿಸಲಿ ಎಂದು ಇಲ್ಲಿ ಹೇಳಿದ್ದಾರೆ.

ಹೂತದ ಹುಣಸಿ:[೧] "ಹೂತದ ಹುಣಸಿ ಕವನವು ಹಳ್ಳಿಯ ವ್ಯಕ್ತಿಯೊಬ್ಬನ ಚಿತ್ರವನ್ನು ಕೊಡುತ್ತದೆ. ಕಡು ಬೇಸಿಗೆಯಲ್ಲಿ ತನ್ನ ಹೊಲದ ಕಡೆಗೆ ತೆರಳುತ್ತಿದ್ದ ಹಳ್ಳಿಗನೊಬ್ಬನು ಹೂವು ಬಿಟ್ಟಂತಹ ಹುಣಸಿಯ ಮರವನ್ನು ನೋಡಿದಾಗ ಅದರಲ್ಲಿ ಚೆಲುವಿಕೆಯನ್ನು ಗುರುತಿಸುವ ಆ ಚೆಲುವಿನಲ್ಲೇ ಪರವಶನಾಗುವ, ಹಾಗೂ ಹಗಲುಗನಿಸನಲ್ಲಿ ತೇಲಿಹೋಗುವ ಚಿತ್ರವನ್ನು ಈ ಕವನದಲ್ಲಿ ನೀಡಲಾಗಿದೆ.

ಹೂತ್ಯದ ಹುಣಸೀಯ ಚಿಗುರು
ಮದರಂಗಿ ಬಣ್ಣದುಗುರು
ರುಚಿಗೆ ಹುಳಿಯೊಗರು
ನೋಡ್ಯೆ ಜೀವಕ್ಕೆನಿಸಿತ್ಯ ಹಗುರು॥ ಹೂತ್ಯದ

ಹಳ್ಳಿಯ ವ್ಯಕ್ತಿಯಾದ ಈತನಿಗೆ ಈ ಕೆಂಪು ಬಣ್ಣದ ಹೂವು ಹಳ್ಳಿಯ ಹೆಣ್ಣುಮಗಳು ತಮ್ಮ ಉಗುರುಗಳಿಗೆ ಹೆಚ್ಚಿಕೊಂಡಂತಹ ಮದರಂಗಿಯ ಕೆಂಪು ಬಣ್ಣವನ್ನು ಸ್ಮರಣೆಯಲ್ಲಿ ತರುತ್ತದೆ. ಅಂದರೆ ಈತ ಬದುಕನ್ನೂ ತೆರೆದ ಕಣ್ಣುಗಳಿಂದ ನೋಡಬಲ್ಲ ಹಾಗೂ ಅನುಭವಿಸಬಲ್ಲ, ರಸಿಕ ಮನುಷ್ಯ ಎನ್ನುವುದು ಸ್ಪಷ್ಟವಾಗುತ್ತದೆ. ನಂತರ ಆ ಚಿಗುರಿನ ರುಚಿಯನ್ನು ಈತ ಹುಳಿ ಹಾಗೂ ಒಗರು ಎಂದು ಅನುಭವಿಸುತ್ತಾನೆ. ಪ್ರಕೃತಿ ಧರ್ಮವನ್ನು ಅನುಸರಿಸುತ್ತಿರುವ ಹುಣಸಿಯ ಮರದ ಚಿಗುರು ಇರಬೇಕಾದುದ್ದೇ ಹೀಗೆ। ಅದು ಹೀಗಿದ್ದರೇನೇ ಆತನಿಗೆ ಸಮಾಧಾನ ಸಿಗುವುದು. ಆದುದರಿಂದಲೇ ಆತ ಹೇಳುವುದು 'ನೋಡ್ಯೆ ಜೀವಕ್ಕನಿಸಿತ' ಹುಣಸಿಯು ಚಿಗುರನ್ನು ನೋಡಿದ ಬಳಿಕ ಈತನ ನೋಟವು ಸಹಜವಾಗಿ ಹುಣಸೆ ಮರದ ರಂಬೆಯ ಕಡೆಗೆ ಹರಿಯುತ್ತದೆ. ಈತನಿಗೆ ಆ ರೆಂಬೆಗಳು ಕಾಣುವ ಪರಿ ಹೀಗಿದೆ.

ಉಗುರ್ಗೆಂಪು ಹಸಿರು ಬಿಳಿನಿಂಬಿ
ಹುಣಸಿಯಾ ರೆಂಬಿ

---

೧. ಹೂತದ ಹುಣಸಿ – ಔದುಂಬರ ಗಾಥೆ, ಸಂಪುಟ. ೩, ವಿನ್ಯಾಸ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ, ಪುಟ ೨೫.

ಚಿಗತೀತೇನೊ ಎಂಬಿ

ಕಾಮ'ನ ಬಿಲ್ಲಿನಾ ಕೊಂಬಿ॥ಹೂತ'ದ

ಈ ರೆಂಬೆಗೆ ಉಗುರಿನ ಕೆಂಪಿದೆ ಹಾಗೂ ಇನ್ನೂ ಹಣ್ಣಾಗದಿರುವ ಬಿಳಿ ಹಸಿರು ನಿಂಬೆಯ ಬಣ್ಣವಿದೆ. ಕಾಮನಬಿಲ್ಲಿನ ತುದಿಯ ಚಿಗಿತಂತೆ ಇವನಿಗೆ ಅದು ಭಾಸವಾಗುತ್ತದೆ. ಕೆಂಪು, ಹಳದಿ ಹಾಗೂ ನೀಲಿ ಬಣ್ಣಗಳಿಂದ ಕೂಡಿದ ಕಾಮನ ಬಿಲ್ಲಿನ ವರ್ಣ ವ್ಯವಸ್ಥೆಯು ಈತನಿಗೆ ಹುಣಸಿಮರದ ರೆಂಬೆಯಲ್ಲಿ ಕಂಡರೆ ಆಶ್ಚರ್ಯವಿಲ್ಲ.

ಹುಣಸಿಮರವು ಹೂವು ಬಿಟ್ಟು ಸುಂದರವಾಗಿದ್ದನ್ನು ಗ್ರಹಿಸಿದ ಇವನ ನೇತ್ರೇಂದ್ರಿಯಕ್ಕೆ ಖುಷಿಯಾಯಿತು. ಚಿಗುರನ್ನು ತಿಂದ ಇವನ ನಾಲಿಗೆಯೂ ಖುಷಿಯಾಯಿತು, ಹುಣಸಿಯ ಚೆಲುವಿನ್ಲಲಿ ಪರವಶನಾಗಿದ್ದ ಇವನ ಸ್ಪರ್ಶೇಂದ್ರಿಯಕ್ಕೆ ತನ್ನ ಸುತ್ತಮುತ್ತಲಿನ ಪ್ರಕೃತಿಯ ವಾಸ್ತ ಮುಖದ ಅಂದರೆ ಬಿಸಿಲಿನ ಅನುಭವವಾಗುತ್ತದೆ.

ಬ್ಯಾಸಿಗೆ ಹೊಡೆದ'ದ ಬಿಸಿಲಿನ ಡೇರಿ

ಮಧ್ಯಾಹ್ನದಾ ಪಾಹರೆ

ಯಾರಿಗಿಲ್ಲ ಹ್ವಾರೆ

ಸದ್ದು ಸುಳಿವು ಇಲ್ಲ ಬ್ಯಾರೆ॥ ಹೂತ'ದ

ಬಿರು ಬೇಸಿಗೆಯಕಾಲ ಇದೇನು ಕಡೆತನಕ ಇರುವಂತಹ ಋತುವಲ್ಲ. ಎಲ್ಲ ಅಲೆಮಾರಿಗಳಂತೆ ಬೇಸಿಗೆಯೂ ಸಹ ಈತನ ಊರಿನಲ್ಲಿ ಇದೀಗ ಡೇರೆ ಹೊಡೆದುಕೊಂಡು ಕೂತಿದೆ. ಕವಿಯ ಊರು ಬಯಲು ಸೀಮೆಯಲ್ಲಿರುವ ಒಂದು ಹಳ್ಳಿ. ಅಲ್ಲೊ ಇಲ್ಲೊ ಇರುವ ಬೇವಿನ ಅಥವಾ ಹುಣಸಿಮರಗಳನ್ನು ಮಾತ್ರ ಇಲ್ಲಿ ಕಾಣಬಹುದಾಗಿದೆ.

ಡೇರೆಯನ್ನು ಹೊಡೆದಿರುವವರು ಇಂದಿಲ್ಲ ನಾಳೆ ಕಿತ್ತುಕೊಂಡು ಹೋಗುತ್ತಾರೆ. ಬೇಸಿಗೆಯೂ ಹೋಗುವಂತಹದೇ. ಈ ವ್ಯಕ್ತಿಯೂ ಆ ಕಾಲಕ್ಕಾಗಿ ಕಾಯುತ್ತಾನೆ. ಆದರೆ ಬಿಸಿಲು ಮಾತ್ರ ಸದ್ಯದ ಗಳಿಗೆಯಲ್ಲಿ ತನ್ನ ಡೇರೆಯ ಹೊರಗೆ ಮಧ್ಯಾಹ್ನದ ಪಾಲಿಯ ಕಾವಲುಗಾರನಂತೆ ಪಹರೆ ಮಾಡುತ್ತಿದೆ. ಬೇಸಿಗೆ ಬಿಸಿಲಿಗಾದರೂ ಪಹರೆ ಕಾಯುವ ಕೆಲಸವಿದೆ. ಆದರೆ ಈ ಸುಡುಬೇಸಿಗೆಯಲ್ಲಿ ಹಳ್ಳಿಯ ಜನರಿಗೇನು ಕೆಲಸ? ಬಹುತೇಕ ಜನರು

ಎಳಬಿಸಿಲಿನಲ್ಲಿಯೇ ಸಣ್ಣ ಪುಟ್ಟ ದುರಸ್ತಿ ಕೆಲಸಗಳನ್ನು ಮುಗಿಸಿಕೊಂಡು ಮನೆಗೆ ಹೋಗಿಬಿಟ್ಟಿರುತ್ತಾರೆ. ಯಾರಿಗೂ ಈಗ ಕೆಲಸ ಇಲ್ಲ. ಆದ್ದರಿಂದಲೇ ಇಲ್ಲಿ ಯಾರದೂ ಸದ್ದಿಲ್ಲ ಅಥವಾ ಸುಳಿವಿಲ್ಲ.

ಸುಳ್ಳ ಸುಳ್ಳ ಗಾಳಿ ಹಾಕಿತ ಸಿಳ್ಳು
ಕಾಗಿ ಚುಂಚಿನ ಹಳ್ಳು
ಬಿದ್ದು ಅಂತ್ಯು "ಹೊಳ್ಳು"
ಮೈಚಾಚ್ಯ'ದ ಹುಣಸಿಯ ನೆಳ್ಳು॥ ಹೂತ'ದ

ಹುಣಸಿ ಮರದ ಎಲೆಗಳಲ್ಲಿ ಹಾಯ್ದು ಹೋಗುವಾಗ ಅದರಿಂದ ಉಂಟಾಗುವ ಧ್ವನಿ ಸಿಳ್ಳಿನಂತೆ ಕೇಳಿಸುತ್ತದೆ ಆದುದರಿಂದ ಬೇಂದ್ರೆ ಇದನ್ನು ಸುಳ್ಳು ಸುಳ್ಳ ಸಿಳ್ಳು ಎಂದು ಬಣ್ಣಿಸಿದ್ದಾರೆ. ಈ ಸಿಳ್ಳಿನ ಪರಿಣಾಮವಾಗಿ ಮರದ ಕೊಂಬೆಯ ಮೇಲೆ ಕುಳಿತ್ತಿದ್ದ ಕಾಗೆಯೊಂದು ಬೆಚ್ಚಿ ಬೀಳುತ್ತದೆ. ಅದು ಚುಚ್ಚಿನಲ್ಲಿ ಹಿಡಿದು ಕೊಂಡಂತಹ ಸಣ್ಣ ಹಳ್ಳೊಂದು ದಪ್ಪನೆ ಕೆಳಗೆ ಬೀಳುತ್ತದೆ. ಬಿದ್ದ ಹಳ್ಳು ನೆಟ್ಟಗೆ ನಿಲ್ಲಲಾರದೆ ಹೊರಳುತ್ತದೆ. ಇಂತಹ ಸಣ್ಣ ಘಟನೆಯೂ ಸಹ ನಮ್ಮ ನಾಯಕನ ಅರಿವಿನಲ್ಲಿ ಮೂಡುತ್ತದೆ. ಹುಣಸಿ ಮರದ ನೆರಳೂ ಸಹ ಮೈಚಾಚಿ ಮಲಗಿಕೊಂಡಿವೆ. ಅಂದರೆ ಜಗತ್ತೆಲ್ಲಾ ಬಿಸಿಲಿನ ಧಗೆಯನ್ನು ಪರಿಹರಿಸಿಕೊಳ್ಳಲು ಒರಗಿಕೊಂಡಿದೆ.

ಅಡ್ಡಾಗತೇನಿ ನೆಳ್ಳಾಗ ಹೀಂಗ
ಹೂವು ಚಿಗುರು ಹ್ಯಾಂಗ
ಅವs ಹಾಸಿಧಾಂಗ
ಹುಳಿ ಚಿಗುರು ನುರಿಸಿ ನಾ ದಂಗ ॥ಹೂತ'ದ

ಇದೇ ಹುಣಸಿಯ ಮರದ ನೆರಳಿನ ಕೆಳಗೆ ತಾನು ಮಲಗಬೇಕೆನ್ನುವ ಯೋಚನೆ ಅವನಲ್ಲಿ ಬರುತ್ತದೆ. ಮರದ ಕೆಳಗೆ ಒರಗಿದಾಗ, ಮರದ ತುಂಬೆಲ್ಲಾ ಹರಡಿದ ಹೂವು ಹಾಗೂ ಚಿಗುರು ತನ್ನ ಮೇಲೆಯೇ ಹಾಸಿದಂತೆ ಕಾಣುತ್ತದೆ. ಅಲ್ಲಿ ಒರಗಿದಂತೆಯೇ ಹುಳಿ ಹುಳಿ ಚಿಗುರನ್ನು ತಿನ್ನುತ್ತಾ ಆ ಕಡುರುಚಿಗೆ ಆತ ಮರಳಾಗುತ್ತಾನೆ.

ವಿಶಾಲವಾದ ಈ ಬಯಲು ಪ್ರದೇಶದಲ್ಲಿ ಈ ಬಿಸಿಲಿನ ಜಳಕ್ಕೆ ದೂರದಲ್ಲಿ ಮೃಗಜಲದ ಅಭಾಸವಾಗುವುದು ಸಹಜ. ನಮ್ಮ ಕವನದ ನಾಯಕನ ಕಣ್ಣಿಗೂ

[illegible]

[illegible]

[illegible]

[illegible]

[illegible]

ಇದು ಬೀಳುತ್ತದೆ. ಆದರೆ ಆರಾಮವಾಗಿ ಮಲಗಿಕೊಂಡಿರುವ ನಮ್ಮ ನಾಯಕ ಮೃಗಜಲಕ್ಕೆ ಗಮನ ಹರಿಸುವುದಿಲ್ಲ. ಆತನಿಗೆ ಬೇಕಾದಷ್ಟು ಪ್ರೀತಿ ನೀರು.

ಬಿಸಿಲ್ಗುದರಿ ಕುಣಿಯಲಿ ದೂರ
ಯಾರಿಗೆ ಬೇಕು ನೀರ
ಹೀಂಗ ನನ್ನಿದಿರ
ಕಣ್ಣಳತಿಯೊಳಗ ನೀ ಬಾರ॥ಹೂತ'ದ

ನಾಯಕ ತನ್ನ ಗೆಳತಿಯನ್ನು ಕಣ್ಣಳತಿಯೊಳಗೆ ಬಾ ಎಂದು ಕರೆಯುತ್ತಾನೆ. ಇದು ಪ್ರಕೃತಿಯ ಆಸ್ವಾದನೆಯಾಗಿದೆ.

ಹಾರತಿರಲಿ ಗಾಳಿಗೆ ಬಿಚ್ಚಿದ್ದೆರಳು
ವಾರಿಯಿರಲಿ ಕೊರಳು
ಬಾಚತಿರಲಿ ಬೆರಳು
ನೋಡ್ತೇನಿ ನಿನ್ನ ಕವಿನೆರಳು॥ಹೂತ'ದ

ಬಿಸಿಲಿನಿಂದ ಏಳುತ್ತಿರುವ ಬಯಲ ಸೀಮೆಯ ಗಾಳಿಗೆ ಅವಳ ಬಿಚ್ಚಿದ ಹೆರಳು ಹಾರಾಡುತ್ತಿರುವುದನ್ನು ಈತ ಕಲ್ಪಿಸಿಕೊಳ್ಳುತ್ತಾನೆ. ಆ ಹಾರುತ್ತಿರುವ ಕೂದಲನ್ನು ಸರಿಪಡಿಸಿಕೊಳ್ಳಲು ಅವಳು ಕೊರಳನ್ನು ಕೊಂಕಿಸಿ, ತನ್ನ ಬೆರಳುಗಳಿಂದ ಬಾಚಿಕೊಳ್ಳುವುದನ್ನು ಆತ ಮನಸ್ಸಿನಲ್ಲಿಯೇ ಚಿತ್ರಿಸಿಕೊಳ್ಳುತ್ತಾನೆ. ಎಂದರೆ ಗಾಳಿ ಹೇಗೆ ಎತ್ತೆತ್ತಲೋ ಬೀಸುವುದೋ ಅದೇ ತೆರದಲ್ಲಿ ಈತನ ಚಿತ್ತವು ಸಹ ಹಗಲುಗನಸ್ಸಿನಲ್ಲಿ ಎತ್ತೆತ್ತಲೋ ಹರಿಯುತ್ತದೆ.

ಅಗೊ ಗಾಳಿ ಧೂಳಿಯಾ ಬಂಬಾ
ನಿಂತ್ಹಾಂಗ ಅದ ಖಂಬಾ
ಅಲ್ಲಿ ರೌದಿ ತುಂಬಾ
ಗಣಿ ಕುಣೀದಾಂಗ ಡೊಂಬರ ರಂಭಾ॥ಹೂತದ

ಸುಂಟರಗಾಳಿಯು ಸೃಷ್ಟಿಸಿದ ಧೂಳಿಯ ಬಂಬು ನಾಯಕನ ಕಣ್ಣಿಗೆ ಗಾಳಿಯ ಕಂಬವೊಂದು ನಿಂತುಕೊಂಡಂತೆ ಕಾಣುತ್ತದೆ. ಈ ಗಾಳಿಗಂಬದ ತಿರುವಿಕೆಯು ಇವನ ಕಣ್ಣಿಗೆ 'ದೊಂಬರ ರಂಬೆ' ಕುಣಿದಂತೆ ಕಾಣುವುದು.

ಈ ರೀತಿಯಾಗಿ ಗಾಳಿಯ ಬೊಂಬು ಕುಣಿಯುವ ರಂಭೆಯಾಗಿದೆ. ಇದು ಕವಿಯ ಮನೋಧರ್ಮವಾಗಿದೆ.

ಈ ರೀತಿಯಾಗಿ ದೂರಕ್ಕೆ ಹರಿದ ಇವನ ದೃಷ್ಟಿಯು ಅಲ್ಲಲ್ಲಿ ಹರಿದಾಡುತ್ತ ಮತ್ತೆ ತನ್ನ ಹತ್ತಿರದ ಹುಣಸಿ ಮರದ ಸನಿಹಕ್ಕೆ ಬರುವುದು ಅಲ್ಲಿ ಮರದ ಮೇಲ್ಭಾಗದಲ್ಲಿ ಇವನಿಗೆ ಪಾರಿವಾಳದ ಜೋಡಿಯೊಂದು ಕಾಣುವುದು. ಬಿಸಿಲು, ಮಳೆ, ಚಳಿ ನಿಸರ್ಗದ ಶಿಶುಗಳಾದ ಪ್ರಾಣಿ ಪಕ್ಷಿಗಳಿಗೆ ಈ ವೈಪರೀತ್ಯದ ಪರಿವೆಯೇ ಇಲ್ಲ.

ಮ್ಯಾಲೆ ಅಲ್ಲಿ ಪಾರಿವಾಳ ಜೋಡಿ
ಒಂದಕ್ಕೊಂದ ನೋಡಿ
ಬಿಸಿಲ ತೆರೆ ದೂಡಿ
ಹಾರ್ತ'ದ ನೀಲಿಮುಗಿಲ್ಕೂಡಿ ॥ ಹೂತ'ದ

ಪಾರಿವಾಳದ ಜೋಡಿಯು ಪ್ರೇಮದ ಸಂಕೇತವೇ ಆಗಿದೆ. ಇವುಗಳ ಗೆಳತನವನ್ನು ನೋಡಿ, ಅವು ಕ್ಷಣ ಬಿಟ್ಟು ಕ್ಷಣ ಗೋಣು ಹೊರಳಿಸುತ್ತ ಒಂದನ್ನೊಂದು ನೋಡುತ್ತಲೇ ಇರುತ್ತವೆ. ಈ ಬಿಸಿಲ ಭಾದೆ ತಮಗೆ ಏನೂ ಅಲ್ಲ ಎಂಬಂತೆ ಬಿಸಿಲಿನ ತೆರೆಯನ್ನು ದೂಡಿ ಹಾರುತ್ತವೆ ಎಲ್ಲಿಗೆ? ಬೇಸಿಗೆಯ, ನೀಲಿ ಆಕಾಶಕ್ಕೆ.

ಅವು ಎಷ್ಟು ಸಮರೂಪವಾಗಿ ಹಾರುತ್ತಿದೆ ಎಂದರೆ ಅವುಗಳ ಹಾರಾಟವನ್ನು ಪ್ರತ್ಯೇಕಿಸದೆ, 'ಹಾರುತಿದೆ ಜೋಡಿ ಕೂಡಿ' ಎಂದು ಬಣ್ಣಿಸಲಾಗಿದೆ. ಹಾರುತ್ತಿರುವ ಜೊಡಿಯನ್ನು ಕಂಡಾಗ. ನಮ್ಮ ನಾಯಕನೂ ಸಹ ಮುಗಿಲನ್ನೂ ನಿಟ್ಟಿಸುತ್ತಾನೆ. ನೀಲಿ ಬಣ್ಣದ ಆ ಡುಬ್ಬರಿಯು ಆತನಿಗೆ ನೀರಿನ ಕೊಳದಂತೆ ಕಾಣುವುದು.

ಕಂಡಂಗಾತು ನೀರಿನ ಕೊಳ
ನೀಲ ಮುಗಿಲ ಜಳಾ
ಎಂಥ ಝುಳ ಝುಳಾ
ಮುಳುಮುಳಿಗೆ ಹೋತು ಮನದ ಧೂಳಾ।ಹೂತ'ದ

ಡುಬರಿಬಿದ್ದ ನೀಲಿ ಆಕಾಶವು ಇವನಿಗೆ 'ಜಳಾ' ಅಂದರೆ 'ಜಲ' ದಿಂದ ತುಂಬಿದ ಕೊಳದಂತೆ ಕಾಣುವುದು. ಈ ನೀಲಾಕಾಶವೂ ಸಹ ಸ್ವಚ್ಛವಾದ ನೀರಿನ ಕೊಳದಂತೆ 'ಜಳಜಳ'ವಾಗಿ ಆತನಿಗೆ ತೋರುವುದು. ಈ ರೀತಿ ಸಮಯ ಸಾಗುತ್ತಿರಲು ಮನಸ್ಸಿನ ಎಲ್ಲಾ ಚಿಂತನೆಗಳು ಮಾಯವಾಗಿ ಸೂನ್ಯ ಮನೋಸ್ಥಿತಿಯನ್ನು ಈತ ಮುಟ್ಟುತ್ತಾನೆ.

ಕಾಲ ಹೋಗುತ್ತಿತ್ತ ಹಿಂದ ಸರಿದು
ಮನಸು ಆತ ಬರಿದು
ಮಧ್ಯಾನ್ ಬ್ಯಾಸರ ಮುರಿದು
ಬಿಸಿಲ ತಾನ, ಹೋಗುತ್ತಿತ್ತ ಹರಿದು॥ ಹೂತ'ದ

ಬಿಸಿಲು ಕಾಲದ ಮಧ್ಯಾಹ್ನದಲ್ಲಿ ಏನೂ ಕೆಲಸವಿಲ್ಲದೆ ರಣ ರಣ ಹೊಡೆಯದ ಬಿಸಿಲಿನಿಂದ ಬೇಸರಗೊಂಡ ಈತನ ಮನಸ್ಸು ಹೂತ ಹುಣಿಸಿಮರವನ್ನು ಕಂಡ ಬಳಿಕ, ವಿಲಾಸದಲ್ಲಿ ತೊಡಗಿ ಕೊನೆಗೆ ಅಲೆಗಳಿಲ್ಲದ ಸರೋವರದಂತಹ ನಿರ್ಭಾವವನ್ನು ಮುಟ್ಟುತ್ತದೆ. ಇದೇ ರೀತಿ ಕಾಲ ಸರಿದು ಹೋಗುತ್ತಿದೆ. ಬಿಸಿಲು ಹರಿದು ಹೋಗುತ್ತಿದೆ ಮನಸ್ಸು ನಿರಾಳ ಸುಖವನ್ನು ಅನುಭವಿಸುತ್ತಿದೆ.

ಪ್ರಕೃತಿಯಲ್ಲಿ ಭಾವಸಮಾಧಿ ಹೊಂದುವ ಇಂತಹ ಮನೋಸ್ಥಿತಿಯು ಸಮಾಧಾನ ಚಿತ್ತವುಳ್ಳ ವ್ಯಕ್ತಿಗೆ ಮಾತ್ರ ಸಾಧ್ಯ. ಇವನೇ ನಿಜವಾದ ಕವಿ ಹೃದಯ ಉಳ್ಳವನು. ಅದಕ್ಕೆಂದೇ ಈ ಕವನದ ಕೊನೆಯ ವಾಕ್ಯವನ್ನು ಬೇಂದ್ರೆ ಈ ರೀತಿ ಹೇಳುತ್ತಾರೆ.

ಕವಿ ಜೀವನ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ?
ಒಂದು ಹೂತ ಹುಣಸಿಮರ ಸಾಕ ॥ಹೂತ'ದ

ಕವಿ ಜೀವದ ಬೇಸರವು ಹರಿದ ಬಳಿಕ, ಕವಿಯ ಸುಖವು ಹಾಡಿನ ರೂಪದಲ್ಲಿ ಹೊರಹೊಮ್ಮಿದೆ ಹಾಗೆಯೇ ಕವಿಯೂ ಓದುಗನಿಗೆ ಸುಖ ನೀಡುವುದು ಬೇಂದ್ರೆಯವರ ಪ್ರಕೃತಿ ಚಿತ್ರ ಶಕ್ತಿಯು ಅದ್ಭುತವಾಗಿ ಮೂಡಿಬಂದಿದೆ.

ಹೀಗೆ ಬೇಂದ್ರೆಯವರ ಇತರೆ ಪ್ರಕೃತಿ ಗೀತೆಗಳಾದ ಎರಡು ನಕ್ಷತ್ರ, ಚಂದ್ರಬಿದಿಗೆ ಚಂದ್ರ ಬಂದ ನೋಡು, ಮಲ್ಲಿಗೆ ಹೂವೆ, ಮೋಡ, ಮಿಂಚು, ಹುಬ್ಬಿಮಳೆ, ಹೀಗೆ ಇನ್ನೂ ಮುಂತಾದ ಸುಮಾರು ಐನೂರಕ್ಕೂ ಹೆಚ್ಚು ಪ್ರಕೃತಿ ಗೀತೆಗಳನ್ನು ಔದುಂಬರ ಗಾಥೆ ದ.ರಾ.ಬೇಂದ್ರೆ ಜೀವನ ಮಹಾ ಕಾವ್ಯದಲ್ಲಿ ಕಾಣಬಹುದಾಗಿದೆ.

ಉಪಸಂಹಾರ

ಬೇಂದ್ರೆಯವರ ಭಕ್ತಿ, ಅನುಭವ, ಅನುಭಾವಗಳ ಅಭಿವ್ಯಕ್ತಿ. ಅವರ ವೈದಿಕ ಮೂಲದ್ದು. ತಾನು 'ವೇದವಿತ್ ಕವಿ' ಎಂದು ಅವರೇ ಹೇಳಿಕೊಂಡಿದ್ದಾರೆ. ಅವರು ಮನಸಾರೆ ಮೆಚ್ಚಿಕೊಂಡು ಪ್ರಕೃತಿ ಒಲವಿನಲ್ಲೂ ಆಧ್ಯಾತ್ಮದ ಧ್ವನಿಗಳನ್ನು ಗುರುತಿಸಿದ್ದಾರೆ. ಭೂಮಿ, ಆಕಾಶ, ಬೆಟ್ಟ, ಗುಡ್ಡ, ಬಯಲು, ಪ್ರಸ್ಥಭೂಮಿ, ನದಿ, ಪ್ರವಾಹ, ಅಗ್ನಿ, ವಾಯು, ವರುಣ, ಸೂರ್ಯ, ಚಂದ್ರ, ಹೂ, ಮರ, ಬಳ್ಳಿಗಳೆಲ್ಲಾದರಲ್ಲೂ ದೈವೀ ಅಂಶವನ್ನು ಕಂಡಿದ್ದಾರೆ. ವೇದದ ದೇವತೆಗಳೇ ಪ್ರಕೃತಿಯ ಶಕ್ತಿಗಳು ಎಂದುಕೊಂಡಿದ್ದು. ಅವು ಅವರು ಕವನದ ಕೇಂದ್ರ ಬಿಂದುಗಳಾಗಿವೆ. ಪ್ರಕೃತಿಯಲ್ಲಿನ ಚೈತನ್ಯವನ್ನು ಗುರುತಿನ ಆ ಪ್ರಕೃತಿ ವಸ್ತುಗಳನ್ನು ತಂದೆ ತಾಯಿಗಳಾಗ ಕಂಡಿರುವುದು ಕವಿಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ಬೇಂದ್ರೆಯವರ ಕಾಲಘಟ್ಟ ಅತ್ಯಂತ ಮಹತ್ವಸ್ಥಾನವನ್ನು ಪಡೆದುಕೊಂಡ ಕಾಲಘಟ್ಟವಾಗಿದ್ದು ಬೇಂದ್ರೆಯವರನ್ನೂ ಒಳಗೊಂಡಂತೆ ಇತರ ನವೋದಯ ಕವಿಗಳ ಮೇಲೆ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಪ್ರಭಾವವಿದ್ದರೂ ಅದನ್ನು ಮೀರಿನಿಂತು ಬೆಳದು ಕನ್ನಡ ನಿಸರ್ಗ ಕಾವ್ಯಕ್ಕೆ ಹೊಸ ಆಯಾಮವನ್ನು ಸೃಷ್ಟಿಸಿದ್ದಾರೆ. ಅವರುಗಳಲ್ಲಿ ಬೇಂದ್ರೆಯವರೂ ಸಹ ಒಬ್ಬರಾಗಿದ್ದು. ಅವರ ಪ್ರಕೃತಿ ಕವಿತೆಗಳಲ್ಲಿ ಅವರೂ ಸಹ ಒಂದು ಪ್ರತಿಮೆಯಾಗಿ ಮೃತಾಳಿರುವ ಬಗೆ ಅತ್ಯಂತ ವಿಶಿಷ್ಟವಾಗಿದೆ.

ಬೇಂದ್ರೆಯವರು ತಮ್ಮ ಜೀವನದಲ್ಲಿ ಹಲವಾರು ಸುಖದುಃಖಗಳನ್ನು ಅನುಭವಿಸಿದ ಘರ್ಷಣೆಗಳ ಅರಿವೇ ಅವರ ಸಾಹಿತ್ಯ ಕೃಷಿಗೆ ಪ್ರೇರಣೆ ಎನ್ನಬಹುದು. ಬೇಂದ್ರೆಯವರೇ ತಮ್ಮ ಸಾಹಿತ್ಯ ವಿರಾಟ್ ಸ್ವರೂಪದಲ್ಲಿ ಹೀಗೆ ಹೇಳಿಕೊಂಡಿದ್ದಾರೆ. "ಪ್ರಕೃತಿ ಹೆಚ್ಚಿನ ಸಂಸ್ಕೃತಿಯ ಭೂಮಿಕೆಗೆ ದಾರಿ ಅಲ್ಲ ಅಚಲ ಪ್ರತಿಷ್ಠೆಯನ್ನು ಪಡೆಯುವವರೆಗೆ ವಿಕೃತಿಯ ಸಹವಾಸವೂ, ಸಂಘರ್ಷವೂ ತಪ್ಪಿದ್ದಲ್ಲ," ಇಂತಹ ದೃಷ್ಟಿಯಿಂದಲೇ ಕವಿ ಬೇಂದ್ರೆಯವರು ಪ್ರಕೃತಿಯ ಸೌಜನ್ಯ ಮತ್ತು ದೌರ್ಜನ್ಯಗಳೆರಡನ್ನೂ ಅವರ ಗೀತೆಗಳಲ್ಲಿ ಬಿಂಬಿಸಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಬೇಂದ್ರೆಯವರ ಕೊಡುಗೆ ಅಪಾರ. ಅವರು ರಚಿಸಿದ ಪ್ರಕೃತಿ ಗೀತೆಗಳಲ್ಲಿ ಮುಖ್ಯವಾಗಿ ಸೂರ್ಯೋದಯದ ಗೀತೆಗಳು ಕಡಿಮೆಯೇ ಆದರು ಅವು ಬೀರಿದ ಪ್ರಭಾವ ಅಪಾರ ಅವರು ರಚಿಸಿರುವ 'ಬೆಳಗು' ಅವನ (ಮೂಡಲ ಮನೆಯ ಮುತ್ತಿನ ನೀರಿನ...) ಇಂದಿಗೂ ಕನ್ನಡ ಸಾಹಿತ್ಯದಲ್ಲಿ ಮುಂಜಾನೆಯ ಸೂರ್ಯನಂತೆ

ಪ್ರಕಾಶಿಸುತ್ತದೆ ಎಂದರೆ ತಪ್ಪಾಗಲಾರದು. ಹಾಗೂ ಜನ ಸಾಮಾನ್ಯರ ಬಾಯಲ್ಲಿಯೂ ಸಹ ಬೆಳಗಿನ ಜಾವದ ಸೂರ್ಯೋದಯದ ದೃಶ್ಯವನ್ನು ನೋಡುತ್ತಿದ್ದಂತೆಯೇ ಎಲ್ಲರ ಮನೆ, ಮನಗಳಲ್ಲೂ ಗುಣಗಾನವಾಗುತ್ತಿರುತ್ತದೆ. ಹಾಗೆಯೇ ಅವರ ಇನ್ನೂ ಹಲವು ಸೂರ್ಯೋದಯ ಗೀತೆಗಳು ಈ ಸಂಪ್ರಬಂಧದಲ್ಲಿ ವಿಶ್ಲೇಷಿಸಿ ಅದರ ವಿಸ್ತಾರವನ್ನು ಪರಿಚಯಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಶ್ರಾವಣ ಕವಿ ಎಂದೇ ಪ್ರಸಿದ್ಧಿಯನ್ನು ಪಡೆದಿರುವವರು ಕವಿ ಬೇಂದ್ರೆ ಮಾತ್ರ. ಅವರಷ್ಟು ಶ್ರಾವಣ ಮಾಸದ ಬಗೆಗಿನ ಕವಿತೆಯನ್ನು ಬರೆದವರು ಮತ್ತಾರೂ ಇಲ್ಲ. ಶ್ರಾವಣ ಮಾಸ ಅವರ ಜೀವನದಲ್ಲಿ ಅಪಾರ ಪ್ರಭಾವವನ್ನು ಬೀರಿದ್ದು ದೈವೀಕತೆ, ಪ್ರಕೃತಿಯ ಸೊಬಗು ಹಾಗೂ ಅವರ ಸ್ವಗ್ರಾಮವಾದ ಸಾಧನೆ ಕೇರಿಯ ವರ್ಣನೆಯನ್ನೆಲ್ಲಾ ಸೆರೆಹಿಡಿದಿದ್ದಾರೆ. ಅವರ ಶ್ರಾವಣ ಬಂತು ಕಾಡಿಗೆ ಕವನ ಅತ್ಯಂತ ವಿಶಿಷ್ಟವಾಗಿ ಮೂಡಿ ಬಂದಿದ್ದು ಶ್ರಾವಣ ಮಾಸದ ಪ್ರವೇಶವಾಗುತ್ತಿದ್ದಂತೆಯೇ ಇವರ ಕವನಗಳ ಸಾಲುಗಳು ಮರುಕಳಿಸುತ್ತಿವೆ. ಅವರ ಕವನದ ಪ್ರತಿಯೊಂದು ಸಾಲಿಗೂ ಜೀವವಿರುವುದನ್ನು ಮನಗಾಣಲಾಗಿದೆ.

ಪ್ರಕೃತಿ ಹಾಗೂ ಬೇಂದ್ರೆಯವರ ನಡುವೆ ವರ್ಣನೆಗೆ ಮೀರಿದ ಸಂಬಂಧವೊಂದು ಜೀವಂತವಿದೆ. ಪ್ರಕೃತಿಯ ಭಾವ ಸಂಚಾರಕ್ಕೂ ಮಾನವ ಭಾವ ಸಂಚಾರಕ್ಕೂ ಅವರು ಮಾಡುವ ಹೊಂದಾಣಿಕೆಯು ಅವರನ್ನು ನಿಜವಾದ ಅರ್ಥದಲ್ಲಿ ಪ್ರಕೃತಿ ಕವಿಯನ್ನಾಗಿ ಮಾಡಿಸಿದೆ. ಅವರ ಅನೇಕ ಕವನಗಳಲ್ಲಿ ಪ್ರಕೃತಿಯ ಮಾನುಷೀಕರಣವಿದೆ. ಹಲವೆಡೆಗಳಲ್ಲಿ ಪ್ರಕೃತಿಯ ದೈವೀಕರಣವನ್ನೂ ಸಹ ಕಾಣಬಹುದು ಹಾಗಾಗಿ ಅವರ ಸಖೀಗೀತದಲ್ಲಿಯೂ ಸಹ ಈ ಮಾತಿಗೆ ಹೊರತಾಗಿಲ್ಲ.

ಬೇಂದ್ರೆಯವರಲ್ಲಿನ ನಿಸರ್ಗವನ್ನು ಕುರಿತಾದ ಕಳಕಳಿ ಇಂದು ಸಾಮಾಜಿಕ ಕಳಕಳಿಯ ಒಂದು ಅಂಗವಾಗಿದ್ದು, ಪರಿಸರ ಸಂರಕ್ಷಣೆಯ ಅಗತ್ಯವಿರುವ ಇಂದಿನ ದಿನಗಳಲ್ಲಿ ಅವರ ಕವನಗಳು ಧ್ವನಿಸುತ್ತವೆ.

ನಮ್ಮ ಇತ್ತೀಚೆಗಿನ ಪರಿಸರ ಬೆಳೆಯುತ್ತಿರುವ ನಗರೀಕರಣ ಜಾಗತೀಕರಣ, ಖಾಸಗೀಕರಣ, ಯಾಂತ್ರೀಕರಣ, ಕಾಡಿನ ನಾಶ, ಕೈಗಾರಿಕೀಕರಣ, ಬರಗಾಲ, ಪ್ರವಾಹಗಳಿಂದ ದಿನದಿನಕ್ಕೂ ಕಲುಷಿತಗೊಳ್ಳುತ್ತಿದೆ. ಪ್ರತಿಯೊಂದು ಪ್ರಕೃತಿ ಜೀವಿಯೂ ಸಹ ವಿನಾಶದ ಅಂಚಿನತ್ತ ಸಾಗುತ್ತಿವೆ. ಈ ಸಂದರ್ಭದಲ್ಲಿ ಬೇಂದ್ರೆಯವರ ಪ್ರಕೃತಿ ಗೀತೆಗಳನ್ನು ಅಧ್ಯಯನ ಮಾಡುವುದರಿಂದ ನಮ್ಮಲ್ಲಿ ಪರಿಸರ ಪ್ರಜ್ಞೆಯು ಮೂಡುತ್ತಿದೆ. ನಮ್ಮನ್ನು ಪ್ರಕೃತಿ ಮುಖಿಗಳನ್ನಾಗಿ ಮಾಡುತ್ತದೆ. ಪ್ರಕೃತಿ ಬಗೆಗಿನ ವಿಶೇಷವಾದ

ಗೌರವವನ್ನು ತಾಳುವಂತೆ ಮಾಡುತ್ತದೆ. ನಮ್ಮನ್ನು ಪ್ರಕೃತಿ ಆರಾಧಕರಂತೆ ಮಾಡುತ್ತದೆ. ಪ್ರತಿಯೊಂದು ಪರಿಸರ ವಸ್ತುವಿಗೂ ಜೀವವಿದೆ. ದೈವಾಂಶವಿದೆ ಎಂಬುದನ್ನು ತಿಳಿಸುತ್ತದೆ. ಹಾಗೂ ಜೀವನದಲ್ಲಿ ಆರೋಗ್ಯ ಮತ್ತು ಸಂತೋಷದ ಮೂಲನೆಲೆ ಪ್ರಕೃತಿಯೇ ಆಗಿದೆ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಹಾಗಾಗಿ ಬೇಂದ್ರೆಯವರ ಪ್ರಕೃತಿ ಗೀತೆಗಳ ಅಧ್ಯಯನ ಇಂದು ಪ್ರಸ್ತುತ ಹಾಗೂ ಮಹತ್ವ ಪೂರ್ಣವಾದುದ್ದಾಗಿದೆ.

ಬೇಂದ್ರೆಯವರ ಸಮಗ್ರ ಕಾವ್ಯ ತುಂಬಾ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ಅವರ ಕಾವ್ಯದಲ್ಲಿ ಪ್ರಕೃತಿ ತುಂಬಾ ಆಳವಾದ ವಿಷಯವಾಗಿದೆ. ಇದು ಪ್ರೌಢ ಪ್ರಬಂಧಕ್ಕೆ ಸಂಬಂಧಿಸಿದ ವಿಷಯವಾಗಿದೆ. ಆದರೆ ನಾನು ಈ ಸಂಪ್ರಬಂಧವನ್ನು ತಯಾರಿಸಲು "ಬೇಂದ್ರೆಯವರ ಕವನಗಳಲ್ಲಿ ಪ್ರಕೃತಿ" ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ನನಗೆ ಲಭ್ಯವಾದ ಮಾಹಿತಿಯ ಪ್ರಕಾರ ಈ ಪ್ರಬಂಧವನ್ನು ರಚಿಸಿದ್ದೇನೆ. ಇದು ನನ್ನ ಪ್ರಿಯ ಸ್ನೇಹಿತರಿಗೆ ಹಾಗೂ ಆತ್ಮೀಯ ಸಂಶೋಧಕರಿಗೆ ಅನುಕೂಲವಾಗುತ್ತದೆಂದು ಭಾವಿಸಿ ಈ ಅಧ್ಯಯನ ನಡೆಸಿ ಸಂಪ್ರಬಂಧ ತಯಾರಿಸಿದ್ದೇನೆ.

ಪರಾಮರ್ಶನ ಗ್ರಂಥಗಳು

೧) ಔದುಂಬರಗಾಥೆ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ ಸಂಪುಟ.೧, ಸಂಪಾದಕರು ಡಾ.ವಾಮನಬೇಂದ್ರೆ, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೨) ಔದುಂಬರಗಾಥೆ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ ಸಂಪುಟ.೨, ಸಂಪಾದಕರು ಡಾ.ವಾಮನಬೇಂದ್ರೆ, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೩) ಔದುಂಬರಗಾಥೆ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ ಸಂಪುಟ.೩, ಸಂಪಾದಕರು ಡಾ.ವಾಮನಬೇಂದ್ರೆ, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೪) ಔದುಂಬರಗಾಥೆ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ ಸಂಪುಟ.೪, ಸಂಪಾದಕರು ಡಾ.ವಾಮನಬೇಂದ್ರೆ, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೫) ಔದುಂಬರಗಾಥೆ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ ಸಂಪುಟ.೪, ಸಂಪಾದಕರು ಡಾ.ವಾಮನಬೇಂದ್ರೆ, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೬) ಔದುಂಬರಗಾಥೆ ದ.ರಾ.ಬೇಂದ್ರೆ ಜೀವನ ಮಹಾಕಾವ್ಯ ಸಂಪುಟ.೫, ಸಂಪಾದಕರು ಡಾ.ವಾಮನಬೇಂದ್ರೆ, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೭) ಸೌಂದರ್ಯ ಸಮೀಕ್ಷೆ, ಜಿ.ಎಸ್. ಶಿವರುದ್ರಪ್ಪ

೮) ಭುವನದ ಭಾಗ್ಯ, ಬೇಂದ್ರೆ ಸಾಹಿತ್ಯ ಸಮೀಕ್ಷೆ, ಜಿ.ಎಸ್.ಆಮೂರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪ್ರ. ೧೯೯೬.

೯) ಕನ್ನಡದಲ್ಲಿ ಭಾವಗೀತೆ, ಪ್ರಭುಶಂಕರ, ನಿವೇದಿತಾ ಪ್ರಕಾಶನ, ಮಾನಸ ಗಂಗೋತ್ರಿ, ಕ್ವಾಟ್ರಸ್, ಮೈಸೂರು, ಪ್ರ. ೧೯೯೬.

೧೦) ಬೇಂದ್ರೆ ಮತ್ತು ಅಡಿಗರ ಕಾವ್ಯ, ಸುಮತೀಂದ್ರ ನಾಡಿಗ, ಸ್ವಪ್ನಬುಕ್ ಹೌಸ್, ೩ನೇ ಮುಖ್ಯರಸ್ತೆ, ಗಾಂಧೀನಗರ, ಬೆಂಗಳೂರು, ಪ್ರ. ೨೦೧೨.

೧೧) ಬೇಂದ್ರೆ ಸಾಹಿತ್ಯ ವಿಹಾರ, ಜಿ.ಎಸ್. ಭಟ್ (ಸಂ), ಚೇತನ್‌ಬುಕ್‌ಹೌಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು, ಪ್ರ. ೧೯೯೫.

೧೨) ಉತ್ತರ ದಕ್ಷಿಣ, ಬೇಂದ್ರೆ ಕುವೆಂಪು ಕವಿತೆಗಳ ಕುರಿತು, ಡಾ.ಎಸ್.ಜಗದೀಶ್ ಕೊಪ್ಪ, ಮಮತ ಪಬ್ಲಿಕೇಷನ್ಸ್, ಬೆಂಗಳೂರು, ಪ್ರ. ೨೦೦೯.

೧೩) ಬೇಂದ್ರೆ ಸಾಹಿತ್ಯ ಸಮಾಲೋಚನೆ, ಡಾ.ರಾಗೌ (ಸಂಪಾದಕರು) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪ್ರ. ೧೯೯೬.

೧೪) ಕುವೆಂಪು ಕಾವ್ಯದಲ್ಲಿ ಪ್ರಕೃತಿ ಒಂದು ಅಧ್ಯಯನ, ಡಾ. ಲತಾ ರಾಜಶೇಖರ್, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾಪರಿಷತ್ ಕವಿಶೈಲ ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು, ಪ್ರ. ೨೦೦೩.

೧೫) ಶಕ್ತಿ ಶಾರದೆ ಮೇಳ, ಡಿ.ಆರ್. ನಾಗರಾಜ, ಅಕ್ಷರ ಪ್ರಕಾಶನ, ಸಾಗರ, ೧೯೯೩.

೧೬) ದ.ರಾ.ಬೇಂದ್ರೆ, ಎನ್ಕೆ. ಕುಲಕರ್ಣಿ, ನವಕರ್ನಾಟಕ ಪಬ್ಲಿಕೇಷನ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು, ಪ್ರ. ೨೦೦೬.

೧೭) ಬೇಂದ್ರೆ ಒಳನೋಟ, ಡಾ.ಜೀವಿ ಕುಲಕರ್ಣಿ, ಪುರೋಗಾಮಿ ಸಾಹಿತ್ಯ ಪ್ರಕಾಶನ, ಪತ್ರಕರ್ತನಗರ, ನೃಪತುಂಗ ಚಿಟ್ಟು, ಹುಬ್ಬಳ್ಳಿ, ಪ್ರ.೨೦೧೦.

೧೮) ಮತ್ತೆ ಮತ್ತೆ ಬೇಂದೆ, ಕಿ.ರಂ.ನಾಗರಾಜ ಅವರ ಉಪನ್ಯಾಸ, (ಸಂ) ಅಕ್ಷತಾ.ಕೆ. ಆಹರ್ನಿಶಿ ಪ್ರಕಾಶನ, ಜ್ಯೋತಿರಾವ್ ಬೀದಿ, ೪ನೇ ತಿರುವು, ವಿದ್ಯಾನಗರ, ಶಿವಮೊಗ್ಗ, ಪ್ರ. ೨೦೧೦.

೧೯) ರಸ ಸರಸ್ವತಿ, ಪುತಿನ ಶಾರದಾಮಂದಿರ, ಮೈಸೂರು

೨೦) ಪಂಚಜನ್ಯ, ಕುವೆಂಪು, ಸಹ್ಯಾದ್ರಿ ಪ್ರಕಾಶನ

೨೧) ಆಧುನಿಕ ಕನ್ನಡ ಸಾಹಿತ್ಯ ಡಾ. ಶಾಂತಿನಾಥದೇಸಾಯಿ

೨೨)

೨೩) ಕುವೆಂಪುಸಂಚಯ, ಪ್ರಧಾನ ಸಂಪಾದಕರು: ಡಾ. ಪ್ರಧಾನ ಗುರುದತ್ತ

೨೪) ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಎಸ್.ಅನಂತನಾರಾಯಣ.

*****